
# ಕ್ಯಾಮರಾ ಎಂಜಿನಿಯರ್
# ಗುಲಾಂ ಮುಂತಕಾ

ದೇವು ಪತ್ತಾರ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಕ್ಯಾಮರಾ ಎಂಜಿನಿಯರ್

# ಗುರಾಂ ಮುಂತಕಾ

ದೇವು ಪತ್ತಾರ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ. ಸಿ. ರಸ್ತೆ

ಬೆಂಗಳೂರು- ೫೬೦ ೦೦೨

CAMERA ENGINEER - GULAM MUNTAKA : Written by Devu Pattar, 'Kirana Nilaya', Devi Colony, Bidar-585 401. M : 94484 70139

Publisher : Ashok N. Chalawadi
Administrative officer
Kannada Pustaka Pradhikara

© : Author

First Print : 2008
Pages : x + 91
Copies : 1000
Price : Rs. 45/-

ISBN : 81-7713-283-0

ಪ್ರಥಮ ಮುದ್ರಣ : ೨೦೦೮

ಗ್ರಂಥಸ್ವಾಮ್ಯ : ಲೇಖಕರು
ಈ ಆವೃತ್ತಿ ಮಾತ್ರ ಕನ್ನಡ ಪುಸ್ತಕ ಪ್ರಾಧಿಕಾರದ್ದು

ಪುಟಗಳು : x + ೯೧
ಪ್ರತಿಗಳು : ೧೦೦೦
ಬೆಲೆ : ರೂ. ೪೫/-

ಪ್ರಕಾಶನ : ಅಶೋಕ. ಎನ್. ಚಲವಾದಿ
ಆಡಳಿತಾಧಿಕಾರಿಗಳು,
ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ,
ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨.

ಕರಡು ತಿದ್ದಿದವರು : ಲೇಖಕರು

ಕಾಗದ : ಎನ್.ಎಸ್. ಮ್ಯಾಪ್‌ಲಿಥೋ, ೭೦ ಜಿ.ಎಸ್.ಎಮ್.

ಮುದ್ರಕರು :
ಪದ್ಮಶ್ರೀ ಪ್ರಿಂಟರ್ಸ್
ನಂ. ೧೨೩, ೧ನೇ 'ಕೆ' ಬ್ಲಾಕ್
ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ
ಬೆಂಗಳೂರು - ೧೦. ದೂರವಾಣಿ : ೨೩೫೫೫೯೦೪ / ೯೮೪೫೦೮೫೩೨೧

# ಪರಿವಿಡಿ


| | | |
|---|---|---|
| ೦೧ | ಸೋಜಿಗಗಳಲ್ಲಿ ಸೋಜಿಗ | ೧-೨ |
| ೦೨ | ಚೌಕಟ್ಟಿನಾಚೆಯ ಚಿತ್ರಗಳು | ೩-೫ |
| ೦೩ | ವಿಶ್ವದ ಅತಿದೊಡ್ಡ ನೆಗೆಟಿವ್ | ೬-೧೦ |
| ೦೪ | ಕ್ಯಾಮರಾ ಎಂಜಿನಿಯರ್ | ೧೧-೧೩ |
| ೦೫ | ಗುಜರಿಯಲ್ಲಿ ಸಿಕ್ಕ ಕ್ಯಾಮರಾ | ೧೪-೧೯ |
| ೦೬ | ನೆಹರು ಅವರ ಫೋಟೊ ತೆಗೆದ ಅನುಭವ | ೨೦-೨೩ |
| ೦೭ | ಬಾಲ್ಯದ ನೆನಪುಗಳು | ೨೪-೨೮ |
| ೦೮ | ಕ್ಯಾಮರಾ ಜೊತೆಗೇ ಬೆಳೆದ ಬದುಕು | ೨೯-೩೩ |
| ೦೯ | ವಿಕ್ಷಿಪ್ತ, ವಿಭಿನ್ನ, ಅನನ್ಯ | ೩೪-೩೬ |
| ೧೦ | ಜೇನು-ಶಿಕಾರಿ ಪ್ರಿಯ | ೩೭-೪೦ |
| ೧೧ | ನೆಲದ ಮೇಲಿನ ಪ್ರೀತಿ-ಮೋಹ | ೪೧-೪೩ |
| ೧೨ | ಕನ್ನಡ ಬಾರದ 'ಕನ್ನಡಿಗ' | ೪೪-೪೭ |
| ೧೩. | ಅನುಬಂಧ: ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನ/ವರದಿಗಳು | ೪೮-೬೫ |
| ೧೪. | ಚಿತ್ರಸಂಪುಟ | ೬೬-೯೧ |

# ಅಧ್ಯಕ್ಷರ ಮಾತು

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ನೆನಪಿನ ಪಾಠಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲಾ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನು ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅನುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರೀಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ

ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲಾ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮದ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಸ್ಥಿತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಿಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು, ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರಲೋಕ ಸೃಜನ ಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ

ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ –

ಹಿಂದಿಣ ಅನಂತವನು ಮುಂದಣ ಅನಂತವನು<br>
ಒಂದು ದಿನ ಒಳಕೊಂಡಿತ್ತು ನೋಡಾ<br>
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ<br>
ಕಂಡು ಬಲ್ಲವರಾರಯ್ಯ<br>
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ<br>
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಗಲ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೇನೆಂದರೆ, ಜೀವನ ವೈವಿಧ್ಯತೆಯ ಬಹುಮುಖಿ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು, ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ.

ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದಿಂದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿದ್ಯತೆಯನ್ನು ಸಂರಕ್ಷಿಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರೀಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತುದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ, ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಮರೆಯಲ್ಲಿರುವ ಮಹಾನುಭಾವರು ಮಾಲಿಕೆಯಲ್ಲಿ ಈಗಾಗಲೇ ಹಲವು ಗ್ರಾಮೀಣ ಪ್ರತಿಭೆಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಇವರು ಹೆಸರೊಲ್ಲದೆ ಎಲೆಮರೆಯ ಕಾಯಿಗಳಂತೆ ದುಡಿದ ಜೀವಗಳು. ಕಾಯಕ ಪ್ರಜ್ಞೆಯ ಭಾವದಲ್ಲಿ ದುಡಿಮೆಯನ್ನು ದೇವರೆಂದು ಗೌರವಿಸಿದವರು. ನಿಜವಾದ ಸಂಸ್ಕೃತಿ ನಿರ್ಮಾತೃಗಳಿವರು. ಇಂಥ ಮಾಲಿಕೆಗೆ ಈಗ ಈ ಪುಸ್ತಕ ಮತ್ತೊಂದು ಸೇರ್ಪಡೆ. ಶ್ರೀ ಗುಲಾಂ ಮುಂತಕಾ ಇವರ ಜೀವನ ಚಿತ್ರಣವನ್ನು ದೇವು ಪತ್ತಾರರು ರಚಿಸಿಕೊಟ್ಟಿದ್ದಾರೆ. ಗೆಳೆಯ ಪತ್ತಾರರಿಗೆ ಪ್ರಾಧಿಕಾರದ ಪರವಾಗಿ ಆತ್ಮೀಯ ಧನ್ಯವಾದಗಳು.

ಪ್ರೊ॥ ಎಸ್. ಜಿ. ಸಿದ್ಧರಾಮಯ್ಯ

# ನನ್ನ ಮಾತು

ತಲೆಮೇಲೆ ಮಕ್ಕಲ್ ಟೋಪಿ ಧರಿಸಿದ್ದ ವಯೋವೃದ್ಧ ಗಡ್ಡಧಾರಿಯನ್ನು ನೋಡಿ ಯಾರೋ 'ಕರ್ಮಠ' ಮುಸ್ಲಿಂ ಇರಬಹುದು ಎಂದು ಕೊಂಡಿದ್ದೆ. ಬೀದರ್ ವಾರ್ತಾ ಇಲಾಖೆಯ ಶಫಿ ಅವರ ಚೇಂಬರ್‌ನಲ್ಲಿ ಮೊದಲ ಬಾರಿಗೆ 'ಪರಿಚಯ' ಆಯಿತು. ಶಫಿ ಕ್ಯಾಮರಾ, ಫೋಟೊಗ್ರಫಿ ಅಂತ ಏನೇನೋ ಹೇಳಿದರು. ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ದಿನ ಕಳೆದಂತೆ ಮುಂತಕಾ ಬಗ್ಗೆ ಆಸಕ್ತಿ, ಕುತೂಹಲ ಬೆಳೆಯುತ್ತ ಹೋಯಿತು. ಆ ದಿನಗಳಲ್ಲಿಯೇ ಪರಿಚಯವಾದದ್ದು 40 ಕಳ್ಳರು ಜೊತೆಗಿಲ್ಲದಿರುವ 'ಅಲಿಬಾಬಾ ದಿ ಗ್ರೇಟ್'. ಮುಂತಕಾ ಬಗ್ಗೆ  ಉರ್ದು ಮಿಶ್ರಿತ ಹಿಂದಿಯಲ್ಲಿ ಅಲಿಬಾಬಾ ಹೇಳುತ್ತಿದ್ದರೆ ಯಾವುದೋ ಪರಕೀಯ ಲೋಕದ ವ್ಯಕ್ತಿಯ ಬಗ್ಗೆ ವಿವರಿಸುತ್ತಿದ್ದಾರೆ ಎನ್ನಿಸುತ್ತಿತ್ತು. ಇಷ್ಟೊಂದು ಮಹತ್ವ ಇರುವ, ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದರೂ ಅನಾಮಿಕರಾಗಿಯೇ ಉಳಿದದ್ದು ನೋಡಿ ಅಚ್ಚರಿ ಮತ್ತು ಅನುಮಾನ ಉಂಟಾದವು.

ಕೆಲದಿನಗಳ ನಂತರ ಮಾತಿಗೆ ಮಾತು ಬಂದಾಗ ಶಫಿ 'ಮುಂತಕಾ ಬಗ್ಗೆ ಫೀಚರ್ ಮಾಡಬಹುದು' ಎಂದು ಸೂಚಿಸಿದರು. ಯಾಕೆ ಪ್ರಯತ್ನಿಸಬಾರದು? ಎಂದು ಒಂದು ಸಲ ಅನ್ನಿಸಿತು. ಆದರೆ, ಮುಂತಕಾ ಜೊತೆ ಮಾತನಾಡುವುದು ಮತ್ತು ಮನ ಒಲಿಸುವುದು ಸುಲಭ ಸಾಧ್ಯವಾಗಿರಲಿಲ್ಲ. ಅಲಿ ಬಾಬಾ ಎಂಬ ಡಾನ್‌ನ ಚೇಂಬರ್‌ನಲ್ಲಿ ನನ್ನ ಡಿಜಿಟಲ್ ವಾಯಿಸ್ ರೆಕಾರ್ಡರ್ ಇಟ್ಟುಕೊಂಡು ಸಂದರ್ಶನ ಮಾಡಿ ಕೆಲ ದಿನಗಳ ನಂತರ ಲೇಖನ ಬರೆದೆ. 'ಪ್ರಜಾವಾಣಿ'ಯ ಕರ್ನಾಟಕ ದರ್ಶನದಲ್ಲಿ ಲೇಖನಕ್ಕೆ ಒಳ್ಳೆಯ ಡಿಸ್‌ಪ್ಲೇ ನೀಡಿ ಪ್ರಕಟಿಸಲಾಯಿತು. ಅಂದುಕೊಂಡದ್ದಕ್ಕಿಂತ ಹೆಚ್ಚು ಪ್ರಚಾರ ಮತ್ತು ಪ್ರತಿಕ್ರಿಯೆ ವ್ಯಕ್ತವಾದವು. ಅದುವರೆಗೆ ನೂರಾರು ಬಾರಿ ನನ್ನ ಬೈಲೈನ್ ಕಾಣಿಸಿಕೊಂಡಿತ್ತು. ಒಂದಿಬ್ಬರು ಆಪ್ತರು, ಸ್ನೇಹಿತರು ಪ್ರತಿಕ್ರಿಯಿಸುತ್ತಿದ್ದರು. ಮುಂತಕಾ ಬಗೆಗಿನ ಲೇಖನಕ್ಕೆ ಮಾತ್ರ ನಾಡಿನ ಹಲವು ಕಡೆಗಳಿಂದ ಅನಿರೀಕ್ಷಿತ ಎನ್ನಿಸುವಷ್ಟು ಪ್ರಮಾಣದಲ್ಲಿ ಪ್ರತಿಕ್ರಿಯೆ ಬಂತು. ಕೆಲವೇ ದಿನಗಳ ನಂತರ ಡೆಕ್ಕನ್ ಹೆರಾಲ್ಡ್‌ನವರು ಅನುವಾದಿಸಿ ಪ್ರಕಟಿಸಿದರು.

ನನಗೆ ಆತ್ಮೀಯರೂ ಆಗಿರುವ ಬೀದರ್‌ನಲ್ಲಿ ಈಟಿವಿ ವರದಿಗಾರ ಆಗಿದ್ದ ಬಸವರಾಜ ದೊಡ್ಡಮನಿ ಅವರಿಗೆ ಮುಂತಕಾ ಬಗ್ಗೆ ವಿಶೇಷ ಪ್ರೀತಿ. ಅವರು ಎರಡ್ಮೂರು 'ವಿಶೇಷ ವರದಿ' ಮಾಡಿದ್ದರು. ಅವರೇ ಮುಂತಕಾ ಬಿದ್ರಿ ಕಲೆಯನ್ನು ಫೋಟೊಗ್ರಫಿಯಲ್ಲಿ ಅಳವಡಿಸುತ್ತಿರುವ ಬಗ್ಗೆ ನನ್ನ ಗಮನಕ್ಕೆ ತಂದಿದ್ದರು. ಆ ಬಗ್ಗೆ ಈ ಪುಸ್ತಕದಲ್ಲಿ ಗಮನ

ಹರಿಸುವುದು ಸಾಧ್ಯವಾಗಿಲ್ಲ. ಇವರಲ್ಲದೆ, ಟಿ.ವಿ.–9, ಕನ್ನಡ ಕಸ್ತೂರಿ, ಸುವರ್ಣ ಚಾನೆಲ್‌ಗಳು ಕೂಡ ವಿಶೇಷ ವರದಿ ಪ್ರಸಾರ ಮಾಡಿವೆ. ಅವೆಲ್ಲ 'ಸುದ್ದಿ'ಯಲ್ಲಿ ಕೊನೆಗೊಂಡಿವೆ.

ಅದೆಲ್ಲ ಇರಲಿ. ಲೇಖನ ಬರೆದಾದ ಮೇಲೆ ಸುಮ್ಮನಾಗಿ ಬಿಟ್ಟೆ. ಆದರೆ, ಏನಾದರೂ ಮಾಡಬೇಕು ಎಂಬ ಆಸೆ ಇತ್ತು. ಏನು ಎಂಬ ಬಗ್ಗೆ ಮಾತ್ರ ಖಚಿತವಾಗಿರಲಿಲ್ಲ. ಬೀದರ್‌ಗೆ ಬಂದ ಅತಿಥಿ, ಅಭ್ಯಾಗತರಿಗೆಲ್ಲ ಸ್ನೇಹಿತ ರಿಷಿಕೇಶ್ ಮತ್ತು ನಾನು ಸ್ಮಾರಕಗಳನ್ನು ತೋರಿಸಿದ ಹಾಗೆ ಮುಂತಕಾ ಬಗ್ಗೆಯೂ ಹೇಳುತ್ತಿದ್ದೆವು. ಅದೊಂದು ರಿಚ್ಯುಯಲ್ ಆಗಿಬಿಟ್ಟಿತ್ತು. ಪರಿಚಯಿಸುತ್ತ ಹೋದ ಹಾಗೆ ಮುಂತಕಾ ಎಷ್ಟು ಮಹತ್ವದ ವ್ಯಕ್ತಿ ಎಂಬುದು ಅರಿವಾಗತೊಡಗಿತು. ಚೆನ್ನೈನಿಂದ ಬಂದಿದ್ದ ಮಿತ್ರ ಭರತ್‌ಗೆ ಕೂಡ ಮುಂತಕಾ ಬಗ್ಗೆ ವಿವರಿಸಿದೆವು, ಭೇಟಿ ಮಾಡಿಸಿದೆವು. ಛಾಯಾಗ್ರಹಣದ ಬಗ್ಗೆ ಆಸಕ್ತಿ ಹೊಂದಿದ್ದ ಭರತ್ 'ಮುಂತಕಾ ಅವರ ಆತ್ಮಕತೆ ಯಾಕೆ ಬರೆಯಬಾರದು?' ಎಂದು ಪ್ರಶ್ನಿಸಿದರು. ಅದಕ್ಕಾಗಿ ಹತ್ತಾರು ದಿನ ರಜೆ ಹಾಕಿ ಬೀದರ್‌ಗೆ ಬರುವ ಆಶ್ವಾಸನೆ ನೀಡಿದರು. ಅವರು ಬೀದರ್‌ನಿಂದ ಹೋದ ಮೇಲೆ ನಾನೂ ಮರೆತು ಬಿಟ್ಟೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಎಸ್.ಜಿ.ಸಿದ್ಧರಾಮಯ್ಯ ಅವರು ಬೀದರ್‌ಗೆ ಬಂದ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪಿಸಿ 'ಇಲ್ಲಿನ ಪ್ರತಿಭೆಗಳಿಗೆ ಆದ್ಯತೆ ಸಿಗುತ್ತಿಲ್ಲ' ಎಂಬ ದೂರು ಹೇಳಿದೆವು. ಅವರು ತಮ್ಮ ಹಲವು ಯೋಜನೆಗಳ ಬಗ್ಗೆ ವಿವರಿಸಿದರು. ಅದರಲ್ಲಿ ಇದ್ದದ್ದು 'ಮರೆಯಲ್ಲಿರುವ ಮಹಾನುಭಾವರು' ಮಾಲಿಕೆ. ಆಗ ಬೀದರ್‌ನಲ್ಲಿ ಅಪರೂಪದ ಛಾಯಾಗ್ರಾಹಕ ಇದ್ದಾರೆ. ಅವರ ಬಗ್ಗೆ ಯಾಕೆ ಪುಸ್ತಕ ಬರೆಸಿ ಪ್ರಕಟಿಸಬಾರದು? ಎಂಬ ಪ್ರಸ್ತಾವ ಮುಂದಿಟ್ಟೆ. ಆಗ ನಾನೇ ಅದನ್ನು ಬರೆಯಬೇಕಾಗುತ್ತದೆ ಎಂದು ಕಲ್ಪನೆ ಕೂಡ ಮಾಡಿರಲಿಲ್ಲ. 'ಕೆಲಸ ಆಗಲಿ' ಎಂಬ ಆಸೆ ಮಾತ್ರ ಇತ್ತು. ಸಿದ್ಧರಾಮಯ್ಯ ಅವರು 'ನೀವೇ ಬರೆದುಕೊಡಿ' ಎಂದು ಸೂಚಿಸಿದರು. ಯಾವುದೋ ಭರದಲ್ಲಿ ಒಪ್ಪಿಕೊಂಡೆ.

ಅದು ಅಂದುಕೊಂಡಷ್ಟು ಸುಲಭದ ಕೆಲಸ ಆಗಿರಲಿಲ್ಲ. ಯಾವುದಕ್ಕೇ ಆದರೂ ಮುಂತಕಾ ತಣ್ಣನೆಯ ಪ್ರತಿಕ್ರಿಯೆ ನೀಡುತ್ತಿದ್ದರು. ಯಾವುದಕ್ಕೂ ಸಹಕರಿಸುತ್ತಿರಲಿಲ್ಲ. ನೂರಾರು ಬಾರಿ ಹೇಳಿದರೆ ಒಂದು ಫೋಟೊ ಕೊಡುತ್ತಿದ್ದರು. ಅವರನ್ನು ಸಂಪರ್ಕಿಸುವುದು ಕೂಡ ಕಷ್ಟವಾಗಿತ್ತು. ಇದೇ ದಿನಗಳಲ್ಲಿ ಅಲಿಬಾಬಾ ಜೊತೆ ಅವರ ಜಗಳ ಆರಂಭವಾಗಿತ್ತು. ಅವರು 'ಬೀದರ್ ಕಿ ಅವಾಜ್'ಗೆ ಹೋಗುವುದನ್ನೂ ನಿಲ್ಲಿಸಿದ್ದರು. ಅವರ ಬಗ್ಗೆ ಬರೆಯುವುದು ಸಾಧ್ಯವೇ ಇಲ್ಲ ಎನ್ನುವ ತೀರ್ಮಾನಕ್ಕೆ ಬಂದೆ. ಆಗ ನೆರವಿಗೆ ಬಂದವರು ವಾರ್ತಾಧಿಕಾರಿ ಶಫಿ ಮತ್ತು ಅವಾಜ್‌ನ ಸಂಪಾದಕರಾಗಿರುವ ಎಂಎಲ್‌ಸಿ ಅರ್ಷದ್ ಅಲಿ. ಅವರಿಬ್ಬರ ಒತ್ತಾಸೆ ಇಲ್ಲದಿದ್ದರೆ ಮುಂತಕಾ ನನ್ನೊಂದಿಗೆ ಮುಕ್ತವಾಗಿ ಮಾತನಾಡುತ್ತಿರಲಿಲ್ಲ ಎಂಬ ಅಚಲ ನಂಬಿಕೆ ನನ್ನದು. ರಂಜಾನ್‌ನ ಉಪವಾಸದ ದಿನಗಳಲ್ಲಿ ಬೆಳಗ್ಗೆ ನಮ್ಮ ಮನೆಗೆ

ಬರಲು ಆರಂಭಿಸಿದರು. ನನ್ನ ರೆಕಾರ್ಡರ್ ಆನ್ ಮಾಡಿ ಮಾತು ಮುಂದುವರೆಸುತ್ತಿದ್ದೆ. ಮಾತುಕತೆಗೆ ಪುಟ್ಟ ಸಮಂತನ ಅಡ್ಡಿ, ಅಡತಡೆಗಳು ಇದ್ದೇ ಇರುತ್ತಿದ್ದವು. ದಾಖಲಿಸಿಟ್ಟುಕೊಂಡರೂ ಬರೆಯುವುದು ಸಾಧ್ಯವಾಗಿರಲಿಲ್ಲ. ಸ್ನೇಹಿತರ ನಡುವೆ 'ಆಡಿಯೂ ಮಾಡದವ' ಎಂದು ಜನಪ್ರಿಯ ಆಗಿದ್ದೆ. ಕೊನೆಗೆ 'ಮುಗಿಸಲೇ ಬೇಕು' ಎಂಬ ಹಠಕ್ಕೆ ಬಿದ್ದು ಬರೆದು ಮುಗಿಸಿದೆ.

ಹೀಗೆ ಬರೆಯುವುದಕ್ಕೆ ಸಮಂತ ಕಾಡಿದ್ದು, ಅದಕ್ಕಿಂತ ಹೆಚ್ಚಾಗಿ ಅವನನ್ನು ನೋಡಿಕೊಳ್ಳುತ್ತ 'ಏನು ಬರೆಯುತ್ತಿದ್ದಾರೆ?' ಎಂದು ಗೊತ್ತಿಲ್ಲದ್ದಿದರೂ ಸಹಕರಿಸುತ್ತ ಬಂದ ಪತ್ನಿ ಗೀತಾಳ ಬೆಂಬಲ ಇಲ್ಲದ್ದಿದರೆ ಬರೆಯುವುದು ಸಾಧ್ಯವೇ ಇರಲಿಲ್ಲ. ಪ್ರೀತಿಯಿಂದ ಬೈಯುವ, ಬೈಯ್ದು ಬರೆಯುವಂತೆ ಮಾಡುವ ಚಿದಾನಂದ ಸಾಲಿ, ಬರೆದದ್ದನ್ನು ಪ್ರೀತಿಯಿಂದ ಓದಿ ಸಲಹೆ ನೀಡಿದ ಅಪ್ಪಾರಾವ ಸೌದಿ ಮತ್ತು 'ಕೇಳಿದ' ಅಣ್ಣನಿಗೆ ಥ್ಯಾಂಕ್ಸ್ ಹೇಳಿದರೆ ಕೃತಕವಾದೀತು. ಮುಂತಕಾ ಹಾಗೆ ಏನನ್ನೂ ನಿರೀಕ್ಷಿಸದೇ ನಾನು ಹೇಳಿದಾಗಲೆಲ್ಲ ಫೋಟೊ ತೆಗೆದು ಪ್ರಿಂಟ್ ಹಾಕಿಕೊಟ್ಟ 'ಗೋಪಿ'ಯ ತಾಳ್ಕೆ ಮತ್ತು ಶಶಿಕಾಂತ ಶೆಂಬೆಳ್ಳಿಯ ಸಹಕಾರ ಅಕ್ಷರಶಃ ಮೆಚ್ಚುವಂತಹದ್ದು.

ಮುಂತಕಾ ಬಗ್ಗೆ ಲೇಖನ ಪ್ರಕಟಿಸಿದಾಗ 'ಕರ್ನಾಟಕ ದರ್ಶನ' ನೋಡಿಕೊಳ್ಳುತ್ತಿದ್ದ ಪದ್ಮರಾಜ ದಂಡಾವತಿ ಸರ್ ಸದ್ಯ ಪ್ರಜಾವಾಣಿಯ ಸಹ ಸಂಪಾದಕರಾಗಿದ್ದಾರೆ. ಪುಸ್ತಕ ಪ್ರಕಟಿಸುವುದಕ್ಕೆ ಅನುಮತಿ ನೀಡಿದ ಪ್ರಜಾವಾಣಿ ಸಂಪಾದಕರಾದ ಕೆ.ಎನ್.ತಿಲಕಕುಮಾರ್ ಅವರಿಗೆ ಕೃತಜ್ಞತೆ ಸಲ್ಲಿಸದಿದ್ದರೆ ಅಪಚಾರವಾದೀತು. ಊರಿಗೆ ಊರೇ ನೆಂಟರಾಗಿರುವಾಗ ಯಾರನ್ನು ನೆನೆಯಲಿ? ಯಾರನ್ನು ಬಿಡಲಿ? ಕಾಡು ಕುಸುಮದಂತಹ ಮುಂತಕಾ ಕುರಿತ ಪುಸ್ತಕ ನಿಮ್ಮ ಮುಂದಿದೆ. ಇದು ನನಗೆ ಖುಷಿಕೊಟ್ಟ ಕೆಲಸ. ಓದುಗರಿಗೂ ಖುಷಿಯಾದರೆ ಶ್ರಮ ಸಾರ್ಥಕವಾದೀತು.

ದೇವು ಪತ್ತಾರ

ಬೀದರ್
2008 ಜನವರಿ 18

# 01 ಸೋಜಿಗಗಳಲ್ಲಿ ಸೋಜಿಗ

ಯಾರು ಈ ಗುಲಾಂ ಮುಂತಕಾ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಪ್ರಶ್ನೆ ಹುಟ್ಟಿಕೊಂಡಾಗಲೇ ಉತ್ತರ ಹುಡುಕುವುದು ಕೂಡ ಸಾಧ್ಯವಾಗುತ್ತದೆ. ಪ್ರಶ್ನೆಗಳೇ ಇಲ್ಲದಿದ್ದರೆ ಉತ್ತರಗಳೂ ಇರುವುದಿಲ್ಲ. ಎಲ್ಲದಕ್ಕೂ ಮೂಲ ಪ್ರಶ್ನೆ.

ಗುಲಾಂ ಮುಂತಕಾ ಕರ್ನಾಟಕದ ತುತ್ತ ತುದಿಯಲ್ಲಿರುವ ನಗರ ಬೀದರ್‌ನ ನಿವಾಸಿ. ಅವರೊಬ್ಬ ಫೋಟೊಗ್ರಾಫರ್. ಅಷ್ಟು ಮಾತ್ರ ಆಗಿದ್ದರೆ ಅದಕ್ಕೆ ಹೆಚ್ಚು ಮಹತ್ವ ಕೊಡುವ ಅಗತ್ಯ ಇರಲಿಲ್ಲ. ಅವರೊಬ್ಬ 'ಕ್ಯಾಮರಾ ಎಂಜಿನಿಯರ್'. ಹಾಗೆಂದರೇನು? ಎಂಬ ಮತ್ತೊಂದು ಪ್ರಶ್ನೆಗೆ ದಾರಿ ಮಾಡಿಕೊಡುತ್ತದೆ. ಕ್ಯಾಮರಾ ಇರುವುದು ಫೋಟೊ ತೆಗೆಯುವುದಕ್ಕಾಗಿ ಮತ್ತು ಸಮಕಾಲೀನ ಕ್ಷಣವನ್ನು ಸೆರೆ ಹಿಡಿದು ನಾಳೆಗಾಗಿ ದಾಖಲಿಸುವುದಕ್ಕಾಗಿ ಎಂಬುದರಲ್ಲಿ ಎರಡು ಮಾತಿಲ್ಲ. ಕ್ಯಾಮರಾದ ಶೋಧ ಕೂಡ ಇಂತಹುದೇ ಹಠದ ಫಲವಾಗಿ ಆದದ್ದು. ಕಾಲದ ಜೊತೆ ಮನುಷ್ಯ ನಡೆಸುವ ಮುಖಾಮುಖಿ ಮತ್ತು ಮನುಷ್ಯ ಎದುರಿಸುತ್ತ ಬಂದಿರುವ ಕಾಲ ಮತ್ತು ದೇಶಗಳ ಸಮಸ್ಯೆ ಮತ್ತು ಅದು ಹುಟ್ಟು ಹಾಕಿದ ಸವಾಲಿಗೆ 'ಕಲೆ' ಎಂಬ ಉತ್ತರ ಕಂಡುಕೊಳ್ಳುವುದಕ್ಕೆ ಕಾರಣವಾಗಿದೆ.

ಈ ಕಲೆಯಲ್ಲಿ ಸಾಹಿತ್ಯ, ಸಿನಿಮಾ, ಸಂಗೀತ, ನಾಟಕ, ಛಾಯಾಗ್ರಹಣ ಸೇರಿದಂತೆ ಎಲ್ಲ ಪ್ರಕಾರಗಳೂ ಸೇರಿಕೊಂಡಿವೆ. ಕಾಲವನ್ನು ಸೋಲಿಸುವ ಮನುಷ್ಯ ಹಠದ ಪರಿಣಾಮವೇ ಕಲೆ. ಛಾಯಾಗ್ರಹಣವು ಕಾಲವನ್ನು ಮೀರುವ ಕಲೆ. ಅದೆಲ್ಲ ಒತ್ತಟ್ಟಿಗಿರಲಿ. ಕ್ಯಾಮರಾ ಎಂಜಿನಿಯರ್ ಎಂದರೆ ಏನು? ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಬದಲು ಬೇರೆ ಕಡೆಗೆ ಬಂದು ನಿಂತೆವು. ಕೆಟ್ಟ ಮತ್ತು ಹಾಳಾದ ಕ್ಯಾಮರಾಗಳನ್ನು ಬಿಚ್ಚಿ ರಿಪೇರಿ ಮಾಡುವವರು ಇರುತ್ತಾರೆ. ಅವರು ಎಂಜಿನಿಯರ್ ಅಲ್ಲ. ಚೆನ್ನಾಗಿ ಇರುವ ಕ್ಯಾಮರಾಗಳನ್ನು ಬಿಚ್ಚಿ ಅದು ಕಾರ್ಯ ನಿರ್ವಹಿಸುವ ಪರಿಯನ್ನು ಕುರಿತು ಅಧ್ಯಯನ ಮಾಡುತ್ತಾರೆ. ಅವರು ಕೂಡ ಎಂಜಿನಿಯರ್ ಅಲ್ಲ. ಚೆನ್ನಾಗಿರುವ, ವಿವಿಧ ಕಾಲದಲ್ಲಿ ತಯಾರಾದ ಮತ್ತು ಬೇರೆ ಬೇರೆ ದೇಶಗಳ ಹತ್ತಾರು ಕಂಪೆನಿಗಳಲ್ಲಿ ತಯಾರಾದ ಬಗೆ ಬಗೆಯ ಕ್ಯಾಮರಾಗಳನ್ನು ಬಿಚ್ಚಿ ಒಂದರ ದೇಹದ ಭಾಗವನ್ನು ಮತ್ತೊಂದರ ಜೊತೆಗೆ ಜೋಡಿಸಿ ಹೊಸ ಕ್ಯಾಮರಾ ಸೃಷ್ಟಿಸುವ ಮುಂತಕಾ ಕ್ಯಾಮರಾ ಎಂಜಿನಿಯರ್.

ಉತ್ತರ ಕರ್ನಾಟಕದ ಅದರಲ್ಲೂ ಹೈದರಾಬಾದ್ ಕರ್ನಾಟಕದ ಮೂಲೆಗುಂಪಾದ ಪ್ರತಿಭೆಗಳಲ್ಲಿ ಮುಂತಕಾ ಕೂಡ ಒಬ್ಬರು. ಕಾಲದ ಪೊಡೆತದಲ್ಲಿ ಈ ಭಾಗದ ಎಷ್ಟೋ ಜನ

ಬೆಳಕಿಗೆ ಬಾರದೇ ಕಳೆದು ಹೋಗಿದ್ದಾರೆ. ಅದಕ್ಕೆ ಹುಡುಕುವ ಮನಸ್ಸು ಕೈಕೊಟ್ಟಿರುವುದು ಮತ್ತು ಸುಲಭವಾಗಿ, ಸರಳವಾಗಿ ನಿಲುಕದೇ ಇರುವುದನ್ನು ಕೈ ಬಿಡುವ ಹೈದರಾಬಾದ್ ಕರ್ನಾಟಕ ಮನಸ್ಸೇ ಕಾರಣ. ಹೀಗೆ ಕಳೆದು ಹೋದವರಲ್ಲಿ ಮುಂತಕಾ ಕೂಡ ಒಬ್ಬರು.

ಮುಂತಕಾ ಏನೇನು ಮಾಡಬೇಕಾಗಿತ್ತು? ಅವರಿಂದ ಏನೇನು ಆಗಿಲ್ಲ? ಅವರ ಮಿತಿಗಳೇನು? ಮುಂತಾದ ನೆಗೆಟಿವ್ ಪ್ರಶ್ನೆಗಳನ್ನು ಹಾಕಿಕೊಂಡು ಪಾಸಿಟಿವ್ ಉತ್ತರ ಹುಡುಕುತ್ತ ಹೋಗುವುದಿಲ್ಲ. ಅದರ ಬದಲಿಗೆ ಅವರು ಕ್ಯಾಮರಾದ ಜೊತೆ ನಡೆಸಿದ ಒಡನಾಟ ಮತ್ತು ಅದರ ಫಲಿತದ ಬಗ್ಗೆ ಒಂದಿಷ್ಟು ವಿವರಗಳು ಹಾಗೆಯೇ ಅವರ ವಿಕ್ಷಿಪ್ತ ವ್ಯಕ್ತಿತ್ವವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಅದು ಕಷ್ಟದ ಕೆಲಸ.

ಮುಂತಕಾ ಹತ್ತಿರ ಜಗತ್ತಿನ ಅತಿ ದೊಡ್ಡ ನೆಗೆಟಿವ್ ಇದೆ. ಅದು 8 ಅಡಿ ಉದ್ದ ಮತ್ತು ಒಂದು ಅಡಿ ಅಗಲ ಇದೆ. ಅದನ್ನು ಮುಂತಕಾ ಅವರು ತಮ್ಮ ಹತ್ತಿರ ಇರುವ ಬೆನೆನ್ ಹವೆಲ್ ಕ್ಯಾಮರಾ ಬಳಸಿ ಚಿತ್ರೀಕರಿಸಿದ್ದಾರೆ. ಅವರದು ಫೋಟೊ ಕ್ಲಿಕ್ಕಿಸುವ ವಿಧಾನ ಅಲ್ಲ. ಫೋಟೋ ಚಿತ್ರೀಕರಿಸುವ ವಿಧಾನ. ಸ್ಟ್ಯಾಂಡ್ ಮೇಲೆ ಇಟ್ಟ ಕ್ಯಾಮರಾ ನಿಗದಿತ ವೇಗದಲ್ಲಿ ತನ್ನ ಸುತ್ತ ಚಲಿಸುತ್ತ ಕಾಣಿಸುವ ಬಿಂಬಗಳನ್ನು ದಾಖಲಿಸಿಕೊಳ್ಳುತ್ತ ಹೋಗುತ್ತದೆ. ಅದಕ್ಕೆ ಅನುಗುಣವಾಗಿ ಶಟರ್‌ನ ಸ್ಪೀಡ್ ಕೂಡ ನಿಗದಿ ಪಡಿಸಿರುತ್ತಾರೆ. ಇದೇ ವಿಧಾನ ಅನುಸರಿಸಿ ಅವರು ಹತ್ತಾರು ಗ್ರೂಪ್ ಫೋಟೊ ಚಿತ್ರೀಕರಿಸಿದ್ದಾರೆ.

ಸಿನಿಮಾ ಚಿತ್ರೀಕರಣದ ವಿಧಾನ ಬಳಸಿ ಸ್ಟಿಲ್ ಫೋಟೊ ತೆಗೆಯುವ ಈ ವಿಧಾನ ಅಳವಡಿಸಿಕೊಂಡು ಅವರು ಮುಂಬೈ, ಬೆಂಗಳೂರು ಮತ್ತು ಬೀದರ್‌ಗಳಲ್ಲಿ ಸಮೂಹ ಚಿತ್ರ ತೆಗೆದಿದ್ದಾರೆ. ಹಾಗೆ ಕ್ಯಾಮರಾ ಹೊತ್ತುಕೊಂಡು ಹೋಗಿ ಚಿತ್ರ ದಾಖಲಿಸಿಕೊಂಡು ಬೀದರ್‌ಗೆ ಮರಳಿ ಡೆವಲೆಪ್ ಮಾಡಿ ಪ್ರಿಂಟ್ ಹಾಕಿ ಫೋಟೊದ ಸೊಬಗು ನೋಡಿ ಸ್ವತಃ ಬೆರಗಾಗಿದ್ದಾರೆ. ಹಲವರು ಬೆರಗಾಗುವಂತೆ ಮಾಡಿದ್ದಾರೆ. ಅವರ ಕ್ಯಾಮರಾ ಪ್ರೀತಿ, ಜೇನು ಕುರಿತ ಒಲವು, ಬೇಟೆ ಕುರಿತ ಆಸಕ್ತಿಗಳು, ನೆಲದ ಬಗೆಗಿನ ಅಭಿಮಾನ ಮತ್ತು ಮೋಹಗಳ ಬಗ್ಗೆ ಕೂಡ ಪ್ರಸ್ತಾಪಿಸಲಾಗಿದೆ. ಹಲವು ಸೋಜಿಗಗಳು ಒಂದೆಡೆ ಬೆರತು ಹೊಸ ಸೋಜಿಗ ಹುಟ್ಟಿಕೊಂಡಿದೆ. ಸೋಜಿಗಗಳ ಸೋಜಿಗ ಮುಂತಕಾ ಮತ್ತು ಅವರ ಕ್ಯಾಮರಾ ಸಂಗ್ರಹ.

■

# 02 ಚೌಕಟ್ಟಿನಾಚೆಯ ಚಿತ್ರಗಳು

ಚಿತ್ರಕ್ಕೆ ಚೌಕಟ್ಟು ಇರುವುದು ಸಾಮಾನ್ಯ. ಆದರೆ, ಬಹುತೇಕ ಸಂದರ್ಭಗಳಲ್ಲಿ ಚೌಕಟ್ಟು ಚಿತ್ರದ ಮಿತಿ ಅಥವಾ ಮೇರೆಗಳನ್ನು ಗುರುತಿಸುವ ಸಾಧನವಾಗುತ್ತದೆ. ಚೌಕಟ್ಟಿನ ಮೇರೆಯನ್ನು ಮೀರುವ ಮುಂತಕಾ ಅವರ ಚಿತ್ರಗಳು ಚೌಕಟ್ಟಿನ ಪರಿಕಲ್ಪನೆಗೇ ಸವಾಲು ಒಡ್ಡುತ್ತವೆ. ರೂಢಿಗತವಾದ ಚೌಕಟ್ಟುಗಳ ಆಚೆಗೂ ಇರುವ ಬೃಹತ್‌ಅನ್ನು ಅವು ಸಾಂಕೇತಿಕರಿಸುತ್ತವೆ. ಹಾಗಾಗಿ ಚೌಕಟ್ಟುಗಳ ಹಂಗಿಲ್ಲದ ಅಥವಾ ಚೌಕಟ್ಟನ್ನು ನಿರಾಕರಿಸುವ ಬೃಹತ್ ಚಿತ್ರಗಳು ಮೇಲ್ನೋಟಕ್ಕೆ ನಿರುಪಯೋಗಿ ಅನ್ನಿಸಿದರೂ ಪರಂಪರೆಗೆ ಹಾಕಿದ ಸವಾಲು ಮತ್ತು ಆ ನಿಟ್ಟಿನಲ್ಲಿ ನಡೆದ ಪ್ರಯತ್ನ ಎಂಬ ಅಂಶವನ್ನು ಗಮನಿಸಬೇಕು. ಚಿತ್ರ ಎಂದರೆ ಆಯತ ಅಥವಾ ಚೌಕಾದ ಚಿತ್ರಗಳೇ ಕಣ್ಮುಂದೆ ಬರುತ್ತವೆ. ಆದರೆ. ಮುಂತಕಾ ಚಿತ್ರಗಳು ಉದ್ದ-ಅಗಲಗಳ ಲೆಕ್ಕಾಚಾರಕ್ಕೆ ತೊಡಗಿಸುತ್ತವೆ. 8 ಅಡಿ ಉದ್ದ, ಒಂದು ಅಡಿ ಅಗಲ ಅಥವಾ ಎರಡು ಅಡಿ. ಅಗಲ ಐದು ಅಡಿ ಎತ್ತರಗಳಿರುವ ಚಿತ್ರಗಳು ಛಾಯಾಗ್ರಹಣ ಲೋಕಕ್ಕೆ ಹೊಸ ಆಯಾಮ ಕಲ್ಪಿಸುತ್ತವೆ.

ಮುಂತಕಾರ ಚಿತ್ರಗಳಿಗೆ ಯಾವುದೇ ಸಾಮಾಜಿಕ ಆಯಾಮ ಇಲ್ಲ, ಜನಪರ ಕಾಳಜಿ ಇಲ್ಲ, ಅವು ಏನನ್ನೂ ಹೇಳುವುದಿಲ್ಲ ಎಂಬ ಆಪಾದನೆಯೂ ಇದೆ. ಮುಂತಕಾ ಅವರನ್ನು ಕೇವಲ 'ಛಾಯಾಗ್ರಾಹಕ' ಎಂದು ನೋಡಬಾರದು. ಹಾಗೆ ನೋಡುವುದು ರೂಢಿಗತವಲ್ಲದ ಚಿತ್ರಕ್ಕೆ ನಮ್ಮದೇ ಚೌಕಟ್ಟು ಹಾಕಿದ ಹಾಗಾಗುತ್ತದೆ. ಕ್ಯಾಮರಾ ಜೊತೆಗೆ ಒಡನಾಟ ನಡೆಸುವ ಅವರ ತಾಂತ್ರಿಕತೆಗೆ, ತಂತ್ರಜ್ಞಾನಕ್ಕೆ 'ಸವಾಲು' ಒಡ್ಡುವ ರೀತಿಯಲ್ಲಿ ಮಾರ್ಪಡಿಸುವ, ನವೀಕರಿಸುವ ಮತ್ತು ಹೊಸ ಅರ್ಥ ಹಚ್ಚುವ ಮುಂತಕಾ ಕೇವಲ ಫೋಟೋಗ್ರಾಫರ್ ಅಲ್ಲ. ಅದರಾಚೆಗೂ ಬೆಳೆಯುವ, ಬೆಳೆದು ನಿಂತಿರುವ 'ಕ್ಯಾಮರಾಪರ್ಸನ್'.

ಮುಂತಕಾ ಅವರಿಗೆ ಕ್ಯಾಮರಾ ಜೊತೆಗಿನ ಒಡನಾಟದಿಂದಲೇ ನೆರಳು- ಬೆಳಕಿನ ಸಂಯೋಜನೆಯ ಅರಿವು ತುಂಬಾ ಇದೆ. ಆದರೆ, ಆ ನಿಟ್ಟಿನಲ್ಲಿ ಅವರು ಪ್ರಯತ್ನ ನಡೆಸಿದ್ದು ಕಡಿಮೆ. ಬಳಸಲಾಗದ ಕೌಶಲ್ಯ ಹರಿತಗೊಳಿಸದ ಆಯುಧದ ಹಾಗೆ ನಿರುಪಯುಕ್ತ ಅಂತ ಮೇಲ್ನೋಟಕ್ಕೆ ಅನ್ನಿಸುತ್ತದೆ. ಹಾಗೆ ನೋಡಿದರೆ ಮೇಲ್ನೋಟಕ್ಕೆ ಅನ್ನಿಸುವುದೆಲ್ಲ ಸರಿಯಲ್ಲ. ಛಾಯಾಗ್ರಹಣದ ಕಡೆಗೆ ಇರುವ ಒಲವಿಗಿಂತ ಮುಂತಕಾಗೆ ಕ್ಯಾಮರಾ ಜೊತೆಗಿನ ಮುಖಾಮುಖಿ, ಒಡನಾಟ ಮತ್ತು ಅದು ಹುಟ್ಟು ಹಾಕುವ ಹೊಸ ಸಾಧ್ಯತೆಗಳತ್ತ ಹೆಚ್ಚು ಆಸಕ್ತಿ. ಅವರಿಗೆ ಕ್ಯಾಮರಾ ಕೇವಲ ಫೋಟೊ ತೆಗೆಯುವ ಯಂತ್ರ ಅಲ್ಲ. ಅದೊಂದು ಸೃಷ್ಟಿಶೀಲತೆಯ ಸಂಕೇತ. ಹೊಸ ಹುಡುಕಾಟ ನಡೆಸುವ ಸೃಜನಶೀಲ ಮನಸ್ಸು ಪರಂಪರೆಯ

ಚೌಕಟ್ಟುಗಳನ್ನು ಮುರಿದು ಹಾಕುವ ಪರಿ ಮುಂತಕಾ ಅವರ ಧೋರಣೆಯಲ್ಲಿ ಗೋಚರವಾಗುತ್ತದೆ.

ಜಾಗತೀಕರಣದ ಪ್ರಕ್ರಿಯೆಯನ್ನು ಬಹಳಷ್ಟು ಮುಂಚೆಯೇ ಆರಂಭಿಸಿದವರು ಮುಂತಕಾ. ಅವರ ಬಳಿ ಜಗತ್ತಿನ ಬಹುತೇಕ ಎಲ್ಲ ದೇಶಗಳ ಕ್ಯಾಮರಾಗಳಿವೆ. ಎಲ್ಲ ಕ್ಯಾಮರಾಕ್ಕೂ ತನ್ನದೇ ಅಸ್ತಿತ್ವ ಇಲ್ಲದಂತಹ ಸ್ಥಿತಿಯನ್ನು ಅವುಗಳಿಗೆ ತಂದಿಟ್ಟಿದ್ದಾರೆ. ಅವರ ಬಳಿ ಸುಮಾರು ನೂರಕ್ಕೂ ಹೆಚ್ಚು ವೈವಿಧ್ಯಮಯ ಕ್ಯಾಮರಾಗಳಿವೆ. ಅವು ಕೇವಲ ಹಲವು ದೇಶಗಳಿಗೆ ಸೇರಿದವುಗಳು ಮಾತ್ರವಲ್ಲ ಹಲವು ಕಾಲಘಟ್ಟದಲ್ಲಿ ತಯಾರಾದವುಗಳು. ಹೀಗಾಗಿ ಅವುಗಳಿಗೆ ಕಾಲದ ಮತ್ತು ದೇಶದ ಮಿತಿ ಇಲ್ಲ. ಮುಂತಕಾ ಬಳಿ ಇರುವ ಕ್ಯಾಮರಾಗಳು 'ಕಾಲ-ದೇಶ'ದ ಹಂಗು ಮೀರಿದ ಯಂತ್ರಗಳು. ಹಂಗು ಮೀರುವ ಮಾನವ ಪ್ರಯತ್ನದ 'ಸಂಕೇತ'ಗಳು.

ಜಪಾನಿನ ಕ್ಯಾಮರಾ ಬಾಡಿಗೆ ಜರ್ಮನಿಯ ಲೆನ್ಸ್ ಅಳವಡಿಸಿ ಅದಕ್ಕೆ ಅಮೆರಿಕಾದ ಫ್ಲಾಷ್ ಸೇರಿಸಿ ಮುಂತಕಾ ತಮ್ಮದೇ ಹೊಸ ಕ್ಯಾಮರಾ ಸಿದ್ಧಪಡಿಸುತ್ತಾರೆ. ಅವರ ಕ್ಯಾಮರಾಗಳು ಮೂಲ ಎಂಜಿನಿಯರ್‌ಗಳ ತಲೆಮೇಲೆ ಹೊಡೆದಂತಹ ಅಪೂರ್ವ ಗುಣಮಟ್ಟದ ಚಿತ್ರಗಳನ್ನು ನೀಡುತ್ತವೆ. ಸ್ಕ್ರೂ-ನಟ್‌ಗಳು ಮತ್ತು ಅವುಗಳ ಸ್ಕ್ರೂಡ್ರೈವರ್‌ಗಳು ಅವರ ಮನೆಯ ತುಂಬ ಹರಡಿ ಬಿದ್ದಿರುತ್ತವೆ. ಕ್ಯಾಮರಾ ಬಿಚ್ಚುವುದು ಅದರ ಕಾರ್ಯವೈಖರಿ ಅರ್ಥ ಮಾಡಿಕೊಳ್ಳುವುದು. ಅದನ್ನು ವಿಸ್ತರಿಸುವ ಬಗ್ಗೆ ಯೋಚನೆ ನಡೆಸಿ, ಯೋಜನೆ ರೂಪಿಸಿ ಅದಕ್ಕೆ ತಕ್ಕಂತೆ ಕಾರ್ಯಪ್ರವೃತ್ತರಾಗುವುದು ಮುಂತಕಾ ಸ್ಟೈಲ್. ಮನೆಯಲ್ಲಿ ಇಡಲಾಗಿರುವ ನೂರಾರು ಕ್ಯಾಮರಾಗಳಲ್ಲಿ ಯಾವುದೇ ಒಂದನ್ನು ಕೈಗೆತ್ತಿಕೊಂಡರು ಉಪಯೋಗಿ ಪರಿಭಾಷೆಯ ಅರ್ಥದಲ್ಲಿ ನಿರುಪಯೋಗಿ. ಆದರೆ, ಅವು ಬಿಚ್ಚಿದ ಸ್ಥಿತಿಯಲ್ಲಿ ಇರುವುದರಿಂದ ಒಂದು ಕ್ಯಾಮರಾದ ಒಂದು ಭಾಗವು ಮತ್ತೊಂದು ಕ್ಯಾಮರಾಕ್ಕೆ ಅಳವಡಿಕೆ ಮಾಡಲು ಸುಲಭವಾಗುತ್ತದೆ. ಹೀಗೆ ಕಸಿಯಾಗುವ ಕ್ಯಾಮರಾಗಳು ಹೊಸ ಲೋಕವನ್ನು ತೆರೆದಿಡುತ್ತವೆ. ಮೇಲ್ನೋಟಕ್ಕೆ 'ಅಸಾಧ್ಯ' ಎನ್ನಿಸುವುದನ್ನು ಸಾಧ್ಯವಾಗಿಸುತ್ತವೆ.

ಜಗತ್ತು ಮುಮ್ಮೊಗವಾಗಿ ಓಡುತ್ತಿರುವಾಗ ಅಥವಾ ಚಲಿಸುತ್ತಿರುವಾಗ ಮುಂತಕಾ ತರಹದ ವ್ಯಕ್ತಿಗಳು ಅದಕ್ಕೆ ತಮ್ಮದೇ ರೀತಿಯ ತಡೆಯೊಡ್ಡುತ್ತಿರುತ್ತಾರೆ. ಹಿಂದಿನ ಕಾಲದ ಮ್ಯೂಸಿಯಂನಲ್ಲಿ ಇಟ್ಟು ನಿಟ್ಟುಸಿರು ಬಿಡಬೇಕಾದ ವಸ್ತುಗಳನ್ನು ಬಿಚ್ಚಿ ಅದರ ಭಾಗಗಳನ್ನು ಹೊಸದಕ್ಕೆ ಅಳವಡಿಸಿ ಅದರಿಂದ 'ಉಪಯುಕ್ತ' ಅನ್ನಿಸುವ ಹೊಸದನ್ನು ಸೃಷ್ಟಿಸುತ್ತಾರೆ. ಈ ಉಪಯುಕ್ತ ಪದಕ್ಕೆ ಕೂಡ ರೂಢಿಗತ ಅರ್ಥ ಸಾಕಾಗುವುದಿಲ್ಲ. ಡಿಜಿಟಲ್ ಆಗಿರುವ ಈ ದಿನಗಳಲ್ಲಿ ರೀಲ್ ಕ್ಯಾಮರಾಗಳಲ್ಲಿ ಹಲವು ಪ್ರಯೋಗಗಳನ್ನು ಮಾಡಿರುವ, ಮಾಡುತ್ತಿರುವ ಮುಂತಕಾ ಕೇವಲ ಅಷ್ಟಕ್ಕೇ ಸೀಮಿತವಾಗಿಲ್ಲ. ಡಿಜಿಟಲ್ ಕ್ಯಾಮರಾ ಬಳಸಿ ಅದರಿಂದ ಚಿತ್ರ ತೆಗೆಯುವ ಮತ್ತು ಅದರ ಕೌಶಲ್ಯವನ್ನು ಅರಿಯುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಹೀಗಾಗಿ ಕೇವಲ ಪರಂಪರೆಗೆ ವಿರೋಧ ಮುಖಿಯಾಗಿ ಕೊಚ್ಚಿ ಹೋಗುವ ಜಾಯಮಾನ

ಅವರದಲ್ಲ. ಪರಂಪರೆಯ ಜೊತೆಗೆ ಚಲಿಸುತ್ತಲೇ ಅದಕ್ಕೆ ಪೂರಕವಾದ, ವಿರುದ್ಧವಾದ ಪರ್ಯಾಯವನ್ನು ಶೋಧಿಸುವ ಸೃಷ್ಟಿಸುವ ರೀತಿ ಮುಂತಕಾ ಅವರದ್ದು.

ಬೀದರ್ ನಗರವನ್ನು ಪ್ರವಾಸಿಯೊಬ್ಬರು 'ಸ್ಲೀಪಿಂಗ್ ಸಿಟಿ' ಎಂದು ವ್ಯಾಖ್ಯಾನಿಸಿದ್ದಾರೆ. ಮಲಗಿರುವ ಅಥವಾ ಮಲಗಿದಂತೆ ನಟಿಸುತ್ತಿರುವ ನಗರ. ಮಲಗಿರುವುದು ಕೇವಲ ನಗರ ಮಾತ್ರ ಅಲ್ಲ, ಅಲ್ಲಿಯ ನಿವಾಸಿಗಳು ಕೂಡ. ಕೈಯಲ್ಲಿ ಕ್ಯಾಮರಾ ಹಿಡಿದುಕೊಂಡು 'ಏನೋ ಮಾಡುತ್ತಾನೆ. ಯಾವಾಗಲೂ ಫೋಟೊ ತೆಗೆಯುತ್ತಾನೆ. ಅವನ್ನೆಲ್ಲ ಏನು ಮಾಡುತ್ತಾನೆ? ಈ ವಯಸ್ಸಿನಲ್ಲಿ ಯಾಕೆ ಬೇಕು ಈ ಹುಚ್ಚು? ಎಂಬೆಲ್ಲ ಅಭಿಪ್ರಾಯ, ಕಾಮೆಂಟುಗಳು ಮುಂತಕಾ ಬಗ್ಗೆ ಸರ್ವೇಸಾಮಾನ್ಯ. ಅದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ, ಆಪಾದನೆಗಳಿಗೆ ಕ್ಯಾರೆ ಅನ್ನದ ಮುಂತಕಾ ತಮ್ಮ ಹಳೆಯ ಸೈಕಲ್ ಹತ್ತಿ ಕ್ಯಾಮರಾ ಜೊತೆ ಹೊರಟು ಬಿಡುತ್ತಾರೆ.

ವಿವಿಧ ಸ್ಮಾರಕಗಳ ಹತ್ತಿರ ಕುಳಿತು ನೆರಳು– ಬೆಳಕುಗಳ ಸಂಯೋಜನೆ ಈ ಸ್ಮಾರಕಗಳನ್ನು ಹೇಗೆ ಸೆರೆ ಹಿಡಿದರೆ ಚೆನ್ನಾಗಿರುತ್ತದೆ ಎಂಬ ಚಿಂತನೆ ನಡೆಸುತ್ತಿರುತ್ತಾರೆ. ಬೀದರ್‌ನ ಬೆಳಗು ಸೆರೆ ಹಿಡಿಯುವ ನಿಟ್ಟಿನಲ್ಲಿ ಅವರು ನಡೆಸಿದ ಪ್ರಯೋಗಗಳು ಅನನ್ಯ, ಅದ್ಭುತ. ಕೇವಲ ಫಲಿತಾಂಶವನ್ನು ದೃಷ್ಟಿಯಲ್ಲಿಟ್ಟು ಕಾರ್ಯನಿರ್ವಹಿಸುವ ಮತ್ತು ಅದನ್ನೇ ಗುರಿಯಾಗಿಟ್ಟುಕೊಂಡು ಪ್ರಯತ್ನಿಸುವ ದಿನಮಾನಗಳಲ್ಲಿ ಯಾವುದೇ ಆಸೆ– ದುರಾಸೆ ಇಲ್ಲದೇ ಕ್ಯಾಮರಾ ಪ್ರೀತಿಸುತ್ತ ಅವುಗಳಿಂದ ಹೊಸದನ್ನು ಸೃಷ್ಟಿಸುವ ಪ್ರಯತ್ನ ನಡೆಸುತ್ತಿರುವ ಮುಂತಕಾ ಕೇವಲ ಸೃಜನಶೀಲರು ಮಾತ್ರವಲ್ಲ ಪ್ರಯೋಗಶೀಲರು ಕೂಡ. ಬೀದರ್ ನಗರದ ಬೆಳಗನ್ನು ಸೆರೆ ಹಿಡಿಯುವ ಅವರ ಪ್ರಯತ್ನ ಇನ್ನೂ ಫಲಕಾರಿಯಾಗಿಲ್ಲ. ಹೆಚ್ಚು ಕಾವ್ಯಾತ್ಮಕ ಆಗಿರುವ ತಮ್ಮದೇ ಪ್ರಯತ್ನಕ್ಕೆ ಅವರೇ ಹೆಚ್ಚಿಗೆ ಆದ್ಯತೆ ನೀಡಿಲ್ಲ. ಯಾವುದೇ ಕೆಲಸವನ್ನು ಪಟ್ಟು ಹಿಡಿದು ಮಾಡುವುದು ಮುಂತಕಾ ಜಾಯಮಾನ ಅಲ್ಲ. ಆ ಕ್ಷಣಕ್ಕೆ ಮಹತ್ವದ್ದು ಎನ್ನಿಸಿದ್ದನ್ನು ಮಾಡುತ್ತಿರುತ್ತಾರೆ. ಒತ್ತಡ ಬಂದರೆ ಅದನ್ನು ಕೈಬಿಟ್ಟು ಮತ್ತೊಂದನ್ನು ಕೈಗೆತ್ತಿಕೊಳ್ಳುತ್ತಾರೆ. ಅದನ್ನು ಕೂಡ ಪೂರ್ಣ ಮಾಡುತ್ತಾರೆ ಎಂದೇನು ಇಲ್ಲ. ಹಲವು ಕೆಲಸಗಳನ್ನು ಏಕಕಾಲಕ್ಕೆ ಮಾಡುವುದು ಮತ್ತು ಯಾವುದನ್ನೂ ಪೂರ್ಣಗೊಳಿಸದೇ ಇರುವುದು ಮುಂತಕಾ ಅವರ ಮಿತಿ ಮತ್ತು ಹೆಗ್ಗಳಿಕೆ.

# 03 ವಿಶ್ವದ ಅತಿದೊಡ್ಡ ನೆಗೆಟಿವ್

ಸರ್ಕ್ಯೂಟ್ ಕ್ಯಾಮರಾ ಬಳಸಿ ಗ್ರೂಪ್ ಫೋಟೊ ತೆಗೆಯಲು ಆರಂಭಿಸಿದ ಕೆಲ ದಿನಗಳ ನಂತರ ಮುಂತಕಾ ಒಳ್ಳೆಯ ಗ್ರೂಪ್ ಫೋಟೊ ತೆಗೆಯುತ್ತಾರೆ ಎಂದು ಹೆಸರುವಾಸಿಯಾದರು. ಆದರೆ, ಹೀಗೆ ಹೆಸರುವಾಸಿಯಾದದ್ದು ಬೀದರ್ ಎಂಬ ಜಗತ್ತಿನಲ್ಲಿ ಮಾತ್ರ. ಮುಂತಕಾ ಅವರ ಫೋಟೊಕ್ಕಿಂತ ಅದನ್ನು ಕ್ಲಿಕ್ಕಿಸುವ ಅಥವಾ ದಾಖಲಿಸುವ ಸೊಬಗೇ ಬಹಳಷ್ಟು ಜನರಿಗೆ ಅಚ್ಚರಿ ಮತ್ತು ಖುಷಿಯನ್ನು ಉಂಟು ಮಾಡುತ್ತಿತ್ತು. ಅಜ್ಜನ ಕಾಲದ ಕ್ಯಾಮರಾವೊಂದನ್ನು ಅಷ್ಟೇ ಹಳೆಯ ಫೋಟೊಗ್ರಾಫರ್ ಬಳಸಿ ದೊಡ್ಡ ದೊಡ್ಡ ಫೋಟೊ ತೆಗೆಯುವುದು ಜನರಲ್ಲಿ ಆಸಕ್ತಿ, ಕುತೂಹಲ ಮೂಡಿಸಲು ಕಾರಣವಾಯಿತು. ನಾಲ್ಕಾರು ಗ್ರೂಪ್ ಫೋಟೊಗಳನ್ನು ತೆಗೆದ ನಂತರ ಮತ್ತೊಂದು ಗ್ರೂಪ್ ಫೋಟೊ ತೆಗೆಯುವ ಅವಕಾಶ ಮುಂತಕಾ ಅವರಿಗೆ ದೊರೆಯಿತು. ಅದು ಬೀದರ್ ನಗರಸಭೆ ಸದಸ್ಯರ ಸಮೂಹ ಚಿತ್ರ.

ಎಂದಿನಂತೆ ಅರ್ಧವರ್ತುಲ ಆಕಾರದಲ್ಲಿ ಸದಸ್ಯರನ್ನು ಕೂಡಿಸಿ, ನಿಲ್ಲಿಸಿ ಫೋಟೊ ತೆಗೆಯಲು ಆರಂಭಿಸಿದರು. ಎಲ್ಲವನ್ನೂ ದಾಖಲಿಸುತ್ತ ಹೋಯಿತು ಕ್ಯಾಮರಾ. ನಗರಸಭೆಯ 40 ಸದಸ್ಯರನ್ನು ಕೂಡಿಸಿ ಮಾಡಿದ ಎಕ್ಸಪೋಸ್ ಅದಾಗಿತ್ತು. ಡೆವಲೆಪ್ ಮಾಡಿದ ಮೇಲೆ ಎಂಟು ಅಡಿ ಉದ್ದದ ನೆಗೆಟಿವ್ ರೂಪುಗೊಂಡಿತ್ತು. ಎಂದಿನಂತೆ ಸಮೂಹದಲ್ಲಿದ್ದ ಎಲ್ಲರ ಮುಖಗಳು ಸ್ಪಷ್ಟವಾಗಿ ದಾಖಲಾಗಿದ್ದವು. ಆದರೂ ಅದು ಜಗತ್ತಿನ ಅತಿದೊಡ್ಡ ನೆಗೆಟಿವ್ ಎಂಬ ಬಗ್ಗೆ ಮುಂತಕಾ ಅವರಿಗಾಗಲಿ, ಬೇರೆಯವರಿಗೇ ಆಗಲಿ ಗೊತ್ತಾಗಲಿಲ್ಲ. ಅದನ್ನು ಗಿನ್ನಿಸ್ ದಾಖಲೆಗಳ ಪುಸ್ತಕದಲ್ಲಿ ಸೇರಿಸುವುದಕ್ಕೆ ಏನು ಮಾಡಬೇಕು? ಎಂಬ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. 'ನೆಗೆಟಿವ್ ನೋಡಿದ ಜನರು ಮತ್ತು ಫೋಟೊಗ್ರಾಫರ್‌ಗಳೆಲ್ಲ ಇದೊಂದು ಅದ್ಭುತ ಎಂಬಂತೆ ಮಾತನಾಡುತ್ತಾರೆ. ಗಿನ್ನಿಸ್ ರೆಕಾರ್ಡ್‌ನಲ್ಲಿ ಸೇರಬಹುದು' ಎಂದು ಹೇಳುತ್ತಾರೆ ಎನ್ನುವ ಮುಂತಕಾ 'ಅದೇನು ಅಂತಹ ದೊಡ್ಡ ಕೆಲಸ ಅಲ್ಲ. ಯಾರು ಬೇಕಾದರೂ ಮಾಡಬಹುದು' ಎಂದು ತಣ್ಣನೆಯ ಪ್ರತಿಕ್ರಿಯೆ ನೀಡುತ್ತಾರೆ.

ಹಾಗಾದರೆ ಇದು ಜಗತ್ತಿನ ಅತಿದೊಡ್ಡ ನೆಗೆಟಿವ್ ಎಂದು ಹೇಳುವುದು ಹೇಗೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಶ್ನೆ ಸಹಜವಾದದ್ದು. ದೆಹಲಿ ಮೂಲದ ಹಳೆಯ ಛಾಯಾಗ್ರಾಹಕ ಎ.ಆರ್.ದತ್ತಾ ಅವರು 'ಮಿಡ್-ಡೇ' ದಿನಪತ್ರಿಕೆಯ ಸಂದರ್ಶನದಲ್ಲಿ ತನ್ನ ಬಳಿ ವಿಶ್ವದ ಅತಿದೊಡ್ಡ ನೆಗೆಟಿವ್ ಇರುವುದಾಗಿ ಹೇಳಿದ್ದರು. ಹಾಗೆಯೇ ಅದು ಆರು ಅಡಿ ಉದ್ದ

ಇರುವ ವಿಷಯವನ್ನೂ ಪ್ರಸ್ತಾಪಿಸಿದ್ದರು. ಅದಾದ ಮೇಲೆ ಕೆಲವೇ ದಿನಗಳಲ್ಲಿ ದೂರದರ್ಶನದಲ್ಲಿ 'ಸುರಭಿ' ಕಾರ್ಯಕ್ರಮದಲ್ಲಿ ದತ್ತಾ ಅವರ ಬಗ್ಗೆ ಪರಿಚಯ ಪ್ರಸಾರವಾಯಿತು. ಆ ಕಾರ್ಯಕ್ರಮದಲ್ಲಿ ದತ್ತಾ ತಮ್ಮ ನೆನಪುಗಳನ್ನು ಮೆಲುಕು ಹಾಕಿದ್ದರು.

ಎ.ಆರ್.ದತ್ತಾ ಅವರು ನೆಹರೂ ಕಾಲದ ಛಾಯಾಗ್ರಾಹಕ. ನೆಹರು ಸಚಿವ ಸಂಪುಟದ ಹಲವಾರು ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ. ಅವರು ಕೂಡ ಗ್ರೂಪ್ ಫೋಟೊ ತೆಗೆಯುವುದರಲ್ಲಿ ಸಿದ್ಧಹಸ್ತರು. ಅವರೊಮ್ಮೆ ತಮ್ಮ ಬಳಿ ಇದ್ದ ಸರ್ಕ್ಯೂಟ್ ಕ್ಯಾಮರಾ ಬಳಸಿ ಸಚಿವ ಸಂಪುಟದ ಫೋಟೊ ತೆಗೆಯುವುದಾಗಿ ನೆಹರೂ ಅವರಿಗೆ ತಿಳಿಸಿದ್ದರು. ಆಗ ನೆಹರೂಜಿ ಅವರು ಟ್ರಯಲ್ ಫೋಟೊ ತೋರಿಸುವಂತೆ ಸೂಚಿಸಿದ್ದರು. ಆಗ ದತ್ತಾ ಅವರು ಸಂಸತ್ ಭವನ ಮುಂಭಾಗದಲ್ಲಿ ಸಾಲಾಗಿ ಖುರ್ಚಿಗಳನ್ನು ಹಾಕಿಸಿ ಖಾಲಿ ಕುರ್ಚಿಯ ಚಿತ್ರಗಳನ್ನ ಕ್ಲಿಕ್ಕಿಸಿದ್ದರು. ಅದನ್ನು ಪ್ರಿಂಟ್ ಮಾಡಿ ನೆಹರೂ ಅವರಿಗೆ ತೋರಿಸಿದ್ದರು. ಅದನ್ನು ನೋಡಿ ಮನವರಿಕೆಯಾದ ಮೇಲೆಯೇ ನೆಹರೂ ಅವರು ಸಮೂಹ ಚಿತ್ರಕ್ಕಾಗಿ ಬಂದು ಕುಳಿತರು. ಹಾಗೆ ಚಿತ್ರಿಸಿದ ಫೋಟೊ ಆರು ಅಡಿ ಉದ್ದ ಇತ್ತು. ಈ ಎಲ್ಲ ವಿಷಯಗಳನ್ನು ಕಿರುತೆರೆಯ ಮೇಲೆ ವಿವರಿಸಿದ ದತ್ತಾ ಅವರು ತಮ್ಮ ಬಳಿ ಇರುವ ಆರು ಅಡಿ ಉದ್ದದ ನೆಗೆಟಿವ್ ವಿಶ್ವದ ಅತಿ ದೊಡ್ಡ ನೆಗೆಟಿವ್ ಎಂದು ಕ್ಲೇಮ್ ಮಾಡಿದ್ದರು. ಅದನ್ನು ಗಿನ್ನಿಸ್ ದಾಖಲೆ ಪುಸ್ತಕದಲ್ಲಿ ಸೇರಿಸುವುದಾಗಿಯೂ ಪ್ರಕಟಿಸಿದ್ದರು. ಮುಂದೆ ಅದೇನಾಯಿತೊ ಗೊತ್ತಿಲ್ಲ. ಮುಂತಕಾ ಬಳಿ ಎಂಟು ಅಡಿ ಉದ್ದದ ಬೃಹತ್ ನೆಗೆಟಿವ್ ಇದ್ದರೂ ಅದು ಯಾವುದೇ ದಾಖಲೆಯ ಪುಸ್ತಕದಲ್ಲಿ ಸೇರ್ಪಡೆಯಾಗಿಲ್ಲ.

ಈ ರೀತಿಯ ನೆಗೆಟಿವ್‌ಗಳಿಗೆ ರೋಲ್ ಅಥವಾ ಫಿಲಂ ಎಲ್ಲಿಂದ ದೊರೆಯುತ್ತವೆ ಎಂಬ ಕುತೂಹಲ ಮೂಡುವುದು ಕೂಡ ಸಹಜ. ಹಿಂದೆ ಪತ್ರಿಕೆಗಳಲ್ಲಿ ಮತ್ತು ಪುಸ್ತಕಗಳಲ್ಲಿ ಛಾಯಾಚಿತ್ರಗಳನ್ನು ಮುದ್ರಿಸುವುದಕ್ಕಾಗಿ ಚಿತ್ರಗಳ ಬ್ಲಾಕ್ ಮಾಡುವ ಪದ್ಧತಿ ಇತ್ತು. ಅದಕ್ಕೆ ದೊಡ್ಡ ಗಾತ್ರದ ಮತ್ತು ಉದ್ದನೆಯ ಫಿಲಂ ಬೇಕಾಗುತ್ತಿತ್ತು. ಬ್ಲಾಕ್ ಮೇಕಿಂಗ್ ಫಿಲಂ ಅನ್ನೇ ಮುಂತಕಾ ಅವರು ಫೋಟೊ ತೆಗೆಯುವುದಕ್ಕಾಗಿ ಬಳಸಲು ಆರಂಭಿಸಿದರು. ಆ ದಿನಗಳಲ್ಲಿ ಬಲ್ಕ್ ಫಿಲಂ ಸಿಗುತ್ತಿತ್ತು. ಕೊಡ್ಯಾಕ್ ಕಂಪೆನಿಯ 100 ಫೀಟ್‌ನ ಫಿಲಂಅನ್ನು ಸೌದಿ ಅರೇಬಿಯಾದಲ್ಲಿ ಇರುವ ಮುಂತಕಾ ಅವರ ಸಹೋದರ ಕಳುಹಿಸಿದ್ದರು. ಅದನ್ನೇ ಅವರು ಗ್ರೂಪ್ ಫೋಟೊಗಳಿಗೆ ಬಳಸುತ್ತ ಬಂದರು.

ಮುಂಬೈನಲ್ಲಿ ಬೀದರ್ ಮೂಲದ ಮಾಲೀಕರ ಹೋಟೆಲ್ ಇದೆ. ಮುಂತಕಾ ಅವರು ಮುಂಬೈಗೆ ಹೋದಾಗ ಅದೇ ಹೋಟೆಲ್‌ನಲ್ಲಿ ಉಳಿಯುತ್ತಾರೆ. ಮುಂತಕಾ ಹೋಟೆಲ್ ಮಾಲೀಕರಿಗೆ ಹಳೆ ಪರಿಚಯದ ವ್ಯಕ್ತಿ. ಕ್ಯಾಮರಾ ಮತ್ತು ಫೋಟೊಗ್ರಫಿಗೆ ಸಂಬಂಧಿಸಿದಂತೆ ಹುಚ್ಚಿರುವ ವ್ಯಕ್ತಿ ಎಂಬುದು ಹೋಟೆಲ್ ಮಾಲೀಕರಿಗೆ ಚೆನ್ನಾಗಿ ಗೊತ್ತಿತ್ತು. ಮುಂತಕಾ ಸರ್ಕ್ಯೂಟ್ ಕ್ಯಾಮರಾ ಬಳಸಿ ತೆಗೆದ ಫೋಟೊಗಳನ್ನು ಅವರು ನೋಡಿದ್ದರು.

ಒಂದು ದಿನ ಹೋಟೆಲ್‌ನ ರಿಸಿಪ್ಷನ್‌ನಲ್ಲಿ ವ್ಯಕ್ತಿಯೊಬ್ಬರು ನಾಲ್ಕಾರು ಫೋಟೊಗಳನ್ನು ಜೋಡಿಸಿ ಒಂದು ಫೋಟೊ ಸಿದ್ಧಪಡಿಸುತ್ತಿದ್ದರು. ಅದನ್ನು ನೋಡಿದ ಹೋಟೆಲ್ ಮಾಲೀಕರು ಆ ವ್ಯಕ್ತಿಗೆ ಏನು ಮಾಡುತ್ತಿದ್ದೀರಿ? ಎಂದು ಪ್ರಶ್ನಿಸಿದರು. ಅದಕ್ಕೆ ಆ ವ್ಯಕ್ತಿಯು 'ನಾನು ಬಾಗ್ವಾನ್ ಅಂಡ್ ಬಾಗ್ವಾನ್ ಅಸೋಸಿಯೇಟ್ಸ್ ಸಂಸ್ಥೆಗೆ ಸೇರಿದ ವಾಸ್ತುಶಿಲ್ಪಿ (ಅರ್ಕಿಟೆಕ್ಟ್)' ಎಂದು ತಮ್ಮನ್ನು ಪರಿಚಯಿಸಿಕೊಂಡರು. ಪುಣೆ ಹತ್ತಿರ ಕೈಗೆತ್ತಿಕೊಂಡಿರುವ ದೊಡ್ಡ ಪಾರ್ಕ್ ನಿರ್ಮಾಣ ಕಾಮಗಾರಿ ಆರಂಭಿಸುವ ಮುನ್ನ ಆ ಪ್ರದೇಶದ ಫೋಟೊ ತೆಗೆದು ದಾಖಲಿಸುತ್ತಿದ್ದೇನೆ. ಗುಡ್ಡ ಬೆಟ್ಟಗಳಿಂದ ಕೂಡಿದ ಪ್ರದೇಶವನ್ನು ಒಂದೇ ಫ್ರೇಮ್‌ನಲ್ಲಿ ಸೆರೆ ಹಿಡಿಯುವುದು ಸಾಧ್ಯವಿಲ್ಲ. ಆದ್ದರಿಂದ ನಾಲ್ಕಾರು ಫೋಟೊ ಬಳಸಿ ಒಂದು ಚಿತ್ರ ಮಾಡುತ್ತಿದ್ದೇನೆ. ಇದರಿಂದ ಇಡೀ ಪ್ರದೇಶದ ಚಿತ್ರಣ ಕೊಡುವುದು ಸಾಧ್ಯವಾಗುತ್ತದೆ' ಎಂದು ವಿವರಿಸಿದರು. ಅದಕ್ಕೆ ಹೋಟೆಲ್ ಮಾಲೀಕರು 'ಬೀದರ್‌ನಲ್ಲಿ ಒಬ್ಬ ಫೋಟೊಗ್ರಾಫರ್ ಇದ್ದಾರೆ. ಅವರು ಒಂದೇ ನೆಗೆಟಿವ್ ಮೇಲೆ 180 ಡಿಗ್ರಿ ವರೆಗೂ ಫೋಟೊ ತೆಗೆಯಬಲ್ಲರು. ಇಡೀ ಪ್ರದೇಶವನ್ನು ಒಂದೇ ಫೋಟೊದಲ್ಲಿ ದಾಖಲಿಸಿಕೊಡುತ್ತಾರೆ. ನೀವು ತಿಳಿಸಿದರೆ ಅವರನ್ನು ಕರೆಸುವುದಾಗಿಯೂ ಹೇಳಿದರು.

ಅದಕ್ಕೆ ಸಮ್ಮತಿಸಿದ ವಾಸ್ತುಶಿಲ್ಪಿಯು ಕರೆಸಿ ಸಹಕರಿಸುವಂತೆ ಮನವಿ ಮಾಡಿದರು. ಆಗ ಕ್ಯಾಮರಾ ತೆಗೆದುಕೊಂಡು ಮುಂಬೈಗೆ ಬರುವಂತೆ ಮುಂತಕಾ ಅವರಿಗೆ ಕರೆ ಬಂತು. ಪ್ರತಿ ಸಲ ಹೋದಾಗಲೂ ಉಳಿಯುವುದಕ್ಕೆ ಅವಕಾಶ ಕಲ್ಪಿಸುವ ಹೋಟೆಲ್ ಮಾಲೀಕರ ಪ್ರೀತಿ, ವಿಶ್ವಾಸಕ್ಕೆ ಕಟ್ಟುಬಿದ್ದು ತಮ್ಮ ಬಳಿ ಇದ್ದ ಮ್ಯಾಜಿಕ್ ಬಾಕ್ಸ್ ತೆಗೆದುಕೊಂಡು ಮುಂಬೈಗೆ ಪ್ರಯಾಣ ಬೆಳೆಸಿದರು. ಅಲ್ಲಿ ವಾಸ್ತುಶಿಲ್ಪಿಯೊಂದಿಗೆ ಭೇಟಿಯ ನಂತರ ಕ್ಯಾಮರಾ ಮತ್ತು ಫಿಲಂಗಳೊಂದಿಗೆ ಪುಣೆಗೆ ಹೋದರು. ನಂತರ ಪುಣೆಯ ಹತ್ತಿರ ನಿರ್ಮಾಣವಾಗಲಿದ್ದ ಸ್ನೇಕ್ ಗಾರ್ಡನ್ ಸ್ಥಳಕ್ಕೆ ಹೋಗಿ ಹಳೆಯ ವಾತಾವರಣವನ್ನು ದಾಖಲಿಸಿ ಇಟ್ಟುಕೊಳ್ಳಲು ನಿರ್ಧರಿಸಿದರು.

ಪುಣೆಯಲ್ಲಿದ್ದು ನಾಲ್ಕೈದು ದಿನ ಕೆಲಸ ಮಾಡಿದರು. ಕಂಪೆನಿಯವರು ನಾಲ್ಕು ಫೋಟೊ ತೆಗೆಯುವಂತೆ ಹೇಳಿದ್ದರು. ಎರಡರ ಟ್ರಯಲ್ ನೋಡಿ ನಂತರ ಮತ್ತೆರಡು ತೆಗೆಯಬಹುದು ಎಂದು ಮುಂತಕಾ ಕೆಲಸ ಮುಗಿಸಿ ಮುಂಬೈಗೆ ಮರಳಿದರು. ಮತ್ತದೇ ಹೋಟೆಲ್‌ಗೆ ಹೋದರು. ಬ್ಯಾಗ್‌ನಲ್ಲಿ ಸ್ವಲ್ಪ ಫಿಲಂ ಉಳಿದಿತ್ತು. ಕ್ಯಾಮರಾ ಹೊತ್ತು ಮುಂಬೈಗೆ ಬಂದದ್ದಾಗಿದೆ. ಒಂದು ಫೋಟೊ ಯಾಕೆ ತೆಗೆಯಬಾರದು ಎಂಬ ಯೋಚನೆ ಬಂತು. ಅದನ್ನು ಜಾರಿಗೆ ತರಲು ನಿರ್ಧರಿಸಿದರು. ಶಿವಾಜಿ ಪಾರ್ಕ್‌ನಲ್ಲಿ ನಿಂತು ಫೋಟೊ ಕ್ಲಿಕ್ಕಿಸಲು ನಿರ್ಧರಿಸಿದರು. ಆದರೆ, ಆ ಪಾರ್ಕ್‌ನ ನಿರ್ವಹಣೆಯನ್ನು ಖಾಸಗಿ ಕಂಪೆನಿಯವರು ನೋಡಿಕೊಳ್ಳುತ್ತಿದ್ದರು. ಅಲ್ಲಿ ನಿಂತು ಕ್ಲಿಕ್ಕಿಸುವುದಕ್ಕಾಗಿ ಪರವಾನಗಿ ಪಡೆಯುವುದು ಅನಿವಾರ್ಯ

ಆಗಿತ್ತು. ಪರವಾನಗಿ ಕೇಳಿ ನಾಲ್ಕು ಗಂಟೆ ಕಾದು ಕುಳಿತರು. ಕೊನೆಗೂ ಅನುಮತಿ ದೊರೆಯಿತು.

ಸ್ಟ್ಯಾಂಡ್ ಹಾಕಿ ಸರ್ಕ್ಯೂಟ್ ಕ್ಯಾಮರಾ ಬಳಸಿ ಚಿತ್ರೀಕರಿಸಲು ಆರಂಭಿಸಿದರು. ವಿವೇಕಾನಂದ ಪ್ರತಿಮೆ, ಇಂಡಿಯಾ ಗೇಟ್ ನಂತರ ರಸ್ತೆ ಮತ್ತು ತಾಜಮಹಲ್ ಹೋಟೆಲ್ ಹಾಗೂ ಶಿವಾಜಿ ಗಾರ್ಡನ್‌ನಲ್ಲಿ ಇರುವ ಶಿವಾಜಿ ಪ್ರತಿಮೆಗಳನ್ನು ಸೆರೆ ಹಿಡಿದ ಕ್ಯಾಮರಾ ನಿಶ್ಚಲವಾಯಿತು. ಕ್ಯಾಮರಾ ಪೆಟ್ಟಿಗೆ ಫಿಲಂ ರೋಲ್‌ಗಳೊಂದಿಗೆ ಬೀದರ್‌ಗೆ ಬಂದ ಮುಂತಕಾ ಪ್ರಿಂಟ್ ಹಾಕಿ ನೋಡಿದರೆ ಅಲ್ಲೊಂದು ಅದ್ಭುತ ಲೋಕವೇ ಅನಾವರಣಗೊಂಡಿತ್ತು. ಹಿಂದೆಂದೂ ಕಂಡು ಕೇಳಿರದ ಫ್ರೇಮ್‌ನಲ್ಲಿ ಚಿತ್ರ ಬಂಧನಕ್ಕೆ ಒಳಗಾಗಿತ್ತು. ಚೌಕಟ್ಟಿನಾಚೆಗೆ ಬೆಳೆದು ನಿಂತ ಚಿತ್ರ ಅದಾಗಿತ್ತು. ಚಿನ್ನದ ಚೌಕಟ್ಟನ್ನೂ ಮೀರಿಸುವ ಗುಣಮಟ್ಟದ ಚಿತ್ರ ದಾಖಲಾಗಿತ್ತು. ಪುಣೆಯ ಚಿತ್ರಗಳು ಮತ್ತು ಮುಂಬೈನ ಅದ್ಭುತ ಚಿತ್ರದ ಪ್ರಿಂಟ್‌ಗಳೊಂದಿಗೆ ಮುಂಬೈಗೆ ತೆರಳಿದರು.

ಮುಂತಕಾ ಅವರ ಫೋಟೋಗಳನ್ನು ನೋಡಿ ಆರ್ಕಿಟೆಕ್ಟ್ ಬಹಳ ಖುಷಿ ಪಟ್ಟರು. ನಂತರ ತಾಜಮಹಲ್ ಹೋಟೆಲ್‌ನವರ ಹತ್ತಿರ ಕರೆದುಕೊಂಡು ಹೋದರು. ತಾಜಮಹಲ್ ಹೋಟೆಲ್ ಮಾಲೀಕರು ಫೋಟೊ ಪ್ರಿಂಟ್ ಖರೀದಿಸಿ ಹೋಟೆಲ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಕಟ್ಟು ಹಾಕಿಸಿ ಹಾಕಿಕೊಂಡರು. ಅದಕ್ಕೆ ಸೂಕ್ತ ಸಂಭಾವನೆಯನ್ನೂ ನೀಡಿದರು.

ಅದಾದ ಮೇಲೆ ವಾಸ್ತುಶಿಲ್ಪಿಯು 'ನನ್ನ ಪ್ರಾಜೆಕ್ಟ್‌ನ ಕಲರ್ ಫೋಟೊ ತೆಗೆಯಬೇಕು' ಎಂದು ಕೋರಿದರು. ಅದಕ್ಕೆ ಬೇಕಾದ ವಸ್ತುಗಳು ಜಗತ್ತಿನಲ್ಲಿ ಎಲ್ಲಿಯೇ ಸಿಗಲಿ ಅದನ್ನು ತರಿಸಿ ಕೊಡುತ್ತೇನೆ' ಎಂದು ಆಶ್ವಾಸನೆ ನೀಡಿದರು. ಆದರೆ, ಮುಂತಕಾ ಅವರಿಗೆ ಕಲರ್‌ನಲ್ಲಿ ಕ್ಲಿಕ್ಕಿಸಿ ಅದರಲ್ಲಿ ಯಶ ಪಡೆಯುವುದು ಸಾಧ್ಯವಾಗಲಿಲ್ಲ. ಅದಕ್ಕೆ ಮುಂತಕಾ ಹೀಗೆ ಕಾರಣ ನೀಡುತ್ತಾರೆ 'ಕಲರ್‌ನಲ್ಲಿ ಬಹಳಷ್ಟು ಮಿತಿಗಳಿಗೆ. ಕಲರ್ ಸಪರೇಷನ್ ಮುಂತಾದ ಸಮಸ್ಯೆಗಳಿವೆ. ಮ್ಯಾನುವೆಲ್ ಆಗಿ ಕೆಲಸ ಮಾಡಬೇಕಾಗುತ್ತಿತ್ತು. ಕಲರ್‌ನಲ್ಲಿ ತೆಗೆಯಲು ಪ್ರಯತ್ನಿಸಿದ್ದೇ ಯಶಸ್ವಿಯಾಗಲಿಲ್ಲ. ಆ ಬಗ್ಗೆ ಬೇಸರವೇನಿಲ್ಲ' ಎಂದು ಹೇಳುತ್ತಾರೆ.

ಆಗ ಆರಂಭಿಸಿದ ಸರ್ಕ್ಯೂಟ್ ಕ್ಯಾಮರಾ ಬಳಸಿ ಕಲರ್ ರೀಲ್‌ನಲ್ಲಿ ಎಕ್ಸ್‌ಪೋಸ್ ಮಾಡುವ ಪ್ರಯತ್ನವನ್ನು ಈಗಲೂ ಕೈಬಿಟ್ಟಿಲ್ಲ. ಅದು ಅವರ ಅತ್ಯಂತ ಮಹತ್ವಾಕಾಂಕ್ಷೆಯ ಕನಸು. ಈಗ ಅದೇ ವಿಧಾನದಿಂದ ಫ್ಯೂಜಿ ಕಂಪೆನಿಯ ಎಜೆಕ್ಟಾ ಕ್ಯಾಮರಾ ಬಳಸಿ 360 ಡಿಗ್ರಿ ಫೋಟೊ ತೆಗೆಯಲು ಉದ್ದೇಶಿಸಿದ್ದಾರೆ. ಆ ಬಗ್ಗೆ ಪ್ರತಿನಿತ್ಯ ಹತ್ತಾರು ಗಂಟೆ ಕೆಲಸ ಮಾಡುತ್ತಿದ್ದಾರೆ. ನಮ್ಮ ಸುತ್ತ ಸುತ್ತುವರೆದಿರುವ ಮತ್ತು ಗೋಚರವಾಗುವ ಎಲ್ಲವನ್ನೂ ಒಂದೇ ನೆಗೆಟಿವ್‌ನಲ್ಲಿ ಸೆರೆ ಹಿಡಿವ ಹಠ ಅವರದ್ದು. ಈ ನಿಟ್ಟಿನಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ. ಕೆಲವು ಕಡೆ ಶೇಕ್ ಆಗುತ್ತಿದೆ. ಆ ಸಮಸ್ಯೆಯನ್ನು ಬಗೆ ಹರಿಸಿಕೊಂಡರೆ

ಕೆಲವೇ ದಿನಗಳಲ್ಲಿ ಪೂರ್ಣ 360 ಡಿಗ್ರಿ ಫೋಟೊ ಒದಗಿ ಬರಲಿದೆ. ಆ ಬಗ್ಗೆ ಮುಂತಕಾ ಹೇಳುವುದು ಇಷ್ಟು 'ರೀಲ್‌ನ ಕಾಲ ಮುಗಿದು ಹೋಗಿದೆ. ಮಾರುಕಟ್ಟೆಯಲ್ಲಿ ರೀಲ್ ಸಿಗುವುದು ಕಷ್ಟವಾಗಿದೆ. ಈ ಕೆಲಸವನ್ನು ಡಿಜಿಟಲ್ ಕ್ಯಾಮರಾ ಬಳಸಿ ಮಾಡುವುದು ಸುಲಭ ಎಂಬುದು ಗೊತ್ತಿದೆ. ಆದರೆ, ರೀಲ್ ಕ್ಯಾಮರಾದಲ್ಲಿ ಅದನ್ನು ತರುವುದು ಬಹಳ ಕಷ್ಟ. ಅದನ್ನು ಮಾಡುತ್ತಿದ್ದೇನೆ. ಎರಡು ಅಥವಾ ಮೂರು ಫ್ರೇಮ್‌ಗಳಲ್ಲಿ ಕ್ಲಿಕ್ಕಿಸಿ ಸೇರಿಸಿದರೆ ಆ್ಯಂಗಲ್ ಕರೆಕ್ಟ್ ಆಗಿ ಸಿಗುವುದಿಲ್ಲ. ಆದ್ದರಿಂದ ಎಲ್ಲವೂ ಸಮಾನವಾಗಿ ಸೆರೆ ಹಿಡಿಯಲಾಗುವ ವ್ಯವಸ್ಥೆ ಮಾಡುತ್ತಿದ್ದೇನೆ' ಎಂದು ವಿವರಿಸುತ್ತಾರೆ. ಬೀದರ್‌ನ ಅದ್ಭುತ ಕೋಟೆಯನ್ನು ಯಾವ ಫೋಟೋಗ್ರಾಫರ್‌ನೂ ಸಂಪೂರ್ಣವಾಗಿ, ಸೊಗಸಾಗಿ ಸೆರೆ ಹಿಡಿಯಲು ಸಾಧ್ಯವಿಲ್ಲ. ಅದಕ್ಕೆ ಸುತ್ತ ಮುತ್ತಲೂ ನಯನಮನೋಹರ ದೃಶ್ಯ ತೋರುವ ಕಟ್ಟಡಗಳಿರುವುದೇ ಕಾರಣ. 360 ಡಿಗ್ರಿಯಿಂದ ತೆಗೆಯುವ ಫೋಟೊದಲ್ಲಿ ಕೋಟೆಯನ್ನು ಸೆರೆ ಹಿಡಿಯಬಹುದು. ಅದನ್ನು ಪ್ರಯತ್ನಿಸುವುದಕ್ಕಾಗಿಯೇ ಬೀದರ್‌ನಲ್ಲಿ ಉಳಿದಿದ್ದೇನೆ' ಎಂದು ಹೇಳುತ್ತಾರೆ. ಅವರ ಕನಸು ಈಡೇರಲಿ ಸಾಧ್ಯವಾದಷ್ಟು ಬೇಗ 360 ಡಿಗ್ರಿ ಫೋಟೊ ಕ್ಲಿಕ್ಕಿಸಲಿ.

■

# 04 ಕ್ಯಾಮರಾ ಎಂಜಿನಿಯರ್

ಮುಂತಕಾ ಅವರನ್ನು 'ಕ್ಯಾಮರಾ ಎಂಜಿನಿಯರ್' ಎಂದು ಕರೆಯಬಹುದು. ಅವರೊಬ್ಬ ಛಾಯಾಗ್ರಾಹಕ ಎನ್ನುವುದಕ್ಕಿಂತ ಎಂಜಿನಿಯರ್ ಎನ್ನುವುದೇ ಹೆಚ್ಚು ಸೂಕ್ತ. ಹಳೆಯ, ಮೂಲೆಗುಂಪಾದ ಕ್ಯಾಮರಾಗಳನ್ನು ಬಿಚ್ಚಿ ಅವುಗಳಿಂದ ಒಳ್ಳೆಯ ಅಂಶಗಳಿರುವ ಭಾಗಗಳನ್ನು ಆರಿಸಿ ಅದನ್ನು ಮತ್ತೊಂದು ಕ್ಯಾಮರಾಕ್ಕೆ ಅಳವಡಿಸುತ್ತಾರೆ. ಹೀಗೆ ಹತ್ತಾರು ಕ್ಯಾಮರಾಗಳ ಒಂದೊಂದು ಭಾಗವು ಸೇರಿ 'ಹೊಸ ಕ್ಯಾಮರಾ' ಸಿದ್ಧವಾಗುತ್ತದೆ. ಅದು ನಿಕಾನ್, ಕೊಡ್ಯಾಕ್, ಕ್ಯಾನನ್, ಸೋನಿ ಕಂಪೆನಿಗಳಿಗೆ ಸೇರಿದ ಕ್ಯಾಮರಾ ಆಗಿರುವುದಿಲ್ಲ. ಅಪ್ಪಟ ದೇಸಿ ಎಂಜಿನಿಯರ್‌ನ ಕೈಯಲ್ಲಿ ಅರಳಿದ ನೂತನ ಕ್ಯಾಮರಾ ಆಗಿರುತ್ತದೆ. ತನ್ನದೇ ಗುಣ ಲಕ್ಷಣಗಳನ್ನು ಹೊಂದಿರುವ ಈ ಕ್ಯಾಮರಾ ಸಹಜವಾಗಿಯೇ ಮತ್ತು ನಿಜವಾದ ಅರ್ಥದಲ್ಲಿ ಅನನ್ಯವೂ ಅದ್ಭುತವೂ ಆಗಿರುತ್ತದೆ.

ಹತ್ತಾರು ದೇಶಗಳ ವಿವಿಧ ಕ್ಯಾಮರಾ ತಯಾರಿಕಾ ಕಂಪೆನಿಗಳು ತಯಾರಿಸಿದ ಕ್ಯಾಮರಾಗಳ ಬಿಡಿಭಾಗಗಳು ಸೇರಿಸಿದ 'ಮುಂತಕಾ ಕ್ಯಾಮರಾ' ನೀಡುವ ಫಲಿತಾಂಶ ವಿಶಿಷ್ಟವಾಗಿರುತ್ತದೆ. ಅದರ ಫಲಿತಾಂಶವು ಕೇವಲ ಖಚಿತತೆ ಮತ್ತು ನಿಖರತೆಗೆ ಮಾತ್ರ ಸೀಮಿತವಾಗಿರದೇ ಗುಣಮಟ್ಟದ ಅದ್ಭುತ ಚಿತ್ರ ಒದಗಿಸುತ್ತದೆ. ಶಟರ್ ಸ್ಪೀಡ್ ಮತ್ತು ಬೆಳಕಿಗೆ ಅನುಗುಣವಾಗಿ ತೆರೆದುಕೊಳ್ಳುವಂತೆ ಕ್ಯಾಮರಾ ರೂಪಿಸಿರುತ್ತಾರೆ.

ಜಪಾನ್ ದೇಶದ ಕಂಪೆನಿ ತಯಾರಿಸಿದ ಕ್ಯಾಮರಾದ ಲೆನ್ಸ್, ಜರ್ಮನಿಯ ಬಾಡಿ, ಇಂಗ್ಲೆಂಡ್‌ನ ಶಟರ್ಸ್ ಮತ್ತು ಅಮೆರಿಕಾದ ಫ್ಲ್ಯಾಷ್‌ಗಳನ್ನು ಒಂದೆಡೆಗೆ ಸೇರಿಸಿ ಮುಂತಕಾ ಕಂಪೆನಿಯಲ್ಲಿ ನಿರ್ಮಿತವಾದ ಕ್ಯಾಮರಾದಲ್ಲಿ ಕ್ಲಿಕ್ಕಿಸಿದ ಚಿತ್ರಗಳನ್ನು ಬೇರೆಯವರು ಮುದ್ರಿಸುವ ಹಾಗಿಲ್ಲ. ಅವು ತನ್ನದೇ ವೈಶಿಷ್ಟ್ಯಗಳಿಂದ ಕೂಡಿರುತ್ತವೆ. ಮುಂತಕಾ ಕ್ಲಿಕ್ಕಿಸಿದ ಚಿತ್ರಗಳನ್ನು ಎಲ್ಲರೂ ಪ್ರಿಂಟ್ ಹಾಕಿ ಕೊಡಲು ಸಾಧ್ಯವಿಲ್ಲ. ಡೆವಲಪ್ ಮಾಡುವುದು, ಎನ್‌ಲಾರ್ಜ್ ಮಾಡುವದು ಮತ್ತು ಪ್ರಿಂಟ್ ಮಾಡುವುದಕ್ಕೆ ಕೂಡ ಮುಂತಕಾ ಅವರದ್ದೇ ವಿಶೇಷ ಕೌಶಲ್ಯ ಬೇಕಾಗುತ್ತದೆ. ಅದಕ್ಕಾಗಿಯೇ ಅವರ ಚಿತ್ರಗಳು ಚೌಕಟ್ಟಿಗೆ ಸೀಮಿತವಾಗದೆ ಅನನ್ಯವಾಗಿರುತ್ತವೆ.

ಮುಂಬೈನ ಚೋರ್‌ಬಜಾರ್‌ನಲ್ಲಿ ಅಕ್ಷರಶಃ ಗುಜರಿಯಲ್ಲಿ ದೊರೆತ ಕ್ಯಾಮರಾವನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬಳಸುತ್ತಿದ್ದ ಮಾದರಿಯಲ್ಲಿ ಸಿದ್ಧಪಡಿಸಿದ್ದು ರೋಚಕ ಕಥೆ. ಅದು ಒತ್ತಟ್ಟಿಗಿರಲಿ. ಆ ಕ್ಯಾಮರಾ ಬಳಸಿ ಗ್ರೂಪ್ ಫೋಟೊ ತೆಗೆಯುವುದರಲ್ಲಿ ಮುಂತಕಾ ಎಕ್ಸ್‌ಪರ್ಟ್. ಕ್ಯಾಮರಾ ಮತ್ತು ಅದರ ಬಿಡಿಭಾಗಗಳನ್ನು ಮುಂಬೈನಿಂದ

ಬೀದರ್‌ಗೆ ಸಾಗಿಸುವುದಕ್ಕಾಗಿಯೇ ಒಂದು ವರ್ಷವನ್ನು ತೆಗೆದುಕೊಂಡ ಮುಂತಕಾ ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂದು ಅರಿಯುವುದಕ್ಕಾಗಿ ಮತ್ತೊಂದು ವರ್ಷ ತೆಗೆದುಕೊಂಡರು. ಕ್ಯಾಮರಾದ ವಿವರಗಳನ್ನು ಸ್ಕೆಚ್ ಮಾಡಿಕೊಂಡು ಸಿಕ್ಕ ಸಿಕ್ಕ ಅಥವಾ ಭೇಟಿಯಾದ ದೊಡ್ಡ ಫೋಟೊಗ್ರಾಫರ್‌ಗಳ ಬಳಿ ಹೋಗಿ ಕ್ಯಾಮರಾದ ಬಗ್ಗೆ ಮಾಹಿತಿ ಪಡೆದರು. ಮುಂಬೈ ಮೂಲದ ಫೋಟೊಗ್ರಾಫರ್ ಒಬ್ಬರು ಈ ಕ್ಯಾಮರಾದ ವಿವರ ಕೇಳಿ ಬೆಕ್ಕಸ ಬೆರಗಾದರು.

ಆ ಮಾದರಿಯಲ್ಲಿ ಕೇವಲ ಐದು ಕ್ಯಾಮರಾಗಳನ್ನು ಮಾತ್ರ ತಯಾರಿಸಲಾಗಿತ್ತು ಎಂಬ ಅಂಶವನ್ನು ವಿವರಿಸಿದ ಫೋಟೋಗ್ರಾಫರ್ ಅದನ್ನು ಮ್ಯೂಸಿಯಂನಲ್ಲಿ ಇಡುವುದಕ್ಕೆ ನೀಡಿದರೆ ಎರಡು ಲಕ್ಷ ರೂಪಾಯಿ ನೀಡುವುದಾಗಿ ಆಮಿಷ ಒಡ್ಡಿದರು. ಅದಕ್ಕೆ ಮಣಿಯದ ಮುಂತಕಾ ಮಾರುವ ಇರಾದೆಯ ಬದಲಿಗೆ ಅದನ್ನು ಕಲಿಯುವ ಬಗ್ಗೆ ಆಸಕ್ತಿ ತೋರಿಸಿದರು. ಕ್ಯಾಮರಾದ ಮಹತ್ವ ಅರಿತು ಓಡೋಡಿ ಬೀದರ್‌ಗೆ ಬಂದ ಮುಂತಕಾ ಎಂದಿನಂತೆ ಎಕ್ಸಪರಿಮೆಂಟ್ ಆರಂಭಿಸಿದರು.

ಕ್ಯಾಮರಾದ ಬಿಡಿ ಭಾಗಗಳನ್ನು ಬಿಚ್ಚುವುದು ಮತ್ತೆ ಅದನ್ನು ಜೋಡಿಸುವ ಹವ್ಯಾಸ ಮುಂತಕಾ ಅವರಿಗೆ ಬಾಲ್ಯದ ದಿನಗಳಿಂದಲೂ ರೂಢಿಯಾಗಿತ್ತು. ಸ್ಟುಡಿಯೋದಲ್ಲಿ ಖಾಲಿ ಕುಳಿತಿದ್ದ ವೇಳೆಯಲ್ಲಿ ಕ್ಯಾಮರಾ ಬಿಚ್ಚಿ ಅದು ಕಾರ್ಯ ನಿರ್ವಹಿಸುವ ರೀತಿ ಅರಿಯುವುದೇ ಮುಖ್ಯ ಹವ್ಯಾಸ. ಹಾಗೆ ನೋಡಿದರೆ ಫೋಟೊಗ್ರಫಿ ಅವರ ಎರಡನೇ ಹವ್ಯಾಸ. ಅದಕ್ಕೆ ಅವರು ಮಹತ್ವ ನೀಡಿದ್ದೂ ಕಡಿಮೆ.

ಜಗತ್ತಿನಾದ್ಯಂತ ಇರುವ ಐದೇ ಕ್ಯಾಮರಾಗಳ ಪೈಕಿ ಒಂದಾಗಿದ್ದನ್ನು ಬಿಚ್ಚಿ ಅದರ ಬಿಡಿಭಾಗಗಳನ್ನು ವಿವಿಧ ಕ್ಯಾಮರಾಗಳ ಜೊತೆ ಸೇರಿಸಿ ಹೊಸ ಕ್ಯಾಮರಾ ಸಿದ್ಧಪಡಿಸಿದರು. ಅದರ ಕಾರ್ಯವೈಖರಿ ಮತ್ತು ಕಾರ್ಯಕ್ಷಮತೆಯ ನಿಖರತೆ ಹಿಂದೆಂದಿಗಿಂತ ಹೆಚ್ಚು ಚುರುಕಾಗಿತ್ತು. ಮೂವಿ ಕ್ಯಾಮರಾದ ಸ್ಟ್ಯಾಂಡ್ ಬಳಸಿ ಕೀ ನೀಡುವ ಮೂಲಕ 0–180 ಡಿಗ್ರಿವರೆಗೆ ಫೋಟೊ ಕ್ಲಿಕ್ಕಿಸಬಹುದು ಎಂಬ ಅಂಶವನ್ನು ಮರುಪತ್ತೆ ಹಚ್ಚಿದರು. ಅದು ಅವರ ಫೋಟೊಗ್ರಫಿ ಬದುಕಿನ ಮಹತ್ವದ ಶೋಧ ಎಂದೇ ಹೇಳಬೇಕು.

ನೂರಾರು ಜನರ ಗ್ರೂಪ್ ಫೋಟೊದಲ್ಲಿ ಪ್ರತಿಯೊಬ್ಬರನ್ನೂ ಗುರುತಿಸುವ ಹಾಗೆ ಸ್ಪಷ್ಟವಾಗಿ ಸೆರೆಹಿಡಿಯುವ ವಿಶಿಷ್ಟ ವಿಧಾನ ಅದಾಗಿತ್ತು. ಹೊಸ ಶೋಧದ ನಂತರ ಆ ಎಕ್ಸ್‌ಪರಿಮೆಂಟ್‌ಗೆ ಪೂರಕವಾಗಿ ಪ್ರತಿಸ್ಪಂದಿಸುವ ಗ್ರೂಪ್ ಸಿಗಲಿಲ್ಲ. ಹತ್ತಾರು ಜನರ ಸಮೂಹದ ಫೋಟೊ ಕ್ಲಿಕ್ಕಿಸಿದರೆ ಅದಕ್ಕೆ ಯಾವ ಮಹತ್ವವೂ ಬರುವುದಿಲ್ಲ ಎಂದು ಮುಂತಕಾ ಅರಿತಿದ್ದರು. ಹಲವರ ಮುಂದೆ ಈ ರೀತಿ ಕ್ಯಾಮರಾ ಸಿದ್ಧಪಡಿಸಿರುವುದಾಗಿ ವಿವರಿಸಿದರು. ಯಾರೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಫೋಟೊ ಕ್ಲಿಕ್ಕಿಸಿ ಅದರ ಪ್ರಿಂಟ್ ಹಾಕಿ ತೋರಿಸಿದ ಹತ್ತಾರು ವರ್ಷಗಳ ನಂತರವೂ ಜನ ಅದನ್ನು 'ವಾಸ್ತವ' ಎಂದು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಅಂತಹುದರಲ್ಲಿ ಕೇವಲ ಶೋಧದ ಬಗ್ಗೆ ಹೇಳಿದರೆ ಯಾರು ತಾನೆ ನಂಬಲು ಸಾಧ್ಯ?

ಹೀಗೆ ಫೋಟೊ ತೆಗೆಯಿಸಿಕೊಳ್ಳುವ ಸಮೂಹಕ್ಕಾಗಿ ಹುಡುಕಾಟ ನಡೆಸಲು ಆರಂಭಿಸಿದ ಮುಂತಕಾ ಸೂಕ್ತ ಸಮಯಕ್ಕಾಗಿ ಕಾದು ಕುಳಿತಿದ್ದರು. ಅನಾಯಾಸವಾಗಿ ಅಂತಹದ್ದೊಂದು ಅವಕಾಶವೂ ದೊರೆಯಿತು. ಬೀದರ್ ಡಿಸಿಸಿ ಬ್ಯಾಂಕ್ (ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್)ನ ಸಿಬ್ಬಂದಿ ಸಮೂಹ ಚಿತ್ರ ತೆಗೆಸಿಕೊಳ್ಳಲು ಬಯಸಿದರು. ಸಂದರ್ಭ ಬಳಸಿಕೊಂಡ ಮುಂತಕಾ ತಮ್ಮ ಶೋಧದ ಬಗ್ಗೆ ವಿವರಿಸಿದರು. ಅವರಿಗೆ ಕ್ಯಾಮರಾ ಮತ್ತು ಅದರ ವೈಶಿಷ್ಟ್ಯ ತಿಳಿಯುವುದು ಬೇಕಾಗಿರಲಿಲ್ಲ. ಫೋಟೊ ತೆಗೆದರೆ ಸಾಕು. ಪಯೋಗದ ಬಲಿಪಶುವಾಗುವುದಕ್ಕೆ ಮೊದಮೊದಲು ಹಿಂದೇಟು ಹಾಕಿದರು. ಪಟ್ಟುಬಿಡದ ಮುಂತಕಾ ಧೋರಣೆಯು ಅನಿವಾರ್ಯವಾಗಿ ಪ್ರಯೋಗಕ್ಕೆ ಒಪ್ಪಿಕೊಳ್ಳುವಂತೆ ಮಾಡಿತು.

150ಕ್ಕೂ ಹೆಚ್ಚು ಜನರನ್ನು ಅರೆಅರ್ಧ ವರ್ತುಲ ಆಕಾರದಲ್ಲಿ ಗೆರೆ ಕೊರೆದು ಅದೇ ರೀತಿಯಾಗಿ ಕುಳಿತು ಕೊಳ್ಳುವ ವ್ಯವಸ್ಥೆ ಮಾಡಿದರು. ಫೋಟೊ ತೆಗೆಸಿಕೊಳ್ಳುವವರಿಗೆಲ್ಲ ಹೊಸ ವಿಧಾನದ ಬಗ್ಗೆ ವಿವರಿಸಿದರು. ಕ್ಲಿಕ್ ಆದ ತಕ್ಷಣ ಎದ್ದು ಹೊರಡಬೇಕಿಲ್ಲ. ಕ್ಯಾಮರಾದ ಮುಖ ಪ್ರತಿಯೊಬ್ಬರ ಕಡೆಗೂ ಕೆಲವು ಸೆಕೆಂಡುಗಳಷ್ಟು ಕಾಲ ನೋಡುತ್ತ ಅದನ್ನು ದಾಖಲಿಸಿಕೊಳ್ಳುತ್ತ ಹೋಗುತ್ತದೆ ಎಂಬ ವಿವರ ನೀಡಿದರು. ಅರ್ಧ ವರ್ತುಲ ಆಕಾರದಲ್ಲಿ ಕುಳಿತ ಪ್ರತಿಯೊಬ್ಬ ವ್ಯಕ್ತಿಯೂ ಮಧ್ಯದಲ್ಲಿ ಹಾಕಲಾದ ಕ್ಯಾಮರಾ ಸ್ಟ್ಯಾಂಡ್‌ನಿಂದ ನಿರ್ದಿಷ್ಟವಾದ ದೂರದಲ್ಲಿ ಇರುವಂತೆ ನೋಡಿಕೊಂಡರು. ಎಲ್ಲವೂ ರೆಡಿ. ಡಿಸಿಸಿ ಬ್ಯಾಂಕ್ ಸಿಬ್ಬಂದಿ ಬಂದು ಆಸೀನರಾದರು. ಅದೊಂದು ಅಪರೂಪದ ಕ್ಷಣ. ಅದುವರೆಗೆ 'ರೆಡಿ' ಎಂದು ಫೋಟೊ ತೆಗೆಯುವ ಬದಲು. ರೆಡಿಯಾಗಿರಿ ಫೋಟೊ ತೆಗೆಯುವುದು ಆರಂಭವಾಗುತ್ತದೆ ಎಂಬ ಸಂದೇಶದೊಂದಿಗೆ 'ಸೆರೆ' ಹಿಡಿಯುವುದು ಆರಂಭವಾಯಿತು. ಪ್ರತಿಯೊಬ್ಬರನ್ನೂ ಕೆಲ ಕಾಲ ದಾಖಲಿಸಿಕೊಂಡ ಕ್ಯಾಮರಾ ತನ್ನ ಪ್ರಕ್ರಿಯೆ ನಿಲ್ಲಿಸಿದಾಗ ತೆಗೆಸಿಕೊಂಡವರಿಗೆ ವಿಶಿಷ್ಟ ಅನುಭವ.

ಒಂದು ಅಡಿ ಅಗಲದ ನೆಗೆಟಿವ್ ಸುಮಾರು ಐದಾರು ಅಡಿಯಷ್ಟು ಉದ್ದವಿತ್ತು. ಫೋಟೊ ಪ್ರಿಂಟ್ ಹಾಕಿದ ಮೇಲೆ ನೋಡಿದರೆ ಆಯತ ಆಕಾರದ ಫೋಟೊ ಬದಲಿಗೆ ಉದ್ದನೆಯ ಸುರುಳಿ ಸುತ್ತುವಂತಹ ಫೋಟೊ ಹೊರ ಬಂದಿತ್ತು. ಗ್ರೂಪ್‌ನಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯ ಮುಖದ ಮೇಲಿನ ನಿರಿಗೆಗಳು, ಗುರುತುಗಳು ದಾಖಲಾಗಿದ್ದವು. ಫೋಟೊ ನೋಡಿ ಬೆಕ್ಕಸ ಬೆರಗಾಗುವ ಸರದಿ ಕೇವಲ ಫೋಟೊ ತೆಗೆಸಿಕೊಂಡವರಿಗೆ ಮಾತ್ರವಲ್ಲ, ಸ್ವತಃ ಮುಂತಕಾ ಕೂಡ ಬೆರಗಾದ ದಿನಗಳವು.

ಅದಾದ ಮೇಲೆ ಮುಂತಕಾ ಅವರ ಪ್ರಯೋಗಕ್ಕೆ ಸಹಕರಿಸಿದವರು ಕರ್ನಾಟಕ ಕಾಲೇಜಿನ ವಿದ್ಯಾರ್ಥಿ ಸಮೂಹ. ಮೊದಲಿನ ಫೋಟೊದ ನೆಗೆಟಿವ್‌ಗಿಂತ ಸ್ವಲ್ಪ ದೊಡ್ಡದಾದ ನೆಗೆಟಿವ್ ರೂಪುಗೊಂಡಿತು. ಪ್ರಯೋಗದ ಫಲಿತಾಂಶ ಅದ್ಭುತವಾಗಿ ಬೆಳೆಯಲು ಆರಂಭವಾಯಿತು. ಇದಾದ ನಂತರದ ಸರದಿ ಜಗತ್ತಿನ ಅತಿದೊಡ್ಡ ನೆಗೆಟಿವ್‌ನದ್ದು.

# 05 ಗುಜರಿಯಲ್ಲಿ ಸಿಕ್ಕ ಕ್ಯಾಮರಾ

ಹಿರಿಯ ಫೋಟೋಗ್ರಾಫರ್‌ಗಳೊಂದಿಗೆ ಮಾತನಾಡುವುದು, ಅವರಿಂದ ಮಾಹಿತಿ ಪಡೆಯುವುದು ಮತ್ತು ಕಲಿಯುವುದು ಮುಂತಕಾ ರೂಢಿಸಿಕೊಂಡಿರುವ ಸಂಪ್ರದಾಯ. ಕ್ಯಾಮರಾ ಮತ್ತು ಫೋಟೋಗ್ರಫಿಗೆ ಸಂಬಂಧಿಸಿದ ವ್ಯಕ್ತಿಗಳು ಸಿಕ್ಕರೆ ಅವರ ಹತ್ತಿರ ಅತ್ಯಂತ ಶ್ರದ್ಧೆಯಿಂದ ಕುಳಿತು ಕೊಂಡು ಮಾಹಿತಿ ಪಡೆಯುತ್ತಿದ್ದರು. ಬಾಲ್ಯದ ದಿನಗಳಿಂದಲೂ ಜೊತೆಯಾದ ಕ್ಯಾಮರಾ ಹುಚ್ಚು ಅವರನ್ನು ಬಹಳ ದೂರದವರೆಗೆ ಕರೆದುಕೊಂಡು ಬಂದಿದೆ.

ಹಲವಾರು ಫೋಟೋಗ್ರಾಫರ್‌ಗಳ ಒಡನಾಟ ಅವರಿಗೆ ಕ್ಯಾಮರಾ, ಬೆಳಕಿನ ಸಂಯೋಜನೆ ಸೇರಿದಂತೆ ಹತ್ತಾರು ಸಂಗತಿಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಲು ಕಾರಣವಾಗಿದೆ. ಹೀಗೆ ಮುಂತಕಾ ಅವರಿಗೆ ಫೋಟೋಗಫಿಗೆ ಸಂಬಂಧಿಸಿದಂತೆ ಪರಿಚಯವಾದವರು ನವಾಜ್ ಷರೀಫ್ ಎನ್ನುವ ಮದ್ರಾಸಿನ ಫೋಟೋಗ್ರಾಫರ್. ಅವರ ಜೊತೆಗಿನ ಚರ್ಚೆಯಲ್ಲಿ ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಗ್ರೂಪ್ ಫೋಟೋ ತೆಗೆಯುವುದಕ್ಕಾಗಿ ವಿಶೇಷ ಮಾದರಿಯ ಸರ್ಕ್ಯೂಟ್ ಕ್ಯಾಮರಾ ಬಳಸುತ್ತಿದ್ದರು ಎನ್ನುವ ವಿಷಯದ ಬಗ್ಗೆ ತಿಳಿಸಿದರು. ಸರ್ಕ್ಯೂಟ್ ಕ್ಯಾಮರಾ ಬಳಸಿ 400-500 ಜನರ ಗ್ರೂಪ್ ಫೋಟೋ ತೆಗೆಯಬಹುದಾಗಿತ್ತು. ಸಮೂಹದಲ್ಲಿ ನಿಂತಿರುವ ಪ್ರತಿಯೊಬ್ಬ ವ್ಯಕ್ತಿಯ ಮುಖವೂ ಸ್ಪಷ್ಟವಾಗಿ, ನಿಖರವಾಗಿ ದಾಖಲಿಸುತ್ತಿದ್ದ ಈ ಕ್ಯಾಮರಾ ಮತ್ತು ಸ್ಟ್ಯಾಂಡ್‌ಅನ್ನು ಲೆನಾಪ್ ಕಂಪೆನಿ ಸಿದ್ಧಪಡಿಸಿತ್ತು. ಕ್ಯಾಮರ ಬಹಳಷ್ಟು ದುಬಾರಿಯಾಗಿದ್ದ ಕಾರಣ ಹೆಚ್ಚು ಸಂಖ್ಯೆಯಲ್ಲಿ ಮಾರಾಟ ಆಗಲಿಲ್ಲ. ಆದರೆ, ಮುಂತಕಾಗೆ ಹಳೆಯ ಮಾರುಕಟ್ಟೆಯಲ್ಲಿ ಅಂತಹ ಕ್ಯಾಮರಾ ಸಿಗಬಹುದು ಎಂಬ ಆಸೆ ಇತ್ತು.

ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಮುಂಬೈಗೆ ಹೋಗುವುದು ಮತ್ತು ಅಲ್ಲಿನ ಚೋರ್ ಬಜಾರ್‌ಗೆ ಭೇಟಿ ನೀಡುವುದು ಮುಂತಕಾ ಅವರು ಹಲವು ಹವ್ಯಾಸಗಳಲ್ಲಿ ಒಂದು. ಅದರಲ್ಲೂ ಕ್ಯಾಮರಾಕ್ಕೆ ಸಂಬಂಧಿಸಿದ ಹಳೆಯ ವಸ್ತುಗಳನ್ನು ಖರೀದಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಕೇವಲ ಮುಂಬೈ ಮಾತ್ರವಲ್ಲ, ಹೈದರಾಬಾದ್ ಸೇರಿದಂತೆ ಯಾವುದೇ ಊರಿಗೆ ಹೋದರೂ ಹಳೆಯ ವಸ್ತುಗಳನ್ನು ಮಾರುವ ಅಂಗಡಿಗಳು, ಬಜಾರ್, ಮಾರುಕಟ್ಟೆಗೆ ಹೋಗುತ್ತಿದ್ದರು. ವೇಸ್ಟ್ ಆದ ಅಥವಾ ರಿಪೇರಿ ಮಾಡಲು ದುಬಾರಿಯಾದ ಕ್ಯಾಮರಾಗಳನ್ನು ಮನೆಯಲ್ಲಿ ಇಟ್ಟುಕೊಳ್ಳಲು ಹಿಂದೇಟು ಹಾಕುವ ಜನ ಅವುಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡಿ ಕೈ ತೊಳೆದುಕೊಂಡಿರುತ್ತಾರೆ. ದಸರಾ

ಮತ್ತು ಯುಗಾದಿಯ ಸಂದರ್ಭದಲ್ಲಿ ಮನೆ ಕ್ಲೀನ್ ಮಾಡುವಾಗ ಮಹಿಳೆಯರು ಬಹಳಷ್ಟು ವಸ್ತುಗಳನ್ನು ಗುಜರಿಯವರಿಗೆ ಮಾರಾಟ ಮಾಡುತ್ತಾರೆ.

ಹೀಗೆ ಹಳೆ ವಸ್ತುಗಳ ಬಜಾರಕ್ಕೆ ಬರುವ ಕ್ಯಾಮರಾ ಮತ್ತಿತರ ವಸ್ತುಗಳನ್ನು ನೋಡುವ ಮತ್ತು ಅಲ್ಲಿ ಖರೀದಿಸುವ ಹವ್ಯಾಸ ಕೂಡ ಮುಂತಕಾ ಅವರಿಗಿದೆ. ಅಂತಲ್ಲಿ ಯಾವುದೇ ನಿಗದಿತ ಬೆಲೆ ಇರುವುದಿಲ್ಲವಾದ್ದರಿಂದ ಚೌಕಾಸಿ ವ್ಯವಹಾರಕ್ಕೆ ಹೆಚ್ಚಿನ ಮಹತ್ವ ಇರುತ್ತದೆ. ಹತ್ತಾರು ಕ್ಯಾಮರಾ ಮತ್ತು ಲೆನ್ಸ್ ಮತ್ತು ಸ್ಟ್ಯಾಂಡ್‌ಗಳನ್ನು ಮುಂತಕಾ ಸೆಕೆಂಡ್ ಹ್ಯಾಂಡ್ ಮಾರ್ಕೆಟ್‌ನಲ್ಲಿಯೇ ಖರೀದಿಸಿದ್ದಾರೆ.

ಗ್ರೂಪ್ ಫೋಟೊ ತೆಗೆಯುವುದಕ್ಕಾಗಿಯೇ ರಷ್ಯನ್ ಕಂಪೆನಿಯೊಂದು ವಿಶೇಷ ಲೆನ್ಸ್ ಸಿದ್ಧಪಡಿಸಿದೆ. ಆ ಲೆನ್ಸ್ ಬಳಸಿ ಗ್ರೂಪ್ ಫೋಟೊ ತೆಗೆಯಬಹುದು. ಮೂರು ಪ್ರತ್ಯೇಕ ರೀತಿಯಲ್ಲಿ ಎಕ್ಸ್‌ಪೋಸ್ ಮಾಡಿ ಅವುಗಳನ್ನು ತಾನಾಗಿಯೇ ಜೋಡಿಸಿ ಒಂದೇ ನೆಗೆಟಿವ್ ಎಂದು ಕಾಣಿಸುವ ಹಾಗೆ ಮಾಡುತ್ತಿತ್ತು. ಅಂತಹ ಕ್ಯಾಮರಾ ಕೂಡ ಮುಂತಕಾ ನೋಡಿದ್ದರು. ಆದರೆ, ಅವರಿಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬಳಸುತ್ತಿದ್ದ ಮಾದರಿಯ ಕ್ಯಾಮರಾದ ಬಗ್ಗೆ ಕುತೂಹಲ ಹೆಚ್ಚಾಗಿತ್ತು. ಆಕ್ಸ್‌ಫರ್ಡ್ ಫೋಟೋಗ್ರಾಫರ್ಸ್ ಬಳಸುತ್ತಿದ್ದ ಆ ಕ್ಯಾಮರಾದಲ್ಲಿ ಗಾಜಿನ ನೆಗೆಟಿವ್ ತಯಾರಿಸುವ ಮತ್ತು ಬೇರೆ ಬೇರೆ ಗಾತ್ರದ ರೀಲ್ ಹಾಕಿ ಫೋಟೊ ತೆಗೆಯುವುದಕ್ಕೆ ಅವಕಾಶ ಇತ್ತು.

ಮುಂತಕಾ ಅವರಿಗೆ ಮುಂಬೈಗೆ ಹೋದಾಗಲೆಲ್ಲ ಅಲ್ಲಿನ ಚೋರ್ ಬಜಾರ್‌ಗೆ ಹೋಗುವ ಹವ್ಯಾಸ. ಚೋರ್ ಬಜಾರ್ ಎಂದು ಕರೆಯುವ ಸೆಕೆಂಡ್ ಹ್ಯಾಂಡ್ ಅಂಗಡಿಗಳಲ್ಲಿ ಅತ್ಯಂತ ಅಮೂಲ್ಯ ವಸ್ತುಗಳು ಬೇಕಾಬಿಟ್ಟಿಯಾಗಿ ಬಿದ್ದಿರುತ್ತವೆ. ಗಮನಿಸಿ, ಗುರುತಿಸಿ ಖರೀದಿಸಿದರೆ ಲಾಭವೇ ಆಗುತ್ತದೆ ಎಂಬ ನಂಬಿಕೆ ಅವರದು. ಇಂತಹ ಶಾಪಿಂಗ್ ಬಗ್ಗೆಯೇ ಇಂಟರೆಸ್ಟ್ ಬೆಳೆದು ಬಂತು. ಅದರಲ್ಲೂ ಮುಂಬೈನ ಚೋರ್‌ಬಜಾರ್ ದೇಶದಲ್ಲಿಯೇ ಅತ್ಯಂತ ಪ್ರಮುಖವಾದದ್ದು. ಮುಂತಕಾ ಖರೀದಿಸಲು ಹೋದಾಗ ಚೋರ್ ಬಜಾರ್‌ನಲ್ಲಿ ಖ್ಯಾತ ಚಿತ್ರನಟಿ ನರ್ಗೀಸ್ ಅವರು ಕೂಡ ಖರೀದಿಗೆ ಬಂದದ್ದುಂಟು. ಮತ್ತೊಮ್ಮೆ ಚಿತ್ರನಟ ದಿಲೀಪ್‌ಕುಮಾರ ಕೂಡ ಕಾಣಿಸಿದ್ದಿದೆ. ಶುಕ್ರವಾರ ಈ ಬಜಾರ್‌ಗೆ ಹೆಚ್ಚು ಜನ ಬರುತ್ತಾರೆ.

ದೊಡ್ಡ ಮಹಡಿಗಳಲ್ಲಿ ಇರುವವರು ಹಳೆಯ ವಸ್ತುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಲಾಗದೇ ಸಿಕ್ಕಷ್ಟು ಹಣಕ್ಕೆ ಮಾರಿ ಬಿಡುತ್ತಾರೆ. ಇಲ್ಲಿನ ಆ್ಯಂಟಿಕ್ ವಸ್ತುಗಳನ್ನು ಸಿನಿಮಾದ ಜನ ಚಿತ್ರೀಕರಣಕ್ಕಾಗಿ ಬಾಡಿಗೆಯಿಂದ ತೆಗೆದುಕೊಂಡು ಹೋಗುತ್ತಾರೆ. ಒಂದು ಬಾರಿ ಕ್ಯಾಮರಾಕ್ಕೆ ಸಂಬಂಧಿಸಿದಂತೆ ವಸ್ತುಗಳನ್ನು ಹುಡುಕುತ್ತ ಚೋರ್‌ಬಜಾರ್‌ಗೆ ಹೋದಾಗ ಕಾಣಿಸಿದ್ದು ಇಂಗ್ಲೆಂಡ್‌ನ ಬೆನೆಟ್ ಹವಲ್ ಕ್ಯಾಮರಾ. ಸ್ಟ್ಯಾಂಡ್ ಮತ್ತು ಕ್ಯಾಮರಾ ಸೇರಿದಂತೆ

ಎರಡು ಕ್ವಿಂಟಲ್ ಭಾರ ಇದ್ದಿರಬಹುದು. ಆಗ ಸುಮಾರು ಅದರ ಬೆಲೆ ಕನಿಷ್ಠ 16 ಲಕ್ಷ ಇದ್ದಿರಬಹುದು. ಕುತೂಹಲದಿಂದ ಬೆಲೆ ಕೇಳಿದರು ಮುಂತಕಾ 16 ಸಾವಿರ ರೂಪಾಯಿ ಹೇಳಿದರು. ಅಚ್ಚರಿ ಪಟ್ಟ ಮುಂತಕಾ 'ಚೋರಿ ಕಾ ಮಾಲ್ ರಹೇತೊ' ಎಂಬ ಸಂಶಯ ಪಟ್ಟರು. ಆದರೆ, ಕಳ್ಳತನ ಮಾಡಿದ್ದಾದರೆ ಒಂದೆರಡು ವಸ್ತುಗಳು ಇರುತ್ತವೆ. ಕ್ಯಾಮರಾಕ್ಕೆ ಸಂಬಂಧಿಸಿದ ಎಲ್ಲ ವಸ್ತುಗಳು ಅದರ ಜೊತೆಯಲ್ಲಿದ್ದವು ಎಂದು ಸಮಾಧಾನಿಸಿಕೊಂಡರು.

ಕ್ಯಾಮರಾದ ಜೊತೆಗೆ ಇರುವ ಸ್ಟ್ಯಾಂಡ್ ಮತ್ತಿತರ ವಸ್ತುಗಳ ಜೊತೆಗಿನ ಹಿತ್ತಾಳೆಯ ವಸ್ತುಗಳನ್ನು ಬೇರ್ಪಡಿಸಿ ಮಾರಿದರೇ ಕೊಟ್ಟದ್ದಕ್ಕಿಂತ ಹೆಚ್ಚು ಹಣ ಬರುತ್ತದೆ ಎಂದು ಲೆಕ್ಕಾಚಾರ ಹಾಕಿ ಚೌಕಾಸಿ ಮಾಡಿ 15 ಸಾವಿರ ರೂಪಾಯಿಗೆ ಖರೀದಿ ಮಾಡಿದರು. ಖರೀದಿಸಿದ್ದಾಯಿತು. ಅದನ್ನು ತೆಗೆದುಕೊಂಡು ಹೋಗುವುದು ಹೋಗುವುದು ಹೇಗೆ ಎಂಬ ಚಿಂತೆ ಎದುರಾಯಿತು. ಬಂಡಿಯೊಂದರಲ್ಲಿ ಹಾಕಿಕೊಂಡು ತಾವು ರೆಗ್ಯುಲರ್ ಆಗಿ ಉಳಿಯುವ ಹೋಟೆಲ್‌ಗೆ ಕೊಂಡೊಯ್ದು ಅಲ್ಲಿ ರಿಕ್ವೆಸ್ಟ್ ಮಾಡಿಕೊಂಡು ಇಟ್ಟರು. 'ಮುಂಬೈಗೆ ಹೋದವರಿಗೆಲ್ಲ ಸ್ವಲ್ಪ ಸಾಮಾನಿವೆ ತಗೊಂಡು ಬರ್‍ರಿ' ಎಂದು ಹೇಳುತ್ತಿದ್ದರು. ಯಾರೂ ತರಲಿಲ್ಲ. ನಾಲ್ಕಾರು ಕಂತುಗಳಲ್ಲಿ ಮುಂಬೈನಿಂದ ಬೀದರ್‌ಗೆ ತಲುಪಿಸಿದರು.

ಬೆನೆನ್ ಹವೆಲ್ ಕ್ಯಾಮರಾವನ್ನು ಆಕ್ಸ್‌ಫರ್ಡ್‌ನಲ್ಲಿದ್ದ ಲೆನಾವ್ ಕ್ಯಾಮರಾ ಮಾದರಿಯಲ್ಲಿ ಮುಂತಕಾ ರೂಪಿಸಿದರು. ಅದರಿಂದ ಗ್ರೂಪ್ ಫೋಟೊ ತೆಗೆಯಲು ಆರಂಭಿಸಿದರು. ಹತ್ತಾರು ಫೋಟೊಗಳ ನಂತರ ಕರ್ನಾಟಕದ ಜನಪ್ರತಿನಿಧಿಗಳ ಚಿತ್ರ ತೆಗೆಯುವ ಅವಕಾಶ ದೊರೆಯಿತು.

ಗುಂಡೂರಾವ್ ಅವರು ಮುಖ್ಯಮಂತ್ರಿ ಆಗಿದ್ದಾಗ ವಿಜಯ ಸಾಸನೂರು ಅವರು ವಾರ್ತಾ ಇಲಾಖೆಯ ಅಧಿಕಾರಿ ಆಗಿದ್ದರು. ಅದಕ್ಕೂ ಮುನ್ನ ಸಾಸನೂರು ಅವರು ಬೀದರ್‌ನಲ್ಲಿ ಎಸ್‌ಪಿ ಆಗಿದ್ದರು. ಆಗಿನಿಂದಲೂ ಮುಂತಕಾ ಅವರ ಪರಿಚಯ ಸಾಸನೂರು ಅವರಿಗಿತ್ತು. ಗುಂಡೂರಾವ್ ಅವರು ಗುಲ್ಬರ್ಗಕ್ಕೆ ಬರುವ ವಿಷಯ ಮುಂತಕಾಗೆ ತಿಳಿಯಿತು. ತಮ್ಮ ಬಳಿ ಇರುವ ಕ್ಯಾಮರಾ ಬಳಸಿ ಮುಖ್ಯಮಂತ್ರಿ ಮತ್ತು ಅವರ ತಂಡದ ಗ್ರೂಪ್ ಫೋಟೊ ಯಾಕೆ ತೆಗೆಯಬಾರದು ಎಂಬ ವಿಚಾರ ಬಂತು. ಫೋಟೊ ತೆಗೆಯುವುದಕ್ಕೆ ಅವಕಾಶ ಕಲ್ಪಿಸುವಂತೆ ಸಾಸನೂರು ಅವರಲ್ಲಿ ಮುಂತಕಾ ಮನವಿ ಮಾಡಿದರು. ಅದಕ್ಕೆ ಸ್ಪಂದಿಸಿದ ಸಾಸನೂರು ಸೂಕ್ತ ವ್ಯವಸ್ಥೆ ಮಾಡಿದರು.

ಗುಂಡೂರಾವ್ ಮತ್ತು ಅವರ ಜೊತೆಗಾರರ ಫೋಟೊ ತೆಗೆಯುವುದಕ್ಕಾಗಿ ಎಲ್ಲ ಸಿದ್ಧತೆ ಮಾಡಲಾಗಿತ್ತು. ಇದ್ದಕ್ಕಿದ್ದಂತೆ ಮಳೆ ಸುರಿಯಲು ಆರಂಭವಾಯಿತು. ಇನ್ನೇನು ಫೋಟೊ ಪ್ರೋಗ್ರಾಮ್ ಕ್ಯಾನ್ಸಲ್ ಎನ್ನುವ ನಿರ್ಧಾರಕ್ಕೆ ಅಧಿಕಾರಿಗಳು ಬಂದರು. ಆದರೆ, ಆಶ್ಚರ್ಯಕರ ರೀತಿಯಲ್ಲಿ ಮಳೆ ನಿಂತು ಹದವಾದ ಬೆಳಕು ಇರುವ ವಾತಾವರಣ ನಿರ್ಮಾಣವಾಯಿತು. ಮುಖ್ಯಮಂತ್ರಿ ಸೇರಿದಂತೆ ಎಲ್ಲರೂ ಕ್ಯಾಮರಾ ಕಡೆ ಮುಖ

ಮಾಡಿ ನಿಂತರು. ಸ್ಟ್ಯಾಂಡ್ ಮೇಲೆ ಕ್ಯಾಮರಾ ಇಟ್ಟು ಸ್ವಯಂಚಾಲಿತ ಕೀ ನೀಡಿ ಫೋಟೊ ತೆಗೆಯಲು ಆರಂಭಿಸಿದರು. ಕ್ಯಾಮರಾ ತಿರುಗಲು ಆರಂಭಿಸಿದ ಕೆಲವೇ ಸಮಯದಲ್ಲಿ ಮಳೆಯಿಂದಾಗಿ ಹಸಿಯಾಗಿದ್ದ ನೆಲದ ಮೇಲಿನ ಸ್ಟ್ಯಾಂಡ್ ಸರಿದು ಬಿಟ್ಟಿತು. ಅದೆಲ್ಲದರ ಮಧ್ಯೆಯೂ ಫೋಟೊ ತೆಗೆದದ್ದಾಯಿತು. ಬೀದರ್‌ಗೆ ಬಂದು ಡೆವಲೆಪ್ ಮಾಡಿದರೆ ಸ್ಟ್ಯಾಂಡ್ ಸರಿದಿದ್ದರಿಂದ ಫೋಟೋ ಶೇಕ್ ಆಗಿ ಬಿಟ್ಟಿತ್ತು.

ಬಹಳ ನಿರೀಕ್ಷೆ ಇಟ್ಟುಕೊಂಡು ತೆಗೆಯಲಾಗಿದ್ದ ಫೋಟೊ ಅದಾಗಿತ್ತು. ಮುಖ್ಯಮಂತ್ರಿಗಳ ಫೋಟೊ ತೆಗೆಯುವ ಅವಕಾಶ ಒದಗಿ ಬಂದಿತ್ತು. ಆದರೆ, ಹವಾಮಾನದ ವೈಪರಿತ್ಯದಿಂದಾಗಿ ಅಂತಹ ಅವಕಾಶ ಹಾಳಾಗಿ ಹೋಯಿತು. ಇದರಿಂದ ಬೇಸತ್ತ ಮುಂತಕಾ 8–10 ವರ್ಷ ಯಾವುದೇ ಕೆಲಸ ಮಾಡಲಿಲ್ಲ. ಬಹುತೇಕ ಕ್ಯಾಮರಾದ ಸಹವಾಸವನ್ನೇ ಬಿಟ್ಟರು. ಅದಾದ ಮೇಲೆ ಮತ್ತೆ ಕರ್ನಾಟಕದ ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟದ ಸದಸ್ಯರು, ಶಾಸಕರ ಫೋಟೊ ತೆಗೆಯುವ ಅವಕಾಶ ದೊರೆಯುವುದಕ್ಕಾಗಿ 15 ವರ್ಷ ಕಾಯಬೇಕಾಯಿತು. ಅದೊಂದು ಬೇರೆಯದೇ ಕಥೆ.

ಸುಮ್ಮನೇ ಹವ್ಯಾಸಕ್ಕಾಗಿ ಫೋಟೊ ಕ್ಲಿಕ್ಕಿಸಿಕೊಂಡು, ಹವ್ಯಾಸಕ್ಕಾಗಿ ಕ್ಯಾಮರಾ ಬಿಚ್ಚಿ ನೋಡುತ್ತ, ರಿಪೇರಿ ಮಾಡುತ್ತ, ಹಾಳು ಮಾಡುತ್ತ ಕುಳಿತಿದ್ದ ಮುಂತಕಾ ಅವರ ಚಿತ್ರಗಳು ಸ್ಥಳೀಯ ಹಿಂದಿ ದಿನಪತ್ರಿಕೆ 'ಬೀದರ್ ಕಿ ಅವಾಜ್'ನಲ್ಲಿ ಪ್ರಕಟವಾಗಲು ಆರಂಭಿಸಿದವು. ಮುಂತಕಾ ಅವರ ಮಹತ್ವ ಅರಿತ ಪತ್ರಕರ್ತ ಕಾಜಿ ಅರ್ಷದ್ ಅಲಿ ಅವರು ಮುಂತಕಾ ಅವರಿಂದ ಫೋಟೊ ತೆಗೆಸಿ ಮುದ್ರಿಸಲು ಆರಂಭಿಸಿದರು. ಅರ್ಷದ್ ಅಲಿ ಅವರ ಒಡನಾಟ ಮತ್ತು ಅವರ ಮೂಲಕ ಮುದ್ರಣ ಮಾಧ್ಯಮದವರೊಂದಿಗೆ ಪರಿಚಯ– ಸ್ನೇಹ ಮುಂತಕಾ ಅವರಿಗೆ ದೊರೆತವು. ಆ ದಿನಗಳಲ್ಲಿಯೇ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳಲ್ಲಿ ಮುಂತಕಾ ಅವರು ಕ್ಲಿಕ್ಕಿಸಿದ ಫೋಟೊಗಳು ಕಾಣಿಸಿಕೊಂಡವು. 'ಪತ್ರಿಕಾ ಛಾಯಾಗ್ರಾಹಕ' ಎಂಬ ಲೇಬಲ್ ಕೂಡ ಅಂಟಿಕೊಂಡಿತು. ನಂತರದ ದಿನಗಳಲ್ಲಿ ವಾರ್ತಾ ಇಲಾಖೆಯಿಂದ 'ಮಾನ್ಯತೆ ಪಡೆದ ಪತ್ರಿಕಾ ಛಾಯಾಗ್ರಾಹಕ'ರೂ ಆದರು. ಈಗ ಕೂಡ ಅವರು ವಾರ್ತಾ ಇಲಾಖೆಗಾಗಿ ಚಿತ್ರಗಳನ್ನು ನೀಡುತ್ತಾರೆ. ನಿಯಮಿತವಾಗಿಯೇನಲ್ಲ.

ಪತ್ರಕರ್ತ ಅರ್ಷದ್ ಅಲಿ ಪುತ್ತಿತರರು ಪತ್ರಕರ್ತರ ಸಮಾವೇಶದಲ್ಲಿ ಭಾಗವಹಿಸುವುದಕ್ಕಾಗಿ ಬೆಂಗಳೂರಿಗೆ ಹೋಗಿದ್ದರು. ಅವರ ಜೊತೆಗೆ ಮುಂತಕಾ ಕೂಡ ಹೋಗಿದ್ದರು. ತಮ್ಮ ಜೊತೆ ಕೆಲವು ಫೋಟೊ ತೆಗೆದುಕೊಂಡು ಹೋಗಿದ್ದರು. ಅವುಗಳನ್ನು ಅಲ್ಲಿನ ವಾರ್ತಾ ಅಧಿಕಾರಿಗಳಿಗೆ ತೋರಿಸಿದರು. ಅದನ್ನು ಮೆಚ್ಚಿಕೊಂಡ ಅಧಿಕಾರಿಗಳು ನಂತರ ತಿಳಿಸುವುದಾಗಿ ಸಾಗ ಹಾಕಿದರು. ಆದರೆ, ಚಿತ್ರಗಳನ್ನು ನೋಡಿದ ಅಧಿಕಾರಿಗಳ ತಲೆಯಲ್ಲಿ ಪುರಾತನ ಛಾಯಾಗ್ರಾಹಕನನ್ನು ಬೆಂಗಳೂರಿಗೆ ಕರೆಸಿಕೊಳ್ಳಬೇಕು ಎಂಬ ವಿಷಯ ತಲೆಯಲ್ಲಿ ಕೊರೆಯುತ್ತಿತ್ತು. ಅದಕ್ಕಾಗಿಯೇ 1994ರಲ್ಲಿ ವಿಶೇಷ ಮೊಟ್ಟು ಅವರು

ಮುಖ್ಯಮಂತ್ರಿ ಆಗಿದ್ದ ದಿನಗಳಲ್ಲಿ ಬೆಂಗಳೂರಿನಿಂದ ಬುಲಾವ್ ಬಂತು. ಮುಂತಕಾ ಕ್ಯಾಮರಾ ಮತ್ತು ಸ್ಟ್ಯಾಂಡ್‌ನೊಂದಿಗೆ ರೈಲು ಹತ್ತಿದರು. ಬೆಂಗಳೂರಿನಲ್ಲಿ ವಾರ್ತಾ ಇಲಾಖೆಯ ಅಧಿಕಾರಿಗಳೊಂದಿಗೆ ಮೊದಲ ಸುತ್ತಿನ ಮಾತುಕತೆ, ಚರ್ಚೆ– ಸಂವಾದ. ನಂತರ ಇವರನ್ನು ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅವರ ಹತ್ತಿರ ಕರೆದೊಯ್ದು ಕ್ಲಿಕ್ಕಿಸಿದ ಚಿತ್ರಗಳನ್ನು ತೋರಿಸಿದರು. ಅವರು ಬಹುವಾಗಿ ಮೆಚ್ಚಿಕೊಂಡು ಲೋಕೇಷನ್ ತೋರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸ್ಥಳ ನೋಡಿಕೊಂಡು ಬಂದರು. ಮುಂತಕಾ ಈ ಹಿಂದೆ ಹತ್ತಾರು ಗ್ರೂಪ್ ಫೋಟೊ ಕ್ಲಿಕ್ಕಿಸಿದ್ದರೂ ಒಂದು ಬಗೆ ಆತಂಕ ದುಗುಡ. ಹಿಂದೊಮ್ಮೆ ಕಂಡ ವೈಫಲ್ಯ ಅವರನ್ನು ಚಿಂತೆಗೀಡು ಮಾಡಿತ್ತು.

ಮರುದಿನ ಬೆಳಿಗ್ಗೆ ಎಂಟು ಗಂಟೆಗೆ ಸಚಿವ ಸಂಪುಟದ ಸದಸ್ಯರು ಮತ್ತು ವಿಧಾನಸಭೆ ಹಾಗೂ ಪರಿಷತ್ತಿನ ಎಲ್ಲ ಸದಸ್ಯರ ಗ್ರೂಪ್ ಫೋಟೊ ತೆಗೆಯುವುದಕ್ಕೆ ಸಮಯ ನಿಗದಿಯಾಗಿತ್ತು. ಬೆಳಿಗ್ಗೆ 5 ಗಂಟೆಗೆ ಅಂದರೆ ಬೆಳಗಾಗುವ ಮುನ್ನವೇ ಮುಂತಕಾ ಕ್ಯಾಮರಾದೊಂದಿಗೆ ವಿಧಾನಸೌಧದ ಆವರಣಕ್ಕೆ ಹೋದರು. ಅರ್ಧ ವರ್ತುಲ ಆಕಾರದಲ್ಲಿ ಕುರ್ಚಿಗಳನ್ನು ಹಾಕುವಂತೆ ಮುಂತಕಾ ಸೂಚಿಸಿದರು. ಆದರೆ, ಅದೇ ದಿನ ಹಲವಾರು ಛಾಯಾಗ್ರಾಹಕರು ಫೋಟೊ ತೆಗೆಯಬೇಕಾಗಿತ್ತು, ಅವರೆಲ್ಲ ಅದಕ್ಕೆ ಆಕ್ಷೇಪಣೆ ಮಾಡಿದರು. ಬೇರೆ ಫೋಟೊಗ್ರಾಫರ್‌ಗಳು ಸಹಕರಿಸಲಿಲ್ಲ ಇರುವ ವ್ಯವಸ್ಥೆಯಲ್ಲಿಯೇ ಫೋಟೊ ತೆಗೆಯುವುದು ಅನಿವಾರ್ಯ ಆಗಿತ್ತು. ಎಂಟು ಗಂಟೆಗೆ ಸರಿಯಾಗಿ ಮುಖ್ಯಮಂತ್ರಿಗಳು ಮತ್ತು ಎಲ್ಲ ಸದಸ್ಯರು ಆಗಮಿಸಿದರು. ಮುಂತಕಾ ತಮ್ಮ ಹಳೆಯ ಪೆಟ್ಟಿಗೆಯನ್ನು ಇಟ್ಟುಕೊಂಡು ಸಿದ್ಧರಾಗಿದ್ದರು. ರೆಡಿ ಎನ್ನುತ್ತಿದ್ದಂತೆಯೇ ಮುಂತಕಾರ ಕ್ಯಾಮರಾ ಚಲಿಸಲು ಆರಂಭವಾಯಿತು. ಹೈಕೋರ್ಟ್ ಮತ್ತು ವಿಧಾನಸೌಧ ಒಂದೇ ಫ್ರೇಮಿನಲ್ಲಿ ಬರುವ ಹಾಗೆ ಸೆಟ್ ಮಾಡಿ ಫೋಟೊ ಎಕ್ಸ್‌ಪೋಸ್ ಮಾಡಿದರು. ಇವರು ಫೋಟೊ ತೆಗೆಯುತ್ತಿರುವ ರೀತಿಯನ್ನು ನೋಡಿದ ಪತ್ರಿಕಾ ಛಾಯಾಗ್ರಾಹಕರು ಸಮೂಹ ಚಿತ್ರದ ಜೊತೆಗೆ ಮುಂತಕಾ ಅವರನ್ನೂ ಸೇರಿಸಿ ಫೋಟೊ ಕ್ಲಿಕ್ಕಿಸಿದರು. ಅದು ಆಗ ದೈನಿಕಗಳಲ್ಲಿ ದೊಡ್ಡ ಪ್ರಮಾಣದ ಸುದ್ದಿಯಾಗಿಯೂ ಪ್ರಕಟವಾಯಿತು.

ಅದಾದ ಮೇಲೆ ಬೀದರ್‌ಗೆ ಬಂದ ಮುಂತಕಾ ಫೋಟೊ ಪ್ರಿಂಟ್ ಹಾಕಿ ಅದನ್ನು ತೆಗೆದುಕೊಂಡು ಬೆಂಗಳೂರಿಗೆ ಹೋದರು. ಮತ್ತದೇ ವಾರ್ತಾ ಇಲಾಖೆಯ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಮುಖ್ಯಮಂತ್ರಿಗಳಿಗೆ ಫೋಟೊ ತಲುಪಿಸಲಾಯಿತು. ಅಚ್ಚರಿಯಿಂದ ಬೆರಗಾಗಿ ನೋಡಿದ ಮೊಯ್ಲಿ ಅವರು ಮುಂತಕಾ ಅವರಿಗೆ ಗೌರವ ಧನವಾಗಿ ಐದು ಸಾವಿರ ರೂಪಾಯಿ ನೀಡುವಂತೆ ಸೂಚಿಸಿದರು.

ಅದಾದ ಹತ್ತು ವರ್ಷಗಳ ನಂತರ ಧರಂಸಿಂಗ್ ಅವರು ಮುಖ್ಯಮಂತ್ರಿ ಆಗಿದ್ದ ದಿನಗಳಲ್ಲಿ (2004) ಮುಂತಕಾ ಅವರಿಗೆ 'ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಅದಕ್ಕೆ ಧರಂಸಿಂಗ್ ಅವರ ಜೊತೆಗಿನ ಒಡನಾಟದಲ್ಲಿ ಇದ್ದ ಪತ್ರಕರ್ತರು ಆಸಕ್ತಿ ವಹಿಸಿದ್ದೇ ಕಾರಣವಾಗಿತ್ತೇ ವಿನಹ ಮುಂತಕಾ ಅವರ ಪ್ರತಿಭೆ ಅಲ್ಲ ಎನ್ನುವುದು ವಿಷಾದದ ಸಂಗತಿ. ಮುಂತಕಾ ಅವರಿಗೆ ಪತ್ರಿಕೋದ್ಯಮ ವಿಭಾಗದಲ್ಲಿ ಪ್ರಶಸ್ತಿ ನೀಡಲಾಯಿತು. ಅವರು ಪತ್ರಿಕೋದ್ಯಮಕ್ಕೆ ಸೇವೆ ಸಲ್ಲಿಸಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಅವರ ನಿಜವಾದ ಕಳಕಳಿ ಮತ್ತು ಪ್ರೀತಿ ಇರುವುದು ಕ್ಯಾಮರಾ ಮತ್ತು ಫೋಟೋಗ್ರಫಿಯಲ್ಲಿ ಎಂಬುದು ಕೂಡ ಅಷ್ಟೇ ಸತ್ಯ.

ಅವರು ಸಮಕಾಲೀನ ಘಟನೆಗಳನ್ನು ಪತ್ರಿಕೆಗಳಿಗಾಗಿ ದಾಖಲಿಸಿದ್ದಾರೆ. ಲಾತೂರಿನಲ್ಲಿ ಸಂಭವಿಸಿದ ಭೀಕರ ಭೂಕಂಪದ ಹೃದಯ ವಿದ್ರಾವಕ ದೃಶ್ಯಗಳನ್ನು ಮುಂತಕಾ ಸೆರೆ ಹಿಡಿದರು. ಹಾಗೆಯೇ ತಡೋಳಾ ಬಳಿ ಸಂಭವಿಸಿದ ಬೆಂಕಿ ಅಪಘಾತದ ದುರಂತದ ಚಿತ್ರಗಳನ್ನು ಕೂಡ ಮುಂತಕಾ ಕ್ಲಿಕ್ಕಿಸಿದರು. ಬಸವಕಲ್ಯಾಣ ತಾಲ್ಲೂಕಿನ ತಡೋಳಾ ಗ್ರಾಮದಲ್ಲಿ ಕೆಟ್ಟು ನಿಂತ ಪೆಟ್ರೋಲಿಯಮ್ ಟ್ಯಾಂಕರ್‌ನಿಂದ ಊರಿನ ಜನರೆಲ್ಲ ಬಕೆಟ್, ಕೊಡಗಳಲ್ಲಿ ತುಂಬಿಕೊಳ್ಳಲು ಆರಂಭಿಸಿದರು. ಅದು ವಾಹನಗಳಿಗೆ ಪೆಟ್ರೋಲ್ ಆಗಿರದೇ ವಿಮಾನಗಳಿಗೆ ಬಳಸುವ ವೈಟ್ ಪೆಟ್ರೋಲ್ ಆಗಿತ್ತು. ಈ ಬಗ್ಗೆ ಲಾರಿಯ ಚಾಲಕ ಊರ ಜನರಿಗೆ ಹತ್ತಾರು ಬಾರಿ ವಿವರಿಸಿದ. ಜನ ಅದನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ತಂಬಿಗೆ, ಗ್ಲಾಸು, ಕೊಡ, ಬಕೆಟುಗಳಲ್ಲಿ ಪೆಟ್ರೋಲ್ ತುಂಬಿಕೊಂಡು ಒಯ್ಯಲು ಆರಂಭಿಸಿದರು. ಆಗಲೇ ಯಾರೋ ಒಬ್ಬರು ಸಿಗರೇಟು ಸೇದುವುದಕ್ಕಾಗಿ ಕಡ್ಡಿ ಗೀರಿದರು. ಇಡೀ ಊರಿಗೆ ಊರೇ ಬೆಂಕಿಗೆ ಆಹುತಿಯಾಯಿತು. ನೂರಾರು ಜನ ಹೃದಯ ವಿದ್ರಾವಕ ರೀತಿಯಲ್ಲಿ ಕೊನೆಯುಸಿರು ಎಳೆದರು. ಘಟನೆ ಸಂಭವಿಸಿದ ಕೆಲವೇ ಕ್ಷಣದಲ್ಲಿ ಸ್ಥಳಕ್ಕೆ ಹೋದ ಮುಂತಕಾ ಸಾವು–ಬದುಕಿನ ನಡುವಿನ ಮುಖಾಮುಖಿ ಮತ್ತು ಅಸಹಾಯಕತೆ, ನೋವು, ಆಕ್ರಂದನಗಳನ್ನು ಕ್ಯಾಮರಾದಲ್ಲಿ ಸೆರೆ ಹಿಡಿದರು.

ಸುದ್ದಿ ಚಿತ್ರಗಳನ್ನು ಮಾತ್ರವಲ್ಲದೆ ವಿಶಿಷ್ಟ ಫೋಟೊ ತೆಗೆಯುವುದರಲ್ಲಿಯೂ ಮುಂತಕಾ ಸಿದ್ಧಹಸ್ತರು. ನರ್ತಿಸುತ್ತಿರುವ ನವಿಲಿನ ಜೊತೆಗೆ ಬಾಲಕಿಯೊಬ್ಬಳು ನರ್ತಿಸುವ ದೃಶ್ಯವನ್ನು ಅವರು ಕಂಪೋಸ್ ಮಾಡಿದ ರೀತಿ ಕೌಶಲ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಹಾಗೆಯೇ ಅವರತ್ತ ಹಾರಲು ಬಂದ ಕೋತಿಯ ಚಿತ್ರವನ್ನು ವಿಶಿಷ್ಟವಾಗಿ ಸೆರೆಹಿಡಿದಿದ್ದಾರೆ. ಆ ಚಿತ್ರವನ್ನು ಯಾವುದೇ ಕೋನದಲ್ಲಿ ನಿಂತು ನೋಡಿದರೂ ಕೋತಿ ನೋಡುವವರ ಕಡೆಗೇ ಹಾರುವಂತೆ ಭಾಸವಾಗುತ್ತದೆ. ಲೆನ್ಸ್‌ಗೆ ನೇರವಾಗಿ ನೋಡುವಾಗ ಕ್ಲಿಕ್ಕಿಸಿದ ಚಿತ್ರಗಳು ಆ ರೀತಿ ಕಾಣುವುದು ಸಹಜವಾದರೂ ಕೋಪಗೊಂಡ ಕೋತಿಯ ಚಿತ್ರ ಈ ರೀತಿ ಸಿಕ್ಕದ್ದು ಮಾತ್ರ ಅಪರೂಪ ಎಂದೇ ಹೇಳಬೇಕು. ■

## 06 ನೆಹರು ಅವರ ಫೋಟೊ ತೆಗೆದ ಅನುಭವ

1962ರ ಮಹಾ ಚುನಾವಣೆಯ ಸಂದರ್ಭ. ಪ್ರಚಾರಕ್ಕಾಗಿ ನೆಹರು ಅವರು ದೇಶದಾದ್ಯಂತ ಸಂಚರಿಸಿದರು. ಸ್ನೇಹಿತರಿಂದ ಪಂಡಿತ್‌ಜಿ ಬೀದರ್‌ಗೆ ಬರುತ್ತಿದ್ದಾರೆ ಎಂಬ ಮಾಹಿತಿ ಮುಂತಕಾಗೆ ಗೊತ್ತಾಯಿತು. ಏನಾದರೂ ಮಾಡಿ ಅವರ ಚಿತ್ರ ತೆಗೆಯಲೇಬೇಕು ಎಂಬ ಆಸೆ ಯುವಕ ಮುಂತಕಾಗೆ. ಜನಪ್ರಿಯ ನೇತಾರರಾಗಿದ್ದ ನೆಹರು ಅವರನ್ನು ಭೇಟಿ ಮಾಡುವುದು ಸುಲಭದ ಕೆಲಸವೇನಾಗಿರಲಿಲ್ಲ. ಹತ್ತಿರಕ್ಕೆ ಹೋಗಿ ಫೋಟೊ ತೆಗೆಯುವುದಂತೂ ಅಸಾಧ್ಯದ ಮಾತಾಗಿತ್ತು. ತುಂಬಾ ದೂರದಿಂದ ಕ್ಲೋಸ್‌ಅಪ್ ಫೋಟೊ ತೆಗೆಯುವುದು ಸಾಧ್ಯವೇ ಇರಲಿಲ್ಲ. ಫೋಟೊ ತೆಗೆಯಲೇಬೇಕು ಎಂಬ ಆಸೆ ಬೆಳೆದು ನಿಂತಿತು. ಸಿಕ್ಕ ಸಿಕ್ಕವರನ್ನೆಲ್ಲ ಕಾಡಿ ಬೇಡಿದರು. ಯಾವುದೇ ಫಲ ನೀಡಲಿಲ್ಲ.

ಆಗ ನೆನಪಿಗೆ ಬಂದದ್ದು ಮಕ್ಸೂದ್ ಅಲಿಖಾನ್. ಅವರು ಮುಂತಕಾರ ಫ್ಯಾಮಿಲಿ ಫ್ರೆಂಡ್. ಆಗ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಸಿಕ್ಕಿತ್ತು. ಅವರ ಹತ್ತಿರ ರಿಕ್ವೆಸ್ಟ್ ಮಾಡಿ ಅವಕಾಶ ಪಡೆದರು. ಹೀಗೆ ಕಾಂಗ್ರೆಸ್ ಮುಖಂಡ ಮಕ್ಸೂದ್ ಅಲಿಖಾನ್ ಅವರು ವಿಮಾನ ನಿಲ್ದಾಣದೊಳಕ್ಕೆ ಹೋಗಲು ಪರವಾನಗಿ ಕೊಡಿಸಿದರು.

ವೈಟ್‌ಲ್ಯಾಂಡರ್ ಬೆಸಾರ್ ಕ್ಯಾಮರಾದಲ್ಲಿ 120 ಸೈಜಿನ ರೀಲ್ ತುಂಬಿದರೆ ಎಂಟು ಫೋಟೊ ಕ್ಲಿಕ್ಕಿಸಲು ಸಾಧ್ಯವಿತ್ತು. ವಿಮಾನವು ಬೀದರ್ ನಿಲ್ದಾಣದಲ್ಲಿ ಇಳಿಯಿತು. ವಿಮಾನದ ಬಾಗಿಲು ತೆರೆದು ನೆಹರು ಹೊರಗಡೆ ಇಣುಕಿ ನೋಡಿದರು. ಮುಂತಕಾ ಕೈಯಲ್ಲಿದ್ದ ಕ್ಯಾಮರಾದ ಬಟನ್ ಅದುಮಿದರು. ಹೊರಗೆ ಬಂದ ನೆಹರು ಹೊರಗಡೆ ನಿಂತಿದ್ದ ಜನಪ್ರತಿನಿಧಿಗಳತ್ತ ಒಂದು ಬಾರಿ ಕೈ ಬೀಸಿದರು. ಆ ದೃಶ್ಯವನ್ನು ಸೆರೆ ಹಿಡಿಯುವಲ್ಲಿ ಮುಂತಕಾ ಯಶಸ್ವಿಯಾದರು. ಏಣಿಯಿಂದ ಇಳಿಯುತ್ತಿದ್ದಂತೆಯೇ ಥಕಥಕನೆ ಮತ್ತೆರಡು ಬಾರಿ ಕ್ಲಿಕ್ಕಿಸಿದರು. ಇನ್ನೆರಡು ಫೋಟೊ ತೆಗೆಯಬಹುದಿತ್ತು. ನೆಹರು ಇಳಿದು ಬಂದು ನಡೆದಾಡುವಾಗ ರೀಲ್ ಮುಗಿದು ಬಿಟ್ಟರೆ ಎಂಬ ಆತಂಕ ಕಾಡಲು ಆರಂಭವಾಯಿತು. ವಿಮಾನದಿಂದ ಇಳಿಯುವುದಕ್ಕೆ ಮುಂಚೆಯೇ ಥಟ್ಟನೆ ರೀಲ್ ಬದಲಿಸಿ ಬಿಟ್ಟರು.

ಹಿರಿಯ ಕಾಂಗ್ರೆಸ್ ನಾಯಕ ಗೋಪಾಲರಾವ್ ಮುಡಬಿ ಅವರು ಕೈಯಲ್ಲಿ ಹೂಮಾಲೆ ಹಿಡಿದು ಸ್ವಾಗತಿಸಲು ನಿಂತಿದ್ದರು. ನೆಹರೂ ಇಳಿದು ಮುಡಬಿ ಅವರಿಂದ ಹೂಮಾಲೆ ಸ್ವೀಕರಿಸಿದರು. ನೆಹರೂ ಅವರ ಹಿಂದೆಯೇ ವಿಮಾನದಿಂದ ಕಾಂಗ್ರೆಸ್ ಮುಖಂಡ

ನಿಜಲಿಂಗಪ್ಪ ಇಳಿದರು. ಅವರ ನಂತರ ಮತ್ತೊಬ್ಬ ಹಿರಿಯ ನಾಯಕ ಬಿ.ಡಿ.ಜತ್ತಿ ಕೆಳಗಿಳಿದರು. ಗೋಪಾಲರಾವ ಮುಡಬಿ, ಬಿ.ಡಿ.ಜತ್ತಿ, ನಿಜಲಿಂಗಪ್ಪ ಮತ್ತು ನೆಹರು ನಡೆದು ಬರುತ್ತಿರುವ ಸಂದರ್ಭದ ನಾಲ್ಕು ಚಿತ್ರಗಳನ್ನು ಕ್ಲಿಕ್ಕಿಸಿದರು. ನಿಲ್ದಾಣದಲ್ಲಿ ಬೀಸುತ್ತಿದ್ದ ಗಾಳಿ ನೆಹರು ಧರಿಸಿದ್ದ ಶರ್ಟ್ ಗಾಳಿಯಲ್ಲಿ ತೇಲುತ್ತ ಮಡಚಿಕೊಂಡಿತು. ಆಗ ಕ್ಲಿಕ್ಕಾದ ಮುಂತಕಾ ಕ್ಯಾಮರಾ ಕಣ್ಣಿಗೆ ನೆಹರೂ ಅವರು ಅದ್ಭುತ ಚಿತ್ರ ಸೆರೆ ಸಿಕ್ಕಿತು.

ತಕ್ಷಣ ಮತ್ತೆ ರೀಲ್ ಬದಲಿಸಿದ ಮುಂತಕಾ ಅವರು ಸಮಾರಂಭದ ನಾಲ್ಕು ಚಿತ್ರಗಳನ್ನು ತೆಗೆದರು. ಅಂದು ತೆಗೆದ 16 ಚಿತ್ರಗಳು ಮುಂತಕಾಗೆ ಅತ್ಯಂತ ಖುಷಿ ಕೊಟ್ಟ ಫೋಟೊಗಳು. ಕ್ಯಾಮರಾ ಜೊತೆಗಿನ ಒಡನಾಟದಲ್ಲಿ ಅವರ ಬದುಕಿನ ಅತ್ಯಂತ ಖುಷಿಯ ಸಂದರ್ಭ. ಅವರು ಕ್ಲಿಕ್ಕಿಸಿದ ಫೋಟೋಗಳ ಪೈಕಿ ನೆಹರೂಜಿ ನಡೆದು ಬರುತ್ತಿರುವಾಗ ಅವರ ಶರ್ಟ್ ಮಡಿಕೆ ಬಿದ್ದಿರುವ ಚಿತ್ರವಂತೂ ಗಮನ ಸೆಳೆಯುತ್ತದೆ. ಆ ದಿನ ಅತ್ಯಾಧುನಿಕ ಕ್ಯಾಮರಾದೊಂದಿಗೆ ನೆಹರು ಚಿತ್ರ ಕ್ಲಿಕ್ಕಿಸಲು ಫೋಟೊಗ್ರಾಫರ್ ಒಬ್ಬರು ಬಂದಿದ್ದರು. ಮುಂತಕಾ ಕೈಯಲ್ಲಿ ಇದ್ದ ಕ್ಯಾಮರಾಕ್ಕೆ ಸೆರೆ ಸಿಕ್ಕ ನೆಹರು ಭಂಗಿ ಮಾತ್ರ ವಿಶಿಷ್ಟವಾದದ್ದಾಗಿತ್ತು.

'ಚಾರ್ ಫೋಟೊ ಬಹುತ್ ನಾಯಾಬ್ ಹೈ. ಕ್ಯಾ ವಜೆ ಥಿ ಮಾಲೂಮ್ ನಹಿ. ಇತ್ತೇಫಾಕ್‌ಸೇ ಐಸಾ ಚಾನ್ಸ್ ಮಿಲಾ, ಲೈಟಿಂಗ್ ಕಾಂಬಿನೇಷನ್ ಸಬಿ ಅಚ್ಚಾ ಥಾ' ಎಂದು ಹೇಳುವ ಮುಂತಕಾ 'ಸಾವಿರಾರು ಫೋಟೊ ತೆಗೆದಿದ್ದೇನೆ. ಅದಕ್ಕೆ ಸಮನಾದ ಮತ್ತೊಂದು ಫೋಟೊ ತೆಗೆಯುವುದು ಸಾಧ್ಯವಾಗಿಲ್ಲ. ಭಾರಿ ಅತ್ಯಾಧುನಕ ಕ್ಯಾಮರಾ ಬಳಸಿದರೂ ಅವಕ್ಕೆ ಸಮನಾದ ಫೋಟೊ ಕ್ಲಿಕ್ಕಿಸುವುದು ಸಾಧ್ಯವಾಗಿಲ್ಲ. ಇವತ್ತಿಗೂ ನಾನು ಡೆವಲಪ್ ಮಾಡುತ್ತೇನೆ. ಆದರೆ, ಅಷ್ಟು ಒಳ್ಳೆಯ ನೆಗೆಟಿವ್ ಬಂದಿಲ್ಲ. ಏನು ಕಾರಣ ಅಷ್ಟು ಚೆನ್ನಾಗಿ ಫೋಟೊ ಬಂದವು ಗೊತ್ತಾಗಲಿಲ್ಲ' ಎಂದು ನೆನಪಿಸಿಕೊಳ್ಳುತ್ತಾರೆ.

'ಈಗಿನ ಡಿಜಿಟಲ್ ಕ್ಯಾಮರಾ ಸೇರಿದಂತೆ ಬಹಳಷ್ಟು ವೈವಿಧ್ಯಮಯ ಕ್ಯಾಮರಾಗಳನ್ನು ಬಳಸಿ ಸಾವಿರಾರು ಫೋಟೊ ತೆಗೆದಿದ್ದೇನೆ. ಆದರೆ, ನೆಹರೂಜಿ ಬಂದ ದಿನ ಏನಾಯಿತೊ ಗೊತ್ತಿಲ್ಲ. ಆಗಿನ ಬೆಳಕಿನ ವಿನ್ಯಾಸ, ನೆಹರೂಜಿ ನಡೆದುಕೊಂಡ ರೀತಿ, ನೀಡಿದ ಪತಿಕಿಯೆ ಎಲ್ಲವೂ ನನ್ನ ಕ್ಯಾಮರಾ ಕೆಲಸಕ್ಕೆ ಪೂರಕವಾಗಿದ್ದವು. ಎಷ್ಟೋ ಜನರ ಫೋಟೊ ತೆಗೆದ್ದಿದ್ದೇನೆ. ಪಂಡಿತ್‌ಜಿ ಫೋಟೊ ತೆಗೆದಾಗ ಆದಷ್ಟು ಖುಷಿ ಮತ್ತೆಂದೂ ಆಗಿಲ್ಲ. ನೆಹರೂಜಿ ಪ್ರಿಂಟ್ ಮಾಡಿದ ನಂತರ ಮೊದಲ ಬಾರಿಗೆ ನೋಡಿ ನಾನೇ ಸ್ವತಃ ಬೆರಗಾಗಿ ಹೋಗಿದ್ದೇನೆ. ಅಂತಹ ಅದ್ಭುತ ಫೋಟೊ ತೆಗೆಯುವುದಕ್ಕೆ ಮತ್ತೊಮ್ಮೆ ಸಾಧ್ಯವಾಗಿಲ್ಲ' ಎಂದು ಮುಂತಕಾ ಮೆಲಕು ಹಾಕುತ್ತಾರೆ.

ಹತ್ತು ವರ್ಷಗಳ ನಂತರ ಬಿ.ಡಿ. ಜತ್ತಿ ಉಪರಾಷ್ಟ್ರಪತಿಯಾಗಿ ಬೀದರ್‌ಗೆ ಭೇಟಿ ನೀಡಿದ್ದರು. ಆಗ ಬೀದರ್‌ನ ಕರ್ನಾಟಕ ಕಾಲೇಜಿಗೂ ಭೇಟಿ ನೀಡಿದ್ದರು. ಆಗ ಮುಂತಕಾ

ಅವರು ನೆಹರು ಜೊತೆ ಇರುವ ಅವರು ಫೋಟೊ ತೋರಿಸಿದರು. ಫೋಟೊ ನೋಡಿ ಪುಳಕಿತರಾದ ಜತ್ತಿ ಅವರು ಮುಂತಕಾ ಬೆನ್ನು ತಟ್ಟಿ ಮೆಚ್ಚುಗೆ ಸೂಚಿಸಿದ್ದರು.

'ನೆಹರೂಜಿ ಅವರ ನೂರಾರು ಚಿತ್ರಗಳನ್ನು ನೋಡಿದ್ದೇನೆ. ವಿಶ್ವದ ಖ್ಯಾತ ಛಾಯಾಗ್ರಾಹಕರು ಅವರ ಫೋಟೊಗಳನ್ನು ಕ್ಲಿಕ್ಕಿಸಿದ್ದಾರೆ. ಆದರೆ, ನಾನು ಕ್ಲಿಕ್ಕಿಸಿದ ಚಿತ್ರದ ಹಾಗೆ, ಅಥವಾ ಆದರ ಸಮೀಪ ಕೂಡ ಬರುವ ಇನ್ನೊಂದು ಚಿತ್ರವನ್ನು ನಾನು ನೋಡಿಲ್ಲ' ಎಂದು ಮುಂತಕಾ ವಿವರಿಸುತ್ತಾರೆ. ತಾವು ತೆಗೆದ ನೆಹರೂಜಿ ಚಿತ್ರದ ಬಗ್ಗೆ ಅವರಿಗೆ ಅತಿ ವ್ಯಾಮೋಹ. ಅದರಲ್ಲಿ ತಪ್ಪೇನು ಇಲ್ಲ. ಪೇಪರ್, ಮ್ಯಾಗಜೀನ್‌ಗಳಲ್ಲಿ ಮುದ್ರಿತ ನೆಹರು ಅವರ ಚಿತ್ರಗಳನ್ನು ಸಂಗ್ರಹಿಸುತ್ತಾರೆ. ಕುತೂಹಲದಿಂದ ನೋಡುತ್ತಾರೆ. ತಮ್ಮ ಚಿತ್ರಕ್ಕಿಂತ ಚೆನ್ನಾಗಿ ಯಾರೂ ತೆಗೆದಿಲ್ಲ ಎಂದು ಮತ್ತೊಮ್ಮೆ ಖಚಿತ ಪಡಿಸಿಕೊಳ್ಳುತ್ತಾರೆ.

ತಮ್ಮ ಚಿತ್ರವನ್ನು ಯಾರಾದರೂ ದುರ್ಬಳಕೆ ಮಾಡಿಕೊಳ್ಳಬಹುದು ಎಂಬ ಅನಗತ್ಯ ಶಂಕೆಯೂ ಅವರಲ್ಲಿ ಇದೆ. ಅದಕ್ಕಾಗಿಯೇ ಅವರು ನೆಹರೂಜಿ ಚಿತ್ರ ನೀಡುವಾಗ ಭಾರಿ ಎಚ್ಚರಿಕೆ ವಹಿಸುತ್ತಾರೆ. ಆ ಚಿತ್ರವನ್ನು ಪ್ರಕಟಿಸುವುದಕ್ಕೆ ಮಾಧ್ಯಮದವರು ಕೇಳಿದಾಗ ನೀಡಲು ಹಿಂದೇಟು ಹಾಕಿದ ಉದಾಹರಣೆ ಕೂಡ ಇದೆ. 'ಕೊಡಿ ಪೇಪರ್‌ನ್ಯಾಗ ಪ್ರಿಂಟ್ ಆಗ್ತದ' ಎಂದು ಹೇಳಿದ್ದಕ್ಕೆ 'ನಾನೇನು ಪೇಪರ್‌ನ್ಯಾಗ ಪ್ರಿಂಟ್ ಮಾಡಲಾಕ ತೆಗೆದಿನೇನು? ಪ್ರಿಂಟ್ ಮಾಡದಿದ್ದರೆ ಬಿಡಲಿ. ನನಗೇನು? ನನ್ನ ಚಿತ್ರದ ಹಕ್ಕು ನನ್ನದು. ಅದನ್ನು ಬೇರೆಯವರಿಗೆ ಯಾಕೆ ಬಿಟ್ಟು ಕೊಡಲಿ?' ಎಂದು ಒರಟಾಗಿ ಪ್ರತಿಕ್ರಿಯಿಸುತ್ತಾರೆ. ನೆಹರೂ ಫೋಟೊದ ಬಗ್ಗೆ ಇರುವ ಪ್ರೀತಿ, ಕಾಳಜಿ ಅವರಿಗೆ ತಾವೇ ಕ್ಲಿಕ್ಕಿಸಿದ ಬೇರೆ ಚಿತ್ರಗಳ ಬಗ್ಗೆ ಇಲ್ಲ. ಅವರು ತಮ್ಮ ಚಿತ್ರಗಳನ್ನು ಪತ್ರಿಕೆಗಳ ಪ್ರಕಟಣೆ ಸೇರಿದಂತೆ ಖಾಸಗಿ ಸಂಗ್ರಹಕ್ಕಾಗಿ ಯಾವುದೇ ಆಕ್ಷೇಪ ಇಲ್ಲದೆಯೂ ನೀಡಿ ಬಿಡುತ್ತಾರೆ. ಜಾಸ್ತಿ ಹಣ ಕೂಡ ನಿರೀಕ್ಷೆ ಮಾಡಲು ಹೋಗುವುದಿಲ್ಲ.

ನನ್ನ ಸಂಗ್ರಹದಲ್ಲಿ ಇರುವ ಸುಮಾರು 150ಕ್ಕೂ ಹೆಚ್ಚು ನೆಹರು ಅವರ ಛಾಯಾಚಿತ್ರಗಳನ್ನು, ಅತ್ಯಂತ ಶ್ರದ್ಧೆಯಿಂದ, ಕುತೂಹಲದಿಂದ ವೀಕ್ಷಿಸಿದ ಮುಂತಕಾ 'ಎಷ್ಟೊಂದು ಸಂಗ್ರಹಿಸಿಟ್ಟಿದ್ದೀರಿ?' ಎಂದು ಹೇಳಿ 'ಇದರಲ್ಲಿ ಇರುವ ಯಾವ ಫೋಟೊ ಕೂಡ ನಾನು ಕ್ಲಿಕ್ಕಿಸಿದ ಫೋಟೊಕ್ಕೆ ಸಮ ಇಲ್ಲ' ಎಂದು ಸಮಾಧಾನದ ನಿಟ್ಟುಸಿರು ಬಿಟ್ಟರು. ಮೊದಲ ಪ್ರಧಾನಿಯಾಗಿದ್ದ ನೆಹರೂ ಅವರಲ್ಲದೇ ದೇಶದ ಎಲ್ಲ ಪ್ರಧಾನಿಗಳನ್ನು ತಮ್ಮ ಕ್ಯಾಮರಾದಲ್ಲಿ 'ಸೆರೆ' ಹಿಡಿದಿದ್ದಾರೆ.

ಇಂದಿರಾಗಾಂಧಿ ಅವರ ಬಹಳಷ್ಟು ಫೋಟೊಗಳನ್ನು ಮುಂತಕಾ ತೆಗೆದಿದ್ದಾರೆ. ಅವರಲ್ಲದೆ ಅಟಲ್ ಬಿಹಾರಿ ವಾಜಪೇಯಿ, ಗುಜ್ರಾಲ್, ಚಂದ್ರಶೇಖರ, ಮುರಾರ್ಜಿ ದೇಸಾಯಿ, ಚೌಧುರಿ ಚರಣಸಿಂಗ್, ದೇವೇಗೌಡ, ವಿ.ಪಿ.ಸಿಂಗ್, ಪಿ.ವಿ.ನರಸಿಂಹರಾವ ಸೇರಿದಂತೆ ಎಲ್ಲ ಪ್ರಧಾನಿಗಳು ಅವರ ಕ್ಯಾಮರಾಗ 'ಸೆರೆ' ಸಿಕ್ಕಿದ್ದಾರೆ.

ಕೆಲವೇ ದಿನಗಳ ಕಾಲ ಅಂದರೆ ಎರಡು ಬಾರಿ ಪ್ರಭಾರಿ ಪ್ರಧಾನಿಯಾಗಿದ್ದ ಗುಲ್ಜಾರಿಲಾಲ ನಂದಾ ಅವರ ಅಪರೂಪದ ಚಿತ್ರ ಕೂಡ ಮುಂತಕಾ ಸಂಗ್ರಹದಲ್ಲಿದೆ. ಆ ಚಿತ್ರ ಕ್ಲಿಕ್ಕಿಸಿದ ಕ್ಷಣ ಕೂಡ ಅವರ ನೆನಪಿನಲ್ಲಿದೆ. ಮುಂಬೈನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಭಾಗವಹಿಸುವುದಕ್ಕಾಗಿ ಕರ್ನಾಟಕದ ಪತ್ರಕರ್ತರ ತಂಡದ ಜೊತೆಗೆ ಮುಂತಕಾ ಕೂಡ ಹೋಗಿದ್ದರು. ಯಾವುದೋ ಕಾರಣಕ್ಕಾಗಿ ಕರ್ನಾಟಕ ಪತ್ರಕರ್ತರು ಸಮಾರಂಭವನ್ನು ಬಹಿಷ್ಕರಿಸಿ ಹೊರನಡೆದರು. ಮುಂತಕಾ ಕೂಡ ಅನಿವಾರ್ಯವಾಗಿ ಸಮಾರಂಭದಿಂದ ಹೊರಬರಬೇಕಾಯಿತು. ನಂದಾ ಅವರ ಫೋಟೊ ತೆಗೆಯುವ ಅವಕಾಶ ತಪ್ಪಿಹೋಯಿತಲ್ಲ ಎಂದು ಬೇಜಾರು ಮಾಡಿಕೊಳ್ಳುತ್ತಲೇ ಎಲ್ಲರ ಜೊತೆ ಕಾರ್ಯಕ್ರಮ ಬಿಟ್ಟು ಬೇರೆ ಕಡೆಗೆ ಬಂದರು. ಆಗ ಸ್ವತಃ ನಂದಾ ಅವರೇ ಕರ್ನಾಟಕದ ಪತ್ರಕರ್ತರು ಇದ್ದ ಕಡೆಗೆ ಬಂದು ಸಮಾರಂಭದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ನಂದಾ ಅವರು ಬಂದು ಪತ್ರಕರ್ತರ ಜೊತೆ ಮಾತನಾಡುತ್ತಿರುವ ಕ್ಷಣವನ್ನೇ ಫೋಟೊ ತೆಗೆಯುವುದಕ್ಕೆ ಬಳಸಿಕೊಂಡರು. ಬೀದರ್ ರೈಲ್ವೆ ನಿಲ್ದಾಣದಲ್ಲಿ ಹಲವಾರು ಗಣ್ಯರ ಚಿತ್ರ ತೆಗೆದಿರುವ ಮುಂತಕಾ ಅವರು ಜಯಪ್ರಕಾಶ ನಾರಾಯಣ ಟ್ರೇನ್ ಮೂಲಕ ಬರುತ್ತಿದ್ದಾರೆ ಎಂದು ಗೊತ್ತು ಮಾಡಿಕೊಂಡು ಸ್ಟೇಷನ್‌ಗೆ ಹೋಗಿ ಕ್ಲಿಕ್ಕಿಸಿದ್ದಾರೆ.

ದೇವರಾಜು ಅರಸು, ವೀರೇಂದ್ರ ಪಾಟೀಲ್, ಧರಂಸಿಂಗ್, ಎಸ್.ಎಂ.ಕೃಷ್ಣ, ರಾಮಕೃಷ್ಣ ಹೆಗಡೆ, ದೇವೇಗೌಡ, ವೀರಪ್ಪ ಮೊಯಿಲಿ, ಗುಂಡೂರಾವ, ನಿಜಲಿಂಗಪ್ಪ, ಬಿ.ಡಿ.ಜತ್ತಿ, ಬಂಗಾರಪ್ಪ ಸೇರಿದಂತೆ ಕರ್ನಾಟಕದ ಬಹುತೇಕ ಎಲ್ಲ ಮುಖ್ಯಮಂತ್ರಿಗಳೂ ಅವರ ಕ್ಯಾಮರಾದಲ್ಲಿ ದಾಖಲಾಗಿದ್ದಾರೆ. ವೀರೇಂದ್ರ ಪಾಟೀಲ್ ಮತ್ತು ರಾಮಕೃಷ್ಣ ಹೆಗಡೆ ಅವರು ಬಸವಕಲ್ಯಾಣದಲ್ಲಿ ಶೇಂಗಾದ ರುಚಿ ನೋಡುತ್ತಿದ್ದ ಸಂದರ್ಭದಲ್ಲಿ ಕ್ಲಿಕ್ಕಿಸಿದ ಫೋಟೊ ತನ್ನ ಸೃಜತೆಯಿಂದ ಗಮನ ಸೆಳೆಯುತ್ತದೆ. ಹಾಗೆಯೇ ಹುಲಸೂರಿನಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸುವುದಕ್ಕಾಗಿ ರಾಷ್ಟ್ರಪತಿ ವಿ.ವಿ. ಗಿರಿ ಅವರು ಬಂದ ಸಂದರ್ಭದಲ್ಲಿ ನಿಜಲಿಂಗಪ್ಪ ಅವರನ್ನು ಪ್ರೀತಿಯಿಂದ ಅಪ್ಪಿಕೊಂಡ ಕ್ಷಣವನ್ನು ಮುಂತಕಾ ಕ್ಯಾಮರಾದಲ್ಲಿ ದಾಖಲಿಸಿದ್ದಾರೆ. ಮುಂತಕಾ ಅವರ ಸಂಗ್ರಹದಲ್ಲಿ ಇರುವ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಮತ್ತು ಕರ್ನಾಟಕ, ಆಂಧ್ರಪ್ರದೇಶ ರಾಜ್ಯದ ಮುಖ್ಯಮಂತ್ರಿಗಳ 'ಅಮೂಲ್ಯ' ಚಿತ್ರಗಳ ಸಂಗ್ರಹವನ್ನು ನೋಡಿಯೇ ತಣಿಯಬೇಕು.

# 07 ಬಾಲ್ಯ– ನೆನಪುಗಳು

ಮುಂತಕಾ ಅವರ ಅಜ್ಜ ಬಟ್ಟೆಯ ವ್ಯಾಪಾರಿ ಆಗಿದ್ದರು. ಮೊದಲಿನಿಂದ ಯಾವುದಕ್ಕೂ ಕೊರತೆ ಇಲ್ಲದಂತೆ ಇದ್ದ ಕುಟುಂಬದಲ್ಲಿ ಬೆಳೆದವರು. ಬಹಳ ಸಣ್ಣ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡರು. ಅವರಿಗೆ ತಾಯಿಯ ಬಗ್ಗೆ ಏನೇನೂ ನೆನಪಿಲ್ಲ. ಜನ್ಮದಿನದ ಬಗ್ಗೆ ಹೆಚ್ಚಿನ ವಿವರ ಇಲ್ಲ. 1939 ಇರಬಹುದು. ಮುಂತಕಾ 5–6 ವರ್ಷದವನಿದ್ದಾಗಲೇ ತಾಯಿ ವಿಧಿವಶರಾಗಿದ್ದರು.

ಗುಲಾಂ ಮುಸ್ತಫಾ ಅವರಿಗೆ ಮುಂತಕಾ ಸೇರಿದಂತೆ ಒಟ್ಟು ನಾಲ್ವರು ಮಕ್ಕಳು. ಅವರ ಪೈಕಿ ಮುಂತಕಾ ಮೂರನೆಯವರು. ಮುಂತಕಾ ಹುಟ್ಟುವುದಕ್ಕಿಂತ ಮುಂಚೆಯೇ ಮೊದಲ ಮಗ ಗುಲಾಮ್ ಮುಜ್ತಬಾ ನಾಯಿ ಕಡಿದು ಮೃತಪಟ್ಟಿದ್ದರು. ಎರಡನೇ ಮಗ ಗುಲಾಮ್ ಮುರ್ತುಜಾ ಅನಾರೋಗ್ಯದ ಕಾರಣದಿಂದಾಗಿ ಅವರನ್ನು ಹೈದರಾಬಾದ್‌ನ ಉಸ್ಮನಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿಯೇ ಅವರು ಕೊನೆಯುಸಿರು ಎಳೆದರು. ಮೃತಪಟ್ಟ ನಂತರ ಅವರ ಶರೀರವನ್ನು ಬೀದರ್‌ಗೆ ತಂದು ದಫನ್ ಮಾಡಲಾಗಿತ್ತು. ಇಬ್ಬರು ಅಣ್ಣಂದಿರನ್ನು ಮುಂತಕಾ ನೋಡಿಲ್ಲ. ಆದರೆ, ಅವರ ತಂದೆ ಕ್ಲಿಕ್ಕಿಸಿದ ಫೋಟೊಗಳಲ್ಲಿ ಇಬ್ಬರ ಚಿತ್ರಗಳೂ ದಾಖಲಾಗಿವೆ. ಅವರ ಇನ್ನೊಬ್ಬ ಕಿರಿಯ ಸಹೋದರ ಮುಜಮಿಲ್ ಅಹ್ಮದ್ ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದಾರೆ.

'ನನ್ನ ತಂದೆಗೆ ಏಳು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರು. ತಂದೆಯವರು ನಮ್ಮ ಮನೆಯ ವ್ಯವಹಾರ ನೋಡಿಕೊಂಡದ್ದಕ್ಕಿಂತ ಅವರ ಸಹೋದರಿಯರ ಮನೆಯ ಕಾಳಜಿ ಹೆಚ್ಚಿಗೆ ಮಾಡುತ್ತಿದ್ದರು. ನಮ್ಮ ಮನೆಗಿಂತ ಹೆಚ್ಚಾಗಿ ಬಂಧು –ಮಿತ್ರರ ಮನೆಗಳ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಹೆಚ್ಚು ಸಮಯ ಮೀಸಲಾಗಿ ಇಡುತ್ತಿದ್ದರು. ಬಹಳ ಬೇಗನೇ ತಾಯಿಯನ್ನು ಕಳೆದುಕೊಂಡಿದ್ದರಿಂದ ಬಾಲ್ಯದ ಜೀವನ ಕಷ್ಟಕರವಾಗಿಯೇ ಇತ್ತು. ಬಹಳಷ್ಟು ದಿನಗಳನ್ನು ಬಂಧುಗಳ ಮನೆಯಲ್ಲಿಯೇ ಕಳೆಯಬೇಕಾಯಿತು' ಎಂದು ನೆನಪಿಸಿಕೊಳ್ಳುತ್ತಾರೆ.

ಮುಂತಕಾ ಅವರಿಗೆ ಇರುವ ಬಾಲ್ಯದ ನೆನಪು ಎಂದರೆ 'ಪತಂಗ'. ಅವರಿಗೆ ಆಗ ಪತಂಗ ಹಾರಿಸುವ ಶೋಕಿ ಇತ್ತು. ಮಾಂಜಾ ಮತ್ತು ಪತಂಗ ಮಾಡಿ ಹಾರಿಸುತ್ತಿದ್ದರು. ಅದನ್ನು ಬಿಟ್ಟರೆ ಬೇರೆ ಆಟ ಆಡಿದ್ದು ಅವರಿಗೆ ನೆನಪಿಲ್ಲ. ಪತಂಗ ತಯಾರಿಸುವ ಪೈಪೋಟಿ ಇರುತ್ತಿತ್ತು. ಗಾಳಿಪಟ ಆಗ ನವಾಬರ ಶೋಕಿ ಆಗಿತ್ತು. ನಂತರದ ದಿನಗಳಲ್ಲಿ ಅದನ್ನು

ಹಾರಿಸುವ ರಿವಾಜ್ ಬೆಳೆದು ಬಂತು. ಬೀದರ್‌ನಲ್ಲಿ ಇವತ್ತಿಗೂ ಪತಂಗ ಹಾರಿಸುವ ಪರಿಪಾಠ ಇದೆ.

ಆ ದಿನಗಳಲ್ಲಿ ಸಿರಿವಂತರು ತಮ್ಮ ಮನೆಯಲ್ಲಿ ಸುಂದರವಾದ ಎತ್ತಿನ ಬಂಡಿ, ಕುದುರೆ ಜಟಕಾ ಇಟ್ಟುಕೊಳ್ಳುತ್ತಿದ್ದರು. ನಮ್ಮ ದೊಡ್ಡ ಮನೆಯ ಮುಂದೆ ಎತ್ತಿನ ಬಂಡಿಯ ಜೊತೆಗೆ ಕುಟುಂಬದ ಸದಸ್ಯರು ಇರುವ ಅಪರೂಪದ ಫೋಟೊ ಇದೆ. ಅದು ಸುಮಾರು 100 ವರ್ಷಕ್ಕೂ ಹಳೆಯ ಫೋಟೊ. ಗಾಜಿನ ನೆಗೆಟಿವ್‌ನಲ್ಲಿದ್ದ ಅದನ್ನು ಇತ್ತೀಚೆಗೆ ಮತ್ತೆ ಕಷ್ಟಪಟ್ಟು ಪ್ರಿಂಟ್ ಹಾಕಿಕೊಟ್ಟಿದ್ದಾರೆ.

ನನ್ನ ತಂದೆಯ ಸಹೋದರ ಕಂಟ್ರಾಕ್ಟರ್ ಆಗಿದ್ದರು. ತಾವು ಮಾಡಿಸಿದ ಕೆಲಸದ ದಾಖಲೆಗಳಿಗಾಗಿ ಫೋಟೊ ತೆಗೆಯುವ ಹವ್ಯಾಸ ಇಟ್ಟುಕೊಂಡಿದ್ದರು. ಅವರು ಶೋಕಿಗಾಗಿ ಎಕ್ಸ್‌ಪೋಸ್ ಮಾಡುತ್ತಿದ್ದರು. ಅವರ ಜೊತೆ ನನ್ನ ತಂದೆಯವರೂ ಹೋಗುತ್ತಿದ್ದರು. ಆ ದಿನಗಳಲ್ಲಿ ಹಣವಂತರಿಗೆ ಗ್ರಾಮ್‌ಫೋನ್ ಮತ್ತು ಕ್ಯಾಮರಾ ಇಟ್ಟುಕೊಳ್ಳುವ ಶೋಕಿ ಇರುತ್ತಿತ್ತು. ಕ್ಯಾಮರಾ ಇಟ್ಟುಕೊಂಡಿರುವವರೇ ಡೆವಲೆಪ್, ಎನ್‌ಲಾರ್ಜ್ ಮತ್ತು ಪ್ರಿಂಟ್ ಮಾಡಬೇಕಾಗುತ್ತಿತ್ತು. ಮನೆಯಲ್ಲಿ ಕೆಲಸ ನಡೆಯುತ್ತಿದ್ದಾಗ ನನ್ನ ತಂದೆಯವರೂ ಸಹಕರಿಸುತ್ತಿದ್ದರು. ಈ ರೀತಿ ಕ್ಯಾಮರಾ ಜೊತೆ ಬಂದ ಒಡನಾಟ ನನ್ನ ತಂದೆಯವರನ್ನು ಪೊಲೀಸ್ ಫೋಟೊಗ್ರಾಫರ್ ಆಗುವಂತೆ ಮಾಡಿತು. ಅವರು ನಿಜಾಂ ಅವಧಿಯಲ್ಲಿ ಬೀದರ್‌ನಲ್ಲಿ ಹೆಡ್‌ಕಾನ್‌ಸ್ಟೇಬಲ್ ಆಗಿದ್ದರು. ಆ ದಿನಗಳಲ್ಲಿ ಥಂಬ್‌ಪ್ರಿಂಟ್, ಲೈಫ್ ಸ್ಕೆಚ್ ಬರೆಯುವುದರ ಜೊತೆಗೆ ಫೋಟೊ ಕೂಡ ತೆಗೆಯಬೇಕಾಗುತ್ತಿತ್ತು. ಅವರು ಆಗ ಹಲವಾರು ಗ್ರೂಪ್ ಫೋಟೊ ತೆಗೆದಿದ್ದಾರೆ. ಅವರ ಬಗ್ಗೆ ಇಲಾಖೆಯಲ್ಲಿ ಮತ್ತು ಬೀದರ್ ಪಟ್ಟಣದಲ್ಲಿ ಒಳ್ಳೆಯ ಅಭಿಪ್ರಾಯ ಇತ್ತು.

ಹೈದರಾಬಾದ್‌ನ ನಿಜಾಂ ಅವರು ಅಧಿಕಾರಕ್ಕೆ ಬಂದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಒಂದು ಬೃಹತ್ ಪ್ರಮಾಣದ ಸಮಾರಂಭ ಏರ್ಪಡಿಸಿದ್ದರು. ಆಗ ತಮ್ಮ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳಿಗೆ ಪ್ರಶಸ್ತಿ, ಗೌರವ ನೀಡಿ ಸನ್ಮಾನಿಸಿದ್ದರು. ಹಾಗೆಯೇ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನೂ ರಾಜಧಾನಿಗೆ ಕರೆಸಿದ್ದರು. ಆಗ ನನ್ನ ತಂದೆಯವರೂ ಹೈದರಾಬಾದ್‌ಗೆ ಹೋಗಿದ್ದರು. ಬೀದರ್‌ನಿಂದ ಹೋದವರ ಪೈಕಿ 2–3 ಜನರಿಗೆ ಬೆಳ್ಳಿಪದಕ ನೀಡಲಾಗಿತ್ತು. ಬೀದರ್ ಎಸ್‌ಪಿ ಮತ್ತು ನನ್ನ ತಂದೆಯವರಿಗೂ ಬೆಳ್ಳಿ ಮೆಡಲ್ ನೀಡಿ ನಿಜಾಂ ಗೌರವಿಸಿದ್ದರು. ಅದರ ಆಧಾರದ ಮೇಲೆಯೇ ನನ್ನ ತಂದೆಯವರಿಗೆ ಪೆನ್ಷನ್ ಕೂಡ ನಿರ್ಧರಿಸಿದ್ದರು.

ಈಗ ಮೆಡಲ್ ಇಲ್ಲ. ಅದು ನನ್ನ ಕೈಯಾರೆ ಕಳೆದು ಹೋಯಿತು. ನನ್ನ ತಂದೆಯವರು ಮೆಡಲ್ ಹಚ್ಚಿಕೊಂಡು ತೆಗೆಸಿಕೊಂಡ ಫೋಟೊ ಇದೆ. ಆ ಮೆಡಲ್‌ಅನ್ನು ಬಹಳಷ್ಟು ದಿನಗಳಿಂದ ಜತನದಿಂದ ಇಟ್ಟುಕೊಂಡು ಬಂದಿದ್ದೆವು. ಯಾರೋ ಕಳ್ಳತನ ಮಾಡಿದರು.

ನನ್ನ ಮನೆಯಲ್ಲಿ ಬಾಡಿಗೆ ಇದ್ದವರೇ ಕಳವು ಮಾಡಿರಬಹುದು ಎಂಬ ಅನುಮಾನ. ಆದರೆ, ಅದು ಕಳೆದು ಹೋಗುವ ಮುನ್ನ ಬಿದ್ರಿ* (1)ಯಲ್ಲಿ ಅದರ ಮೌಲ್ಡಿಂಗ್ ತೆಗೆಸಿಟ್ಟುಕೊಂಡಿದ್ದೆ. ನಿಜಾಂನ ಮೊಮ್ಮಗ ಮುಫಖ್ಖರ್‌ಜಂಗ್ ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಆಸಕ್ತಿ ಉಳ್ಳವರು. ಸ್ವತಃ ಅವರು ಎಂಜಿನಿಯರಿಂಗ್ ಕಾಲೇಜು ನಡೆಸುತ್ತಾರೆ. ಮುಫಖ್ಖರ್‌ಜಂಗ್ ಯಾವುದೋ ಕಾರಣಕ್ಕಾಗಿ ಬೀದರ್‌ಗೆ ಬಂದಿದ್ದರು. ಅವರಿಗೆ ಮೆಡಲ್ ತೋರಿಸಿ 'ನಿಮ್ಮ ಅಜ್ಜ ನನ್ನ ತಂದೆಗೆ ಮೆಡಲ್ ನೀಡಿದ್ದಾರೆ' ಎಂದು ಹೇಳಿದ್ದೆ. ಅದಕ್ಕೆ ಪ್ರತಿಯಾಗಿ ಮುಫಖ್ಖರ್‌ಜಂಗ್ ಅವರು 'ಮೆಡಲ್ ಕೊಟ್ಟಿದ್ದಕ್ಕೆ ನನ್ನ ಹತ್ತಿರ ಯಾವುದೇ ರೆಕಾರ್ಡ್ ಇಲ್ಲ. ಇದರ ಪ್ರತಿ ಮಾಡಿ ನನಗೆ ಕೊಡಿ ಅಂತ ಹೇಳಿದ್ದರು. ಆಗ ಬಿದ್ರಿನಲ್ಲಿ ಕಾಪಿ ಮಾಡಿಸಿದ್ದೆ. ಆದರೆ, ಅದನ್ನು ಹೈದರಾಬಾದ್ ಕಳುಹಿಸಲು ಆಗಲಿಲ್ಲ. ಓರಿಜಿನಲ್ ಮೆಡಲ್ ಕಳೆದು ಹೋಯಿತು. ಈಗ ಬಿದ್ರಿ ಪ್ರತಿ ಇರಬಹುದು. ಹುಡುಕಬೇಕು.

'ನನ್ನ ತಂದೆ ಗುಲಾಂ ಮುಸ್ತಫಾ ಅವರು ಪೊಲೀಸ್ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡಿದ್ದರು. ಅವರ ಬಗ್ಗೆ ಒಳ್ಳೆಯ ರೆಕಾರ್ಡ್ ಇತ್ತು. ಹಾಗೆಯೇ ಅವರೊಬ್ಬ ಒಳ್ಳೆಯ ಫೋಟೊಗ್ರಾಫರ್ ಆಗಿದ್ದರು. ನಿಜಾಂ ಪ್ರಧಾನಿ ಮಹಾರಾಜ ಕಿಷನ್ ಪ್ರಸಾದ್ ಬೀದರ್‌ಗೆ ಭೇಟಿ ನೀಡಿದಾಗ ತೆಗೆದ ಫೋಟೊ ಐತಿಹಾಸಿಕ ಮಹತ್ವದ್ದು. ಬೀದರ್ ಕೋಟೆಯ ಹತ್ತಿರ ಜೀಪ್‌ನಲ್ಲಿ ಮೆರವಣಿಗೆ ತೆಗೆಯುತ್ತಿರುವಾಗ ಆ ಫೋಟೊ ಕ್ಲಿಕ್ಕಿಸಿದ್ದರು. ಆ ಕಾಲದ ಬದುಕು ಮತ್ತು ಜನಜೀವನವನ್ನು ಅದು ಬಿಂಬಿಸುತ್ತದೆ. ಕೋಟೆಯ ಆವರಣದಲ್ಲಿ ಅವರು ಹಲವು ಫೋಟೊ ಕ್ಲಿಕ್ಕಿಸಿದ್ದಾರೆ.

ಪೊಲೀಸ್ ಆ್ಯಕ್ಷನ್ *(2) ನಡೆದ ದಿನಗಳು ನಮ್ಮ ಪಾಲಿಗೆ ಭೀಕರವಾಗಿದ್ದವು. ಒಳ್ಳೆಯವರು, ಕೆಟ್ಟವರು ಏನನ್ನೂ ನೋಡದೆ ಕೇವಲ ಧರ್ಮವೊಂದನ್ನೇ ಆಧಾರವಾಗಿಟ್ಟುಕೊಂಡು ದಾಳಿ ನಡೆಸುತ್ತಿದ್ದರು. ಜನ ಪರಸ್ಪರ ಮುಖ ನೋಡುವುದನ್ನೇ ಮರೆತುಬಿಟ್ಟಿದ್ದರು. ಏನಿದ್ದರೂ ಕತ್ತಿ, ಚೂರಿ, ಕೊಲೆ, ರಕ್ತದ ಮಾತುಗಳೇ ಕೇಳುತ್ತಿದ್ದವು. ಆಗ ನಮ್ಮ ಸುತ್ತ ಏನು ನಡೆಯುತ್ತದೆ ಎಂಬ ಬಗ್ಗೆ ಖಚಿತ ಅರಿವು ಮೂಡಿರಲಿಲ್ಲ. ಒಂದು ರೀತಿಯ ಭೀತಿ, ಆತಂಕದ ವಾತಾವರಣ ಇತ್ತು.

ಅದೇ ದಿನಗಳಲ್ಲಿ ಬೀದರ್‌ನಲ್ಲಿ ಬಾಂಬ್ ಬ್ಲಾಸ್ಟ್ ಆಯಿತು. ಏನು ಮಾಡಬೇಕು? ಯಾವುದು ಸುರಕ್ಷಿತ ಜಾಗ? ಎಂಬ ಬಗ್ಗೆ ಬೇಗ ನಿರ್ಣಯಕ್ಕೆ ಬರಲು ಆಗಲಿಲ್ಲ. ಹಿರಿಯರೆಲ್ಲ ಸೇರಿ ಏನೇನೋ ಮಾತನಾಡುತ್ತಿದ್ದರು. ಯಾವುದರ ಬಗ್ಗೆಯೂ ನಿರ್ಣಯ ತೆಗೆದುಕೊಳ್ಳುವಷ್ಟು ದೊಡ್ಡವನಾಗಿರಲಿಲ್ಲ. ಮಳೆಗಾಲದ ದಿನಗಳವು. ಧೋ ಎಂದು ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಸುತ್ತ ಹತ್ತು ಕಡೆಯಿಂದ ಕೇವಲ ಸಾವಿನ ಸುದ್ದಿಗಳು ಕೇಳಿ ಬರುತ್ತಿದ್ದವು. ಊರು ಬಿಡುವುದೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಸುರಿವ ಮಳೆಯ ನಡುವೆಯೇ ಎತ್ತಿನ ಗಾಡಿ ಕಟ್ಟಲಾಯಿತು. 'ಮಹಿಳೆಯರು, ಮಕ್ಕಳು

ಅದರಲ್ಲಿ ಕುಳಿತು ಹೊರಟೆವು. ಕಗ್ಗತ್ತಲು ಕವಿದಿತ್ತು. ಮನೆಯಿಂದ ಹೊರಟ ಚಕ್ಕಡಿ ಹೊರಟ ಒಂದೆರಡು ಗಂಟೆಯ ಪ್ರಯಾಣದ ನಂತರ ನದಿ ದಂಡೆಗೆ ತಲುಪಿತು. ಅದೇ ಮೊದಲ ಬಾರಿಗೆ ನದಿ ನೋಡಿದೆ. ರಾತ್ರಿಯೇ ಮಾಂಜ್ರಾ ನದಿ ದಾಟಿ ಹೋದೆವು. ಕೆಲಕಾಲ ನಾರಾಯಣಖೇಡ್‌ನಲ್ಲಿ ಉಳಿದಿದ್ದೆವು. ಅಷ್ಟೇ ನೆನಪು.

ಎಲ್ಲ ಶಾಂತವಾದ ಮೇಲೆ ಮತ್ತೆ ಬೀದರ್‌ಗೆ ಮರಳಿದೆವು. ಹೈಸ್ಕೂಲ್‌ಗೆ ಹೋಗಲು ಆರಂಭಿಸಿದೆ. ಹೈದರಾಬಾದ್‌ಗೆ ಮನೆ ಬದಲಾಯಿಸಿದರು. ಕುಟುಂಬದ ಸದಸ್ಯರೆಲ್ಲರೂ ಅಲ್ಲಿಗೇ ಹೊರಟು ಹೋದರು. ಪೊಲೀಸ್ ಆ್ಯಕ್ಷನ್ ಆದಮೇಲೆ ನನ್ನ ಕುಟುಂಬದ ಹೆಚ್ಚು ಜನ ಹೈದರಾಬಾದ್‌ಗೆ ವರ್ಗಾವಣೆಯಾದರೆ, ಬೀದರ್‌ನಲ್ಲಿ ತಂದೆ ಒಬ್ಬರೇ ಇರುತ್ತಿದ್ದರು. ಅವರಿಗೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಇದ್ದದ್ದರಿಂದ ಉಳಿಯುವುದು ಅನಿವಾರ್ಯ ಆಗಿತ್ತು. ಕೆಲವೇ ದಿನಗಳ ನಂತರ ತಂದೆಯವರು ನಿಧನರಾದರು. ಆಗ ನಾನು ಹೈಸ್ಕೂಲ್‌ಗೆ ಹೋಗುತ್ತಿದ್ದೆ. ಇಡೀ ಬೀದರ್‌ನಲ್ಲಿ ಒಂದೇ ಹೈಸ್ಕೂಲ್ ಇತ್ತು. ಮಲ್ಟಿಪರ್ಪಸ್ ಸ್ಕೂಲ್ ಎಂದು ಕರೆಯಲಾಗುತ್ತಿತ್ತು. ಒಂಬತ್ತನೇ ತರಗತಿ ವರೆಗೆ ಓದಿದೆ. ತಂದೆಯ ನಿಧನಾ ನಂತರ ಯಾವುದೇ ಇನ್‌ಕಮ್ ಸೋರ್ಸ್ ಇರಲಿಲ್ಲ ಆದ್ದರಿಂದ ಕಲಿಯುವುದನ್ನು ಕೈ ಬಿಡಬೇಕಾಯಿತು.

ನನ್ನ ಚಿಕ್ಕಪ್ಪ ಹೈದರಾಬಾದ್‌ನಲ್ಲಿ ಖುರೇಷಿ ಮಿನಿಸ್ಟರ್ ಹತ್ತಿರ ಕೆಲಸ ಮಾಡುತ್ತಿದ್ದರು. ಇಲ್ಲಿ ಬೀದರ್‌ನಲ್ಲಿ ನಮ್ಮನ್ನು ನೋಡಿಕೊಳ್ಳುವವರು ಇರಲಿಲ್ಲ. ಪೊಲೀಸ್ ಆ್ಯಕ್ಷನ್‌ನಿಂದಾಗಿ ಕೆಲಸ ಕೂಡ ಸಿಗುತ್ತಿರಲಿಲ್ಲ. ಆಗ ನಾನು ಕೂಡ ಹೈದರಾಬಾದ್‌ಗೆ ಹೊರಟು ಹೋದೆ. ಬಹಳಷ್ಟು ದಿನಗಳನ್ನು ಅಲ್ಲಿಯೇ ಕಳೆದೆ ಎಂದು ಬಾಲ್ಯದ ನೆನಪುಗಳನ್ನು ಮೆಲುಕು ಹಾಕುತ್ತಾರೆ.

## ಟಿಪ್ಪಣಿಗಳು–

* (1) ಬೀದರ್‌ನ ಅನನ್ಯ ಕಲೆ ಬಿದ್ರಿ. ಸತು ಮತ್ತು ತಾಮ್ರ ಮಿಶ್ರಿತ ಲೋಹದ ವಸ್ತುವಿನ ಮೇಲೆ ಡಿಸೈನ್ ಕೊರೆಯಲಾಗುತ್ತದೆ. ಹಾಗೆ ಕೊರೆದ ಪ್ರತಿಭಾಗದಲ್ಲಿಯೂ ಬೆಳ್ಳಿಯ ತಂತಿ ಕೂಡಿಸಲಾಗುತ್ತದೆ. ಅಪಾರ ಏಕಾಗ್ರತೆ, ಕುಸುರಿತನ ಬಯಸುವ ಬಿದ್ರಿ ಕಲೆ ಅತ್ಯಂತ ಶ್ರಮದಾಯಕ ಕಲಾ ಪ್ರಕಾರ. ಬೆಳ್ಳಿ ಕೂಡಿಸಿದ ಕಡೆ ಮಾತ್ರ ಹೊಳೆಯುವಂತೆ ಮಾಡಿ ಇಡೀ ಲೋಹವನ್ನು ಕಪ್ಪಾಗಿಸುವ ಸಾಧ್ಯತೆ ಇರುವುದು ಬೀದರ್‌ನ ಕೋಟೆಯ ಆವರಣದಲ್ಲಿ ಇರುವ ಮಣ್ಣಿಗೆ ಮಾತ್ರ. ಇದೇ ಕಾರಣಕ್ಕಾಗಿ ದೇಶದ ಬೇರಾವುದೇ ಭಾಗದಲ್ಲಿ ಬಿದ್ರಿ ಕಲಾಕೃತಿ ಮಾಡಲು ಸಾಧ್ಯವಿಲ್ಲ. ಹಾಗೆ ಮಾಡುವುದಾದರೆ ಬೀದರ್‌ನ ಮಣ್ಣನ್ನೇ ತೆಗೆದುಕೊಂಡು ಹೋಗಬೇಕು. ಆದ್ದರಿಂದಲೇ ಬಿದ್ರಿ ಕಲೆಗೆ ಪ್ರಾದೇಶಿಕ ಪೇಟೆಂಟ್ ಕೂಡ ಲಭ್ಯವಾಗಿದೆ.

ಕಪ್ಪು ಕ್ಯಾನ್ವಾಸ್‌ನಲ್ಲಿ ಬೆಳ್ಳಿಗೆರೆಗಳ ಮೂಲಕ ಮಿಂಚುವ, ಹೊಳೆಯುವ ಬಿದ್ರಿ ಅದ್ಭುತ ಕಲೆ. ಪ್ರತಿಯೊಂದು ಎಳೆಯನ್ನೂ ಕೊರೆದು ಅದರಲ್ಲಿ ಬೆಳ್ಳಿ ತುಂಬುವ ಕಲಾವಿದನ ಶ್ರಮ ಶ್ಲಾಘನೀಯ. ಆಧುನಿಕ ತಂತ್ರಜ್ಞಾನದ ಫಲವಾಗಿ ಏಕಕಾಲಕ್ಕೆ ಹತ್ತಾರು, ನೂರಾರು ಪ್ರತಿಗಳನ್ನು ತಯಾರಿಸುವ ದಿನಗಳಲ್ಲಿ 'ಒಂದು ಕಲಾಕೃತಿ'ಗಾಗಿ ವಾರಗಟ್ಟಲೇ ಕೆಲಸ ಮಾಡಬೇಕಾಗುತ್ತದೆ. ಬಿದ್ರಿ ಕಲಾವಿದರು ಸೊಗಸಾಗಿ, ಕುಸುರಿತನದಿಂದ ಕೆಲಸ ಮಾಡುತ್ತಾರೆ. ಆದರೆ, ಎಲ್ಲಿಯೂ ತಮ್ಮ ಹೆಸರು ಹಾಕುವ, ಅದನ್ನು ದಾಖಲಿಸುವ ಹಠಕ್ಕೆ ಬಿದ್ದಿಲ್ಲ. ಹಾಗಾಗಿ ಬಿದರಿ ಕಲೆ ಕ್ಯಾನ್ವಾಸ್ ಮೇಲೆ ಪೇಂಟಿಂಗ್ ಮಾಡುವ ಕಲಾವಿದನೊಬ್ಬನ ಕಲೆ ಅಲ್ಲ, ಅದು ಸಮುದಾಯದ ಕಲೆ. ಅದಕ್ಕಾಗಿಯೇ ಇಲ್ಲಿ ಕಲೆ ಮುಖ್ಯವಾಗಿ ಕಲಾವಿದ ಹಿಂದಕ್ಕೆ ಸರಿಯುತ್ತಾನೆ.

*(2) ಭಾರತಕ್ಕೆ 1947ರ ಆಗಸ್ಟ್ 17ರಂದು ಸ್ವಾತಂತ್ರ್ಯ ದೊರೆಯಿತು. ಬಹಳಷ್ಟು ಜನ ಅರಸರು ಸ್ವತಂತ್ರ ಭಾರತದ ಒಕ್ಕೂಟದಲ್ಲಿ ಸೇರಲು ಸಮ್ಮತಿಸಿದರು. ಆದರೆ, ಹೈದರಾಬಾದ್ ಪ್ರಾಂತ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ನಿಜಾಂ ಭಾರತ ಒಕ್ಕೂಟದಲ್ಲಿ ಸೇರಲು ಹಿಂದೇಟು ಹಾಕಿದರು. ಅದೇ ದಿನಗಳಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ನಿಜಾಂರ ಪಡೆಯಾದ ರಜಾಕಾರರು ಹಿಂದುಗಳ ಮೇಲೆ ದೌರ್ಜನ್ಯ ನಡೆಸಿದ್ದರು. ಅದಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳಲು ಹಿಂದುಗಳು ಕೂಡ ಕಾತರರಾಗಿದ್ದರು. ಎರಡೂ ಕೋಮಿನವರ ನಡುವೆ ಪರಸ್ಪರ ಅಪನಂಬುಗೆ ಇದ್ದ ದಿನಗಳವು. ಆಗ ಕೇಂದ್ರ ಗೃಹಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಮಿಲಟರಿ ಕಳುಹಿಸಿ ಹೈದರಾಬಾದ್ ಪ್ರಾಂತ್ಯವನ್ನು ವಶಕ್ಕೆ ತೆಗೆದುಕೊಂಡರು. ಮಿಲಟರಿ ಕಾರ್ಯಾಚರಣೆ ಎಂದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿರೋಧ ಎದುರಿಸಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ಕಾರ್ಯಾಚರಣೆಯನ್ನು 'ಪೊಲೀಸ್ ಆ್ಯಕ್ಷನ್' ಎಂದು ಕರೆಯಲಾಯಿತು. ರಜಾಕಾರರಿಂದ ಹಿಂಸೆಗೆ ಒಳಗಾಗಿದ್ದ ಹಿಂದುಗಳು ಪೊಲೀಸ್ ಆ್ಯಕ್ಷನ್ ನಂತರ ಸೇಡು ತೀರಿಸಿಕೊಳ್ಳಲು ಹಾತೊರೆಯುತ್ತಿದ್ದರು. ಈಗಿನ ಹೈದರಾಬಾದ್ ಕರ್ನಾಟಕ ಅಂದರೆ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ದಿನಗಳನ್ನು 'ಪೊಲೀಸ್ ಆ್ಯಕ್ಷನ್' ದಿನಗಳು ಎಂದು ಗುರುತಿಸಲಾಗುತ್ತದೆ.

■

## 08 ಕ್ಯಾಮರಾ ಜೊತೆಗೇ ಬೆಳೆದ ಬದುಕು

ಮುಂತಕಾ ಅಪಾರವಾದ ಧಾರ್ಮಿಕ ನಂಬಿಕೆ ಉಳ್ಳವರು. ಇಸ್ಲಾಂ ಕುರಿತಾದ ಅವರ ನಂಬಿಕೆ ಅಚಲವಾದದ್ದು. ಬಾಲ್ಯದಿಂದಲೂ ನಮಾಜಿನ ಬಗ್ಗೆ ಶ್ರದ್ಧೆ ಇಟ್ಟುಕೊಂಡವರು. ಪ್ರತಿದಿನ ಐದು ಬಾರಿ ಪ್ರಾರ್ಥನೆ ಮಾಡುವುದನ್ನು ಎಂದೂ ತಪ್ಪಿಸಿದವರಲ್ಲ. ಹಾಗೆಯೇ ನಮಾಜ್ ಮಾಡುವುದು ಪ್ರತಿಯೊಬ್ಬ ಮುಸ್ಲಿಮನ ಆದ್ಯ ಕರ್ತವ್ಯ ಎಂದು ಬಲವಾಗಿ ನಂಬಿದವರು. ರಂಜಾನಿನ ಉಪವಾಸ ತಪ್ಪಿಸಿದವರಲ್ಲ. ತೀರಾ ಅನಿವಾರ್ಯ ಕಾರಣಗಳಿಗಾಗಿ ಅದು ಕೂಡ ಆರೋಗ್ಯದ ಕಾರಣಗಳಿಗಾಗಿ ಒಂದೆರಡು ಬಾರಿ ರೋಜಾ ಮಾಡುವುದನ್ನು ತಪ್ಪಿಸಿರಬಹುದು. ನಿತ್ಯದ ನೂರು ಜಂಜಾಟಗಳಿಗೆ ನಮಾಜ್‌ನ ಟಾನಿಕ್‌ನಿಂದ ಪುನಃಸ್ಫೂರ್ತಿ ಬರುತ್ತದೆ ಎಂಬ ನಂಬಿಕೆ ಅವರದು.

ಸಣ್ಣ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ್ಡದರಿಂದ ಮನೆಯಲ್ಲಿ ತಾಯಿಯಿಂದ ದೊರೆಯುವ ಧಾರ್ಮಿಕ ಶಿಕ್ಷಣದಿಂದ ವಂಚಿತರಾಗಿರುವ ಮುಂತಕಾ ಅವರಿಗೆ ಅರಬ್ಬಿ ಓದಲು ಬರುವುದಿಲ್ಲ. ಅವರು ಮದರಸಾಕ್ಕೆ ಹೋಗಿ ಧಾರ್ಮಿಕ ಶಿಕ್ಷಣ ಪಡೆದವರಲ್ಲ. ಪ್ರಾರ್ಥನೆಯ ಸಂದರ್ಭದಲ್ಲಿ ಹೇಳಬೇಕಾಗುವ ಕುರಾನಿನ ಸಾಲುಗಳನ್ನು ಬಾಯಿಪಾಠ ಮಾಡಿಕೊಂಡಿದ್ದಾರೆ. ಉರ್ದು ಮಾಧ್ಯಮದಲ್ಲಿ ಒಂಬತ್ತನೇ ತರಗತಿಯವರೆಗೆ ಓದಿದ ಕಾರಣದಿಂದಾಗಿ ಅವರು ಕುರಾನ್‌ಅನ್ನು ಅಕ್ಷರಕ್ಷರ ಕಷ್ಟಪಟ್ಟು ಕೂಡಿಸಿಕೊಂಡು ಓದಬಲ್ಲರು. ಆದರೆ, ಅವರಿಗೆ ಅರಬ್ಬಿ ಅರ್ಥವಾಗುವುದಿಲ್ಲ. ಮಗುವಾಗಿದ್ದಾಗಲೇ ಮಾತೃಪ್ರೀತಿಯಿಂದ ವಂಚಿತರಾದ ಅವರಿಗೆ ಬಂಧುಗಳ- ಆಪ್ತರ ಮನೆಯಲ್ಲಿ ಅನ್ಯರಾಗಿ ಬೆಳೆಯಬೇಕಾಗಿ ಬಂತು. ಹೀಗಾಗಿ ಪ್ರೀತಿ ಮತ್ತು ಕೌಟುಂಬಿಕ ಬದುಕನ್ನು ಅನುಭವಿಸುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಈ ವಿಷಾದ ಅವರ ಬದುಕಿನುದ್ದಕ್ಕೂ ವ್ಯಾಪಿಸಿಕೊಂಡು ಬಂದಿದೆ.

ಕ್ಯಾಮರಾ ಮುಂತಕಾ ಅವರಿಗೆ ತಂದೆಯಿಂದ ಬಂದ ಬಳುವಳಿ. ಹಾಗಂತ ಮುಂತಕಾ ಅವರ ತಂದೆ ಮುಸ್ತಫಾ ಅವರು ಮಗನ ಕೈಯಲ್ಲಿ ಕ್ಯಾಮರಾ ಕೊಟ್ಟು ಫೋಟೊಗ್ರಫಿ ಕಲಿಸಿದವರಲ್ಲ. ಆಗ ಸಿರಿವಂತರ ಮನೆಗಳಲ್ಲಿ ಕ್ಯಾಮರಾ ಮತ್ತು ಗ್ರಾಮಫೋನ್‌ಗಳನ್ನು ಶೋಕಿಗಾಗಿ ಇಡುವ ಪದ್ಧತಿ ಇತ್ತು. ಮುಂತಕಾ ಅವರ ದೊಡ್ಡಪ್ಪ ಅವರಿಗೆ ಕ್ಯಾಮರಾದ ಶೋಕಿ ಇತ್ತು. ಅದು ಮುಸ್ತಫಾ ಅವರಿಗೂ ಹರಡಿತು. ತಂದೆಯವರ ವೃತ್ತಿಯೇ ಪೊಲೀಸ್ ಇಲಾಖೆಯಲ್ಲಿ ಫೋಟೊ ತೆಗೆಯುವುದಾಗಿತ್ತು. ಬೆರಗಿನಿಂದ ಕ್ಯಾಮರಾ ನೋಡುತ್ತಲೇ

ಬಾಲ್ಯ ಕಳೆದವರು. ತಂದೆ ಕೈ ಹಿಡಿದು ಕಲಿಸದಿದ್ದರೂ ಕ್ಯಾಮರಾದ ವಾತಾವರಣ ಮಾತ್ರ ಮನೆಯಲ್ಲಿತ್ತು. ಅದು ಮುಂತಕಾ ಆಸಕ್ತಿ ಬೆಳೆಸಿಕೊಳ್ಳುವುದಕ್ಕೆ ಕಾರಣವಾಯಿತು.

ಕಳೆದ ಏಳು ದಶಕಗಳ ಅವಧಿಯಲ್ಲಿ ಕ್ಯಾಮರಾ ಬೆಳೆದು ಬಂದ ಹಾಗೆಯೇ ಮುಂತಕಾ ಅವರು ಕೂಡ ಬೆಳೆಯುತ್ತ, ಮಾಗುತ್ತ ಬಂದಿದ್ದಾರೆ. ಹೀಗಾಗಿಯೇ ಫೋಟೋಗ್ರಫಿಯ ಬದಲಾದ ವಿವಿಧ ಮಜಲುಗಳ ಬಗ್ಗೆ ಮುಂತಕಾ ಅವರಿಗೆ ಅಪಾರವಾದ ತಿಳುವಳಿಕೆ ಇದೆ. ಅವರು ಸ್ವತಃ ಬದಲಾವಣೆಗಳಿಗೆ ಸಾಕ್ಷಿಯಾದವರು. ಕ್ಯಾಮರಾ ಜಗತ್ತಿನಲ್ಲಿ ನಡೆಯುತ್ತ ಬಂದ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತ ಬಂದಿರುವ ಅವರು ಸುಧಾರಿತ ಆವೃತ್ತಿಗಳನ್ನು ಕಲಿಯುವುದರಲ್ಲಿ ಹಿಂದೆ ಬಿದ್ದಿಲ್ಲ. ಹೀಗಾಗಿಯೇ ಈಗ ಅವರು ಫೋಟೋ ತೆಗೆಯುವುದಕ್ಕೆ ನಿಕಾನ್ ಕಂಪೆನಿಯ ಡಿಜಿಟಲ್ ಕ್ಯಾಮರಾ ಬಳಸುತ್ತಿದ್ದಾರೆ.

ಕ್ಯಾಮರಾ ಅವರ ನಿತ್ಯಜೀವನದ ಸಂಗಾತಿ. ಬಾಲ್ಯದಿಂದಲೂ ಅವರ ಬದುಕಿನ ಸ್ಥಾಯಿಭಾವ ಆದ ವಿಷಾದ, ಒಬ್ಬಂಟಿತನ, ಹತಾಶೆ ಅವರನ್ನು ಬದುಕಿನಲ್ಲಿರುವ ಸಂಭ್ರಮದ ಕ್ಷಣಗಳನ್ನು ಕಸಿದುಕೊಳ್ಳುತ್ತ ಬಂದಿದೆ. 'ಎಷ್ಟು ಮಾನಸಿಕ ಕಿರಿಕಿರಿ ಅನುಭವಿಸಿದ್ದೇನೆ ಎಂದರೆ ಖುಷಿ, ಸಂತಸ ಮತ್ತು ಕೌಟುಂಬಿಕ ವ್ಯವಹಾರಗಳತ್ತ ಮನಸ್ಸು ಹರಿಯಲೇ ಇಲ್ಲ. ನಾನೊಬ್ಬನು ಬದುಕುವುದೇ ಕಷ್ಟವಾಗಿರುವಾಗ ಇನ್ನೊಂದು ಜೀವಕ್ಕೆ ಯಾಕೆ ತೊಂದರೆ ನೀಡುವುದು?' ಎಂದು ಹತ್ತಾರು ಬಾರಿ ಕೇಳಿಕೊಂಡಿದ್ದಾರೆ. ಪ್ರತಿಬಾರಿಯೂ ಒಂಟಿಯಾಗಿರುವುದು ಮತ್ತು ಒಬ್ಬಂಟಿಯಾಗಿರುವುದೇ ಸರಿ ಅನ್ನಿಸಿದೆ. ಹೀಗಾಗಿ ಮದುವೆಯ ಬಗ್ಗೆ ಖಚಿತವಾದ ನಿರ್ಧಾರ ತೆಗೆದುಕೊಳ್ಳಲೇ ಇಲ್ಲ. ಮಹಿಳೆಯರನ್ನು ಕಂಡರೆ ಅವರಿಗೆ ಭಯ ಮತ್ತು ಗೌರವ. ಅದರಿಂದಾಗಿ ಕ್ಯಾಮರಾ ಅವರ ಬದುಕಿನ ಹಲವಾರು ಕ್ಷಣಗಳ ಒಂಟಿತನವನ್ನು ನಿವಾರಿಸುವುದಕ್ಕೆ ಬಳಕೆಯಾದ ಸ್ನೇಹಿತ, ಸಂಗಾತಿ ಮತ್ತು ಒಡನಾಡಿ.

ಛಾಯಾಗ್ರಹಣದಲ್ಲಿಯೇ ಬದುಕು ಕಂಡುಕೊಳ್ಳುವುದಕ್ಕಾಗಿ ಮುಂಬೈ ಮತ್ತು ಹೈದರಾಬಾದ್‌ಗೆ ಹತ್ತಾರು ಬಾರಿ ಅಲೆದಿದ್ದಾರೆ. ನೆಲೆ ಕಂಡುಕೊಳ್ಳಲು ನಡೆಸಿದ ಪ್ರಯತ್ನಗಳನ್ನು ತಾವೇ ಹುಸಿಗೊಳಿಸಿದ್ದಾರೆ. ಫಿಲಂ ಲ್ಯಾಂಡ್ ಸೇರುವುದಕ್ಕಾಗಿ ಅವರು ಮುಂಬೈಗೆ ಹೋದದ್ದು ಕೂಡ ಉಂಟು. ಕ್ಯಾಮರಾ ಬಗ್ಗೆ ಆಸಕ್ತಿ ಇರುವ ಕಾರಣಕ್ಕಾಗಿ ಇವರನ್ನು ಸಂದರ್ಶಿಸಿದ ಸಿನಿಮಾ ಜಗತ್ತಿನ ಜನ ಫಿಲಂ ಪ್ರೊಸೆಸಿಂಗ್ ವಿಭಾಗಕ್ಕೆ ಕಳುಹಿಸಿದರು. ಸಂಸ್ಕರಣೆ ಮಾಡುವ ವಿವಿಧ ಹಂತಗಳ ಬಗ್ಗೆ ಕುತೂಹಲದಿಂದ ಕಲಿಯಲು ಪ್ರಯತ್ನಿಸಿದರು. ಒಂದೇ ಕೆಲಸದಲ್ಲಿ ಸ್ಪೆಷಲೈಸೇಷನ್ ಮಾಡುವ ಮುಂಬಯಿಗರಿಗೆ ಇಡೀಯಾಗಿ ಕಲಿಯಬಯಸುವ ಮುಂತಕಾ ಅಸಹಜವಾಗಿ ಕಾಣಿಸತೊಡಗಿದರು. ಅದರ ಜೊತೆಗೆ ಇವರು 'ತಂತ್ರ' ಕದಿಯಲು ಬಂದ ವ್ಯಕ್ತಿ ಇರಬಹುದೇ ಎಂಬ ಗುಮಾನಿಯೂ ಹುಟ್ಟಿಕೊಂಡಿತು. ಅಲ್ಲಿಂದ ಲ್ಯಾಬ್‌ಗೆ ವರ್ಗಾಯಿಸಿದರು. ಅಲ್ಲಿ ಡಾರ್ಕ್ ರೂಮ್‌ನಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಕತ್ತಲೆಯ ಕೋಣೆಯಲ್ಲಿ ಮಹಿಳೆಯರೂ ಜೊತೆಗಿರುತ್ತಿದ್ದರು. ಆದ್ದರಿಂದ ಮುಂತಕಾ ಅಲ್ಲಿ ಕೆಲಸ

ಮಾಡುವುದನ್ನೇ ಬಿಟ್ಟು ಬಿಟ್ಟರು. ಸಿನಿಮಾ ಜಗತ್ತಿನೊಂದಿಗೆ ಕಡಿದುಕೊಂಡ ಸಂಪರ್ಕ ಮತ್ತೆ ಸಾಧಿಸಿಕೊಳ್ಳುವುದು ಸಾಧ್ಯವಾಗಲೇ ಇಲ್ಲ.

ಮರಳಿ ಗೂಡಿಗೆ ಬಂದ ಮುಂತಕಾ ಅವರು 'ಫೋಟೊ ಸೆಂಟರ್' ಸ್ಟುಡಿಯೋ ಆರಂಭಿಸಿದರು. ಅಲ್ಲಿಯೇ ಶುರುವಾಯಿತು ಕ್ಯಾಮರಾ ಬಿಚ್ಚುವ ಕಾಯಕ. ಸ್ಟುಡಿಯೋ ತೆರೆದದ್ದಾಯಿತು. ನಿತ್ಯ ನೂರಾರು ಇರಲಿ ಹತ್ತಾರು ಗಿರಾಕಿಗಳು ಕೂಡ ಬರುತ್ತಿರಲಿಲ್ಲ. ಸ್ಟುಡಿಯೋದಲ್ಲಿ ಖಾಲಿ ಕುಳಿತು ಕೊಳ್ಳಲಾಗದೇ ಕೈಯಲ್ಲಿದ್ದ ಕ್ಯಾಮರಾ ಬಿಚ್ಚಲು ಆರಂಭಿಸಿದರು. ಆಗಿನ ಕ್ಯಾಮರಾಗಳು ಈಗಿನಂತೆ ಅತ್ಯಂತ ಸೂಕ್ಷ್ಮ ಹಾಗೂ ಸಂಕೀರ್ಣ ಆಗಿರಲಿಲ್ಲ. ಕ್ಯಾಮರಾದ ಕಾರ್ಯವೈಖರಿ ಅರಿಯುವುದಕ್ಕೆ ಅದರ ಹೊಟ್ಟೆ ಬಗೆದು ಕರುಳು ಹೊರ ತೆಗೆಯುವ ಪರಿಪಾಠ ಆರಂಭವಾಯಿತು. ಅದೇ ದಿನಗಳಲ್ಲಿ ಮಿತ್ರರೊಬ್ಬರ ಕ್ಯಾಮರಾದಲ್ಲಿ ಲೈಟ್ ಪಾಸ್ ಆಗಲು ಆರಂಭಿಸಿತು. ತಕ್ಷಣಕ್ಕೆ ದೂರದ ಮುಂಬೈಗೆ ಕೊಂಡೊಯ್ದು ರಿಪೇರಿ ಮಾಡಿಸುವುದು ಸಾಧ್ಯವಿರಲಿಲ್ಲ. ಯಾಕೆ ನಾವೇ ಒಂದು ಕೈ ನೋಡಬಾರದು ಎಂದು ನಿರ್ಣಯಿಸಿದ ಮುಂತಕಾ ಕ್ಯಾಮರಾ ಬಿಚ್ಚಿ ದೋಷ ಪತ್ತೆ ಹಚ್ಚಿದರು. ಅದನ್ನು ಸರಿ ಪಡಿಸುವಲ್ಲಿ ಯಶಸ್ವಿಯೂ ಆದರು. ಆಗ ದೊರೆತ ಆತ್ಮವಿಶ್ವಾಸ ಯಾವುದೇ ಕಂಪೆನಿಯ ಎಂತಹುದೇ ಕ್ಯಾಮರಾ ಬಿಚ್ಚಿಡುವುದಕ್ಕೆ ಹಿಂದೇಟು ಹಾಕದಂತೆ ನೋಡಿಕೊಂಡಿತು.

ಮುಂತಕಾ ಆರಂಭದಲ್ಲಿ ನೋಡಿದ್ದು, ಬಳಸಿದ್ದು ಬೆಳಗಾಂ ಕಟ್ಟಿಗೆ ಬಾಡಿಯ ಕ್ಯಾಮರಾ. ವುಡನ್ ಬಾಡಿಯ ಕ್ಯಾಮರಾ ಬಳಸಿ ಫೋಟೊ ಕ್ಲಿಕ್ಕಿಸುವ ವಿಧಾನ ಫೋಟೊಗ್ರಫಿಯ ಆರಂಭದ ದಿನಗಳಲ್ಲಿ ಚಾಲ್ತಿಯಲ್ಲಿತ್ತು. ಮೂರು ಕಾಲಿನ ಸ್ಟ್ಯಾಂಡ್ ಮೇಲೆ ಕ್ಯಾಮರಾ ಎಂದು ಕರೆಯುವ ಕಟ್ಟಿಗೆಯ ಪೆಟ್ಟಿಗೆ ಇಡಲಾಗುತ್ತಿತ್ತು. ಅದರ ಮುಂದೆ ಫೋಟೊ ತೆಗೆಯಿಸಿಕೊಳ್ಳುವ ವ್ಯಕ್ತಿಯನ್ನು ನಿಲ್ಲಿಸಬೇಕಾಗುತ್ತಿತ್ತು. ನೆರಳು– ಬೆಳಕಿನ ಸಂಯೋಜನೆ ರೂಪಿಸಿಕೊಳ್ಳಬೇಕಿತ್ತು. ಎಲ್ಲ ಸಿದ್ಧವಾದ ಮೇಲೆ ಕ್ಯಾಮರಾದೊಂದಿಗೆ ಫೋಟೊಗ್ರಾಫರ್ ಕಪ್ಪುಬಟ್ಟೆಯ ಗೌನಿನೊಳಗೆ ಅವಿತು ಲೆನ್ಸ್ ಮುಂದೆ ಹಾಕಲಾಗಿದ್ದ ಕ್ಯಾಪ್ ತೆಗೆದು ಎಕ್ಸಪೋಸ್ ಮಾಡಿ ತಕ್ಷಣ ಅದನ್ನು ಮುಚ್ಚಬೇಕಾಗುತ್ತಿತ್ತು. ಈ ಎಲ್ಲ ಪ್ರಕ್ರಿಯೆಗೆ ಅಪಾರ ಪ್ರಮಾಣದ ಚಾಕಚಕ್ಯತೆ ಮತ್ತು ನಿರಂತರ ಪರಿಶ್ರಮ ಅಗತ್ಯವಿತ್ತು. ಈಗಿನಂತೆ ಕ್ಯಾಮರಾದ ಬಟನ್ ಅದುಮುವ ಮೂಲಕ ಫೋಟೊ ಪಡೆಯುವ ಕಾಲ ಅದಾಗಿರಲಿಲ್ಲ.

ಹಗಲಿನ ಬೆಳಕಿನಲ್ಲಿ ಮಾತ್ರ ಫೋಟೊ ತೆಗೆಯಬೇಕಾಗುತ್ತಿತ್ತು. ವಿದ್ಯುತ್ ಸಂಪರ್ಕ ಬಂದಿರದ ದಿನಗಳಲ್ಲಿ ರಾತ್ರಿಯ ವೇಳೆ ಲಾಟೀನು ಬೆಳಕಿನಲ್ಲಿ ಫೋಟೊ ಸಂಸ್ಕರಿಸಿ ಮುದ್ರಿಸಬೇಕಾಗುತ್ತಿತ್ತು. ಎನ್‌ಲಾರ್ಜರ್ ಇಲ್ಲದ ದಿನಗಳಲ್ಲಿ ನೆಗೆಟಿವ್‌ನಷ್ಟೇ ಗಾತ್ರದ ಫೋಟೊ ಮುದ್ರಿಸಬೇಕಾಗುತ್ತಿತ್ತು. ನಂತರದ ದಿನಗಳಲ್ಲಿ ಕ್ಯಾಮರಾವನ್ನೇ ಎನ್‌ಲಾರ್ಜರ್ ಆಗಿ ಬಳಸುವ ಪರಿಪಾಠ ಆರಂಭವಾಯಿತು. ವಿದ್ಯುತ್ ಸೌಲಭ್ಯ ಇಲ್ಲದ ದಿನಗಳಲ್ಲಿ ಬೆಳಕು ಚೆಲ್ಲಿ ಫೋಟೊ ಕ್ಲಿಕ್ಕಿಸಲು ಆರಂಭಿಸಿದರು. ಈ ಬಗ್ಗೆ ಅವರಿಗೆ ತಾಂತ್ರಿಕ ವಿವರ ಒದಗಿಸಿದ್ದು ಸೋಲಾಪೂರ

ಮೂಲದ ಫೋಟೋಗ್ರಾಫರ್. ರಾತ್ರಿಯಲ್ಲಿ ಫೋಟೊ ತೆಗೆಯಬೇಕಾದ ಸಂದರ್ಭದಲ್ಲಿ ಸೋಡಿಯಂ ಮತ್ತು ಮ್ಯಾಗ್ನೇಷಿಯಂ ಪೌಡರ್‌ಗಳನ್ನು ಹಾಕಿಟ್ಟುಕೊಳ್ಳಬೇಕು. ಎಲ್ಲ ಸಿದ್ಧವಾದ ಮೇಲೆ ಕ್ಯಾಮರಾದ ಕ್ಯಾಪ್ ತೆಗೆದು ಇಡಲಾಗುತ್ತಿತ್ತು. ಊದಿನಕಡ್ಡಿಯ ಕಿಡಿಯಿಂದ ಪೌಡರ್‌ಗೆ ತಗುಲಿಸಿದರೆ ಬೆಳಕು ಚೆಲ್ಲುತ್ತಿತ್ತು. ಆ ಬೆಳಕಿನಲ್ಲಿ ಕಾಣಿಸಿಕೊಂಡ ಬಿಂಬ ಕ್ಯಾಮರಾದಲ್ಲಿ ದಾಖಲಾಗುತ್ತಿತ್ತು.

ಫೋಟೊಗ್ರಫಿಯ ಆರಂಭದ ದಿನಗಳಲ್ಲಿ ಲೋಹದ ನೆಗೆಟಿವ್‌ಗಳಿದ್ದವು. ಅದಾದ ಮೇಲೆ ಬಂದದ್ದು ಗಾಜಿನ ನೆಗೆಟಿವ್‌ಗಳು. ಗಾಜಿನ ಮೇಲೆ ಸಿಲ್ವರ್ ನೈಟ್ರೇಟ್ ಕೋಟಿಂಗ್ ಹಚ್ಚಿಟ್ಟುಕೊಂಡು ಒಣಗುವ ಮುನ್ನವೇ ಎಕ್ಸ್‌ಪೋಸ್ ಮಾಡಬೇಕು. ಒಣಗಿದ ಮೇಲೆ ಡೆವಲೆಪ್ ಮಾಡಿ ಪ್ರಿಂಟ್ ಹಾಕಬೇಕಾಗುತ್ತಿತ್ತು. ಮುಂತಕಾ ಬಳಿ ಅವರ ತಂದೆಯವರು ತೆಗೆದು ಪೋಟೊದ ಗಾಜಿನ ನೆಗೆಟಿವ್‌ಗಳೂ ಸೇರಿದಂತೆ ನೂರಾರು ಗಾಜಿನ ನೆಗೆಟಿವ್‌ಗಳಿವೆ. ಗಾಜಿನ ನೆಗೆಟಿವ್‌ಗಳನ್ನು ಬಳಸಿ ಪ್ರಿಂಟ್ ಹಾಕುವ ವಿಧಾನ ಬಹುತೇಕ ಮರೆತು ಹೋಗಿದೆ. ಮುಂತಕಾ ಅವರು ಈಗಲೂ ಗಾಜಿನ ನೆಗೆಟಿವ್‌ಗಳಿಂದ ಫೋಟೊ ಪ್ರಿಂಟ್ ಹಾಕಬಲ್ಲರು. ಈ ರೀತಿ ಪ್ರಿಂಟ್ ಹಾಕಬಲ್ಲವರು ಅಪರೂಪ. ಅಪಾರ ತಾಳ್ಮೆ ಮತ್ತು ಸಮಯಾವಕಾಶ ನಿರೀಕ್ಷಿಸುವ ಈ ಮುದ್ರಣ ವಿಧಾನ ಬಳಸಿ ಈ ಪುಸ್ತಕಕ್ಕಾಗಿಯೇ ಕೆಲವು ಫೋಟೊಗಳನ್ನು ಗಾಜಿನ ನೆಗೆಟಿವ್‌ನಿಂದ ಪ್ರಿಂಟ್ ಹಾಕಿ ನೀಡಿದ್ದಾರೆ.

ಗಾಜಿನ ನೆಗೆಟಿವ್‌ಗಳ ನಂತರ ಬಂದದ್ದು ಪ್ಲಾಸ್ಟಿಕ್ ನೆಗೆಟಿವ್‌ಗಳು. ಅವುಗಳನ್ನು ಮಡಿಚಬಹುದಿತ್ತು. ಗಾಜಿನ ನೆಗೆಟಿವ್‌ಗಳ ಹಾಗೆ ಹೆಚ್ಚು ಕಾಳಜಿ ವಹಿಸಬೇಕಾಗಿರಲಿಲ್ಲ. ಬೃಹತ್ ಗಾತ್ರದ ಪ್ಲಾಸ್ಟಿಕ್ ನೆಗೆಟಿವ್‌ಗಳ ಸ್ಥಾನವನ್ನು 120 ಗಾತ್ರದ ರೀಲ್‌ಗಳು ತುಂಬಿದವು. ನಂತರ ಬಂದದ್ದು 36 ಎಂ.ಎಂ. ರೀಲ್‌ಗಳು. ನಂತರದ ದಿನಗಳಲ್ಲಿ 36 ಎಂ.ಎಂ.ನಲ್ಲಿಯೇ ಕಲರ್ ರೀಲ್‌ಗಳ ಆವಿಷ್ಕಾರ ಆಯಿತು. ಡಿಜಿಟಲ್ ಕ್ಯಾಮರಾ ಬರುವುದರೊಂದಿಗೆ ಎಲ್ಲ ಮಾದರಿಯ ಕ್ಯಾಮರಾಗಳೂ ಹಿಂದಕ್ಕೆ ಸರಿದವು. ಕಾಲನ ಜೊತೆ ಸೆಣಸಿ ಸಮಕಾಲೀನ ಕ್ಷಣವನ್ನು ಹಿಡಿದಿಡುವ ಕ್ಯಾಮರಾಗಳೇ ಕಾಲನ ಓಟದಲ್ಲಿ ಮೂಲೆಗುಂಪಾದವು. 'ಡಿಜಿಟಲ್ ಕ್ಯಾಮರಾಗಳಿಂದ ಬಹಳಷ್ಟು ಸವಲತ್ತುಗಳಿವೆಯಾದರೂ ಅವು ಫೋಟೊಗ್ರಫಿಯ ಮಹತ್ವವನ್ನು ಕಡಿಮೆ ಮಾಡಿಬಿಟ್ಟವು' ಎಂಬ ಅಭಿಪ್ರಾಯ ಮುಂತಕಾ ಅವರದ್ದು. ಅವರ ಸಂಗ್ರಹದಲ್ಲಿ ಇರುವ ವಿವಿಧ ದೇಶಗಳಿಗೆ ನೂರಾರು ಕ್ಯಾಮರಾಗಳನ್ನು ನೋಡುವುದೇ ಅಪರೂಪದ 'ಮ್ಯೂಸಿಯಂ'ಗೆ ಭೇಟಿ ನೀಡಿದ ಅನುಭವ ನೀಡುತ್ತದೆ.

ಕ್ಯಾಮರಾದೊಂದಿಗೇ ಬೆಳೆಯುತ್ತ ಬಂದಿರುವ ಮುಂತಕಾ ಮುಂದಿನ ದಿನಗಳಲ್ಲಿ ತಮ್ಮ ಸಂಗ್ರಹದಲ್ಲಿರುವ ಕ್ಯಾಮರಾಗಳನ್ನು ಏನು ಮಾಡುತ್ತಾರೆ? 'ಆ ಬಗ್ಗೆ ಹೆಚ್ಚಿಗೆ ಯೋಚನೆ ಮಾಡಿಲ್ಲ. ನಾನು ಇರುವವರೆಗೆ ಅವುಗಳನ್ನು ಯಾರಿಗೂ ನೀಡುವುದಿಲ್ಲ. ಯಾರಾದರೂ ಮ್ಯೂಸಿಯಂ ಮಾಡಲು ಮುಂದೆ ಬಂದರೆ ಕೊಟ್ಟು ಬಿಡುತ್ತೇನೆ' ಎಂಬ

ಉತ್ತರ ನೀಡುತ್ತಾರೆ. ಮುಂತಕಾ ಅವರ ಅತ್ಯಂತ ಪ್ರೀತಿ ಪಾತ್ರನಾಗಿರುವ ಸಹೋದರನ ಮಗ, ಮಹಮದ್‌ಗೆ ಅಮೆರಿಕಾಕ್ಕೆ ಹೋಗಿ ಅಲ್ಲಿ ಬದುಕು ರೂಪಿಸಿಕೊಳ್ಳುವ ಆಸೆ. ಹಾಗೆಯೇ ಕ್ಯಾಮರಾ ಹೆಗಲಿಗೆ ಏರಿಸಿಕೊಂಡು ಮದುವೆ, ಸಮಾರಂಭಗಳಲ್ಲಿ ಫೋಟೊ ತೆಗೆಯುವುದು ಗೌರವ ತರುವ ಕೆಲಸ ಅಲ್ಲ. ಜನ ಗೌರವದಿಂದ ನಡೆದುಕೊಳ್ಳುವುದಿಲ್ಲ ಎನ್ನುವ ಕಾರಣಕ್ಕಾಗಿ 'ಫೋಟೊ ತೆಗೆಯುವುದೇ ಬೇಡ' ಎಂದು ಸೂಚನೆ ನೀಡಿದ್ದಾನೆ. ಕ್ಯಾಮರಾ ಬಗ್ಗೆ ಅಪಾರ ಹುಚ್ಚು ಇರುವ ಮುಂತಕಾ ಉಸಿರು ಸೇರಿದಂತೆ ಏನನ್ನು ಬೇಕಾದರೂ ಬಿಟ್ಟುಬಿಡಲು ಸಿದ್ಧರಿದ್ದಾರೆ, ಫೋಟೊಗ್ರಫಿಯೊಂದನ್ನು ಹೊರತು ಪಡಿಸಿ.

# 09 ವಿಕ್ಷಿಪ್ತ, ವಿಭಿನ್ನ, ಅನನ್ಯ

ಗುಲಾಮ್ ಮುಂತಕಾ ಹಲವು ಕಾರಣಗಳಿಂದಾಗಿ ಅಪರೂಪದ ವ್ಯಕ್ತಿ. ಅವರ ವ್ಯಕ್ತಿತ್ವವೇ ವಿಶಿಷ್ಟ ಮತ್ತು ವಿಭಿನ್ನ. ಎಲ್ಲ ಕಲಾವಿದರ ಹಾಗೆ ಅವರೊಬ್ಬ ಮೂಡಿ. ತಮಗೆ ಮೂಡ್ ಬಂದಾಗ ಮಾತ್ರ ಮಾತನಾಡುವ, ಕೆಲಸ ಮಾಡುವ ಮುಂತಕಾ ಅವರು ಮೂಡ್ ಇಲ್ಲದ್ದಿದರೆ ಯಾರನ್ನೂ ಕೇರ್ ಮಾಡದ ವ್ಯಕ್ತಿ.

ಅವರು ಕೆಲಸ ಮಾಡುವ ರೀತಿ ಕೂಡ ವಿಚಿತ್ರ. ಪುಡಿ ರಾಜಕಾರಣಿಗಳೂ ಸೇರಿದಂತೆ ಬೀದರ್ ನಗರಕ್ಕೆ ಯಾರಾದರೂ ಗಣ್ಯರು ಬರುತ್ತಾರೆ ಎಂಬ ವಿಷಯ ಗಮನಕ್ಕೆ ಬಂದರೆ ಸಾಕು ಕ್ಯಾಮರಾ ಬ್ಯಾಗ್ ಹೆಗಲಿಗೆ ಹಾಕಿಕೊಂಡು ಸೈಕಲ್ ಮೇಲೆ ಸವಾರಿ ಹೊರಟು ಬಿಡುತ್ತಾರೆ. ಹತ್ತಾರು ಅಲ್ಲ, ನೂರಾರು ಫೋಟೊ ಕ್ಲಿಕ್ಕಿಸುತ್ತಾರೆ.

ಕ್ಲಿಕ್ಕಿಸಿದ ಅರ್ಧ ಗಂಟೆಯೊಳಗೇ ಪ್ರಿಂಟ್ ಹಾಕಿಸಿ ಫೋಟೋ ನೀಡುವ ಮುಂತಕಾ ಕೆಲವರಿಗೆ 15–20 ವರ್ಷಗಳಿಂದಲೂ ಫೋಟೊ ನೀಡದೆ ಸತಾಯಿಸುತ್ತಿರುವುದು ಉಂಟು. ಉದ್ದೇಶಪೂರ್ವಕವಾಗಿ ಕಿರಿಕಿರಿ ಮಾಡಬೇಕು ಎನ್ನುವ ಕಾರಣಕ್ಕಾಗಿ ಫೋಟೊ ನೀಡಲು ಹಿಂದೇಟು ಹಾಕುವುದಿಲ್ಲ. ಅದರ ಬದಲಿಗೆ 'ಆ ಮೇಲೆ ಮಾಡಿದರಾಯಿತು' ಎಂಬ ಅವರ ಮನೋಭಾವ ಮತ್ತೊಮ್ಮೆ ಆ ಕೆಲಸದ ಕಡೆಗೆ ಗಮನ ಹರಿಸದಂತೆ ಮಾಡಿ ಬಿಡುತ್ತದೆ. ಈಗ ಕೆಪಿಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಅವರ ರಾಜಕೀಯ ಜೀವನದ ಆರಂಭದ ದಿನಗಳ ಛಾಯಾಚಿತ್ರಗಳನ್ನು ಮುಂತಕಾ ಕ್ಲಿಕ್ಕಿಸಿದ್ದರು. ಅವುಗಳಲ್ಲಿ ಆಯ್ದ ಕೆಲವನ್ನು ಪ್ರಿಂಟ್ ಹಾಕಿಕೊಡುವಂತೆ ಖರ್ಗೆ ಅವರು ಕಳೆದ 20 ವರ್ಷಗಳಿಂದ ಕೇಳುತ್ತಲೇ ಬಂದಿದ್ದಾರೆ. ಸಮಾರಂಭದಲ್ಲಿ ಕ್ಯಾಮರಾದೊಂದಿಗೆ ಭೇಟಿಯಾದಾಗಲೆಲ್ಲ ಖರ್ಗೆ ಅವರದ್ದು ಒಂದೇ ಮಾತು 'ಎಲ್ರಿ ನನ್ನ ಫೋಟೊಗಳು? ಕೊಡಲೇ ಇಲ್ಲ' ಅದಕ್ಕೆ ಸಿದ್ಧ ಉತ್ತರ 'ಕೊಡುತ್ತೇನೆ ಸರ್, ಒಂದೆರಡು ದಿನಗಳಲ್ಲಿ' ಎಂಬ ಆಶ್ವಾಸನೆ. ರಾಜಕಾರಣಿಗಳಿಗೇ ಆಶ್ವಾಸನೆ ನೀಡುವ ವ್ಯಕ್ತಿ ಮುಂತಕಾ.

ಖರ್ಗೆ ಅವರ ಜೊತೆಗೆ ಫೋಟೋ ಕೇಳುವ ಮತ್ತು ನೀಡುವುದಾಗಿ ತಿಳಿಸುವ ಪ್ರಶ್ನೋತ್ತರಗಳ ಮುಖಾಮುಖಿ ಹತ್ತಾರು ಬಾರಿ ನಡೆದಿದೆ. ಇದು ಕೇವಲ ಖರ್ಗೆ ಅವರೊಬ್ಬರ ಅನುಭವ ಅಲ್ಲ. ಮುಂತಕಾ ಹತ್ತಿರ ಫೋಟೊ ತೆಗೆಸಿಕೊಂಡಿರುವ ಅಥವಾ ಮುಂತಕಾ ಫೋಟೊ ತೆಗೆದಿರುವ ನೂರಾರು ವ್ಯಕ್ತಿಗಳು ಸಿಕ್ಕಾಗಲೆಲ್ಲ 'ಫೋಟೊ ಕೊಡ್ರಿ'

ಎಂದು ಕೇಳುತ್ತಲೇ ಇರುತ್ತಾರೆ. ಅದಕ್ಕೆ ನಕಾರಾತ್ಮಕ ಉತ್ತರ ನೀಡುವುದೇ ಇಲ್ಲ. ಕೇಳಿ ಕೇಳಿ ಬೇಸರವಾಗಿ ಕೇಳುವುದನ್ನೇ ಬಿಟ್ಟವರ ಸಂಖ್ಯೆ ನೂರಾರು ಅಲ್ಲ, ಸಾವಿರಕ್ಕೂ ಹೆಚ್ಚಿರಬಹುದು.

ಹಣಕ್ಕಾಗಿ ಫೋಟೋ ತೆಗೆಯುವವರಲ್ಲ ಮುಂತಕಾ. ಎಷ್ಟೋ ಜನರಿಗೆ ಹಣ ಕೇಳದೆಯೂ ಫೋಟೊ ನೀಡಿರುವುದು ಉಂಟು. ಹಾಗಂತ ಬೇಕಾ ಬಿಟ್ಟಿಯಾಗಿ ಫೋಟೊ ಹಂಚುತ್ತಾರ ಅಂತಲೂ ಅರ್ಥ ಅಲ್ಲ. ಹಣ ನೀಡದ ಗಣ್ಯರ ಬಗ್ಗೆ ಕೆಲವೊಮ್ಮೆ ಅಸಹನೆ ಕೂಡ ವ್ಯಕ್ತಪಡಿಸುವುದುಂಟು. ಅದು ಕೂಡ ಸಾವಿರಾರು ರೂಪಾಯಿ ನಿರೀಕ್ಷೆ ಇಟ್ಟುಕೊಂಡಲ್ಲ. ಕೇವಲ ನೂರಾರು ರೂಪಾಯಿಗಳಿಗಾಗಿ. ಸಚಿವರು, ಅಧಿಕಾರಿಗಳ ನೂರಾರು ಚಿತ್ರ ಕ್ಲಿಕ್ಕಿಸಿ ಅವರಿಗೆ ಫೋಟೊಗಳನ್ನು ಉಚಿತವಾಗಿ ನೀಡುತ್ತಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ.

ಆರ್ಡರ್ ತೆಗೆದುಕೊಂಡು ಸಮಯಕ್ಕೆ ಸರಿಯಾಗಿ ಹೋಗಿ ಫೋಟೊ ತೆಗೆಯುವ ಜಾಯಮಾನ ಅವರದಲ್ಲ. ಹೀಗಾಗಿ ಅವರಿಂದ ಖಚಿತವಾಗಿ ಫೋಟೊ ಸಿಕ್ಕೇ ಸಿಗುತ್ತವೆ ಎಂಬ ಭರವಸೆ ತೋರಿಸುವ ಜನ ಬಹಳ ಕಡಿಮೆ. ಅತ್ಯುತ್ತಮ ನೆರಳು ಬೆಳಕಿನ ಸಂಯೋಜನೆಯಲ್ಲಿ ಫೋಟೊ ಕ್ಲಿಕ್ಕಿಸಿ ಜೀವಿತದ ಅವಧಿಯ ಅತ್ಯುತ್ತಮ ಚಿತ್ರ ಸೆರೆ ಹಿಡಿಯುತ್ತಾರೆ. ಫೋಟೋ ತೆಗೆಯುವುದು ಅಥವಾ ಬಿಡುವುದು ಅವರ ಮನಸ್ಸಿಗೆ ಬಿಟ್ಟ ವಿಷಯ. ಎಷ್ಟೇ ಅದ್ಭುತ ಫೋಟೊ ಇದ್ದರೆ ಏನು ಉಪಯೋಗ? ಅದು ತೆಗೆಸಿಕೊಂಡ ವ್ಯಕ್ತಿಗೆ ನೋಡಲು ಕೂಡ ಸಿಗದೇ ಇದ್ದರೆ.

ನಗರದಲ್ಲಿ ನಡೆಯುವ ಸಣ್ಣ ಪುಟ್ಟ ರಾಜಕೀಯ ಸಮಾರಂಭಗಳಲ್ಲಿ ಕ್ಯಾಮರಾ ಬೆನ್ನಿಗೆ ಹಾಕಿಕೊಂಡು ಹರಯದ ಹುಡುಗರಂತೆ ಪುಟುಪುಟು ಓಡಾಡಿ ಫೋಟೊ ತೆಗೆಯುತ್ತಾರೆ. ಮುಂತಕಾ ಆ ಫೋಟೋಗಳನ್ನು ಯಾಕೆ ತೆಗೆಯುತ್ತಾರೆ? ಮತ್ತು ಅವುಗಳನ್ನು ಯಾರಿಗೆ ನೀಡುತ್ತಾರೆ? ಎಂಬುದು ನಿಗೂಢ ಸಂಗತಿ. ಕೆಲವೊಮ್ಮೆ ಪತ್ರಿಕೆಗಳಿಗೆ ಉಚಿತವಾಗಿ ನೀಡುವ ಮುಂತಕಾ ಕೆಲವೊಮ್ಮೆ 'ನಾನೇನು ಪೇಪರ್‌ನಲ್ಲಿ ಪ್ರಿಂಟಾಗಲಿ ಎಂದು ಕ್ಲಿಕ್ಕಿಸಿದ್ದೇನೆಯೇ? ನನ್ನ ಹವ್ಯಾಸಕ್ಕಾಗಿ ತೆಗೆದ ಚಿತ್ರಗಳಿವು' ಎಂದು ವಾದಿಸುವುದೂ ಉಂಟು. ಒಟ್ಟಾರೆಯಾಗಿ ಇದು ಹೀಗೇ ಎಂದು ಚೌಕಟ್ಟು ಹಾಕಿ ನಿರ್ಧಾರಕ್ಕೆ ಬರಲು ಕಷ್ಟವಾಗುವ ವ್ಯಕ್ತಿತ್ವ ಮುಂತಕಾ ಅವರದ್ದು.

ಕ್ಯಾಮರಾ ಮತ್ತು ಲೆನ್ಸ್‌ಗಳ ಮೇಲೆ ಸಾವಿರಾರು ರೂಪಾಯಿ ಖರ್ಚು ಮಾಡಿರುವ ಮುಂತಕಾ ಬಡವರೇನಲ್ಲ. ಆದರೆ, ಅವರದು ಸರಳ ಜೀವನ. ನವಾಬರ ಕಾಲದ ದೊಡ್ಡ ಮನೆ ಇದೆ. ಮನೆಯ ಬಹುತೇಕ ಕೋಣೆಗಳನ್ನು ಬಾಡಿಗೆಗೆ ನೀಡಿದ್ದಾರೆ. ಕೇವಲ ಮೂರು ಕೋಣೆಗಳನ್ನು ತಮಗಾಗಿ ಉಳಿಸಿಕೊಂಡಿದ್ದಾರೆ. ಅದರಲ್ಲಿ ಒಂದು ಕೋಣೆಯ ತುಂಬಾ ಹಳೆಯ ನೆಗೆಟಿವ್ಸ್ ಮತ್ತು ಫೋಟೊಗಳಿರುವ ಬಾಕ್ಸ್‌ಗಳಿವೆ. ಅವೆಲ್ಲ ಬಹುತೇಕ ಹರಡಿ ಅಲ್ಲಲ್ಲಿ ಬಿದ್ದಿರುತ್ತವೆ. ಕೋಣೆಯಲ್ಲಿ ಕಾಲಿಡಲೂ ಸಾಧ್ಯವಿರದಷ್ಟು ಪ್ರಮಾಣದ ನೆಗೆಟಿವ್

ಮತ್ತು ಫೋಟೊಗಳು ತುಂಬಿಕೊಂಡಿವೆ. ಕೋಣೆಯಲ್ಲಿರುವ ಒಂದೆರಡು ಬೀರುವಿನಲ್ಲಿಯೂ ರಾಶಿ ರಾಶಿ ನೆಗೆಟಿವ್‌ಗಳಿವೆ. ಧೂಳು ಮತ್ತು ಕೊಳೆಯ ನಡುವೆ ಬಿದ್ದಿರುವ ನೆಗೆಟಿವ್‌ಗಳನ್ನು ರಕ್ಷಿಸುವ ಮನಸ್ಸಿದ್ದರೂ ಇಟ್ಟುಕೊಳ್ಳುವುದು ಸಾಧ್ಯವಾಗಿಲ್ಲ. ಮಳೆಗಾಲದಲ್ಲಿ ಮನೆ ಸೋರಿ ಕೆಲ ನೆಗೆಟಿವ್‌ಗಳು ಹಾಳಾಗಿದ್ದೂ ಉಂಟು. 'ಎಲ್ಲ ಮಹತ್ವದ ನೆಗೆಟಿವ್‌ಗಳು. ಆದರೆ, ಸರಿಯಾಗಿ ಇಟ್ಟುಕೊಳ್ಳಲಿಕ್ಕೆ ಆಗಿಲ್ಲ. ಕೆಲವು ಹಾಳಾಗಿ ಹೋಗಿವೆ. ಎಸೆಯಲು ಮನಸ್ಸಿಲ್ಲ. ಹೋಗಲಿ ಬಿಡಿ ಮತ್ತೆ ಸಿಗುತ್ತವೆ. ಅದಕ್ಕಿಂತ ಚೆನ್ನಾಗಿರುವ ಫೋಟೊ ತೆಗೆಯಬಹುದು' ಎಂದು ಸಮಜಾಯಿಷಿ ಹೇಳಿಕೊಳ್ಳುತ್ತಾರೆ.

ಮತ್ತೊಂದು ಕೋಣೆಯಲ್ಲಿ ಕ್ಯಾಮರಾಗಳು ಮತ್ತು ಸ್ಟ್ಯಾಂಡ್‌ಗಳು, ಪ್ರಿಂಟರ್, ಕೆಮಿಕಲ್ ಬಾಟಲಿಗಳು, ಎನ್‌ಲಾರ್ಜರ್‌ಗಳಂತಹ ಫೋಟೊಗ್ರಫಿ ಸಂಬಂಧಿತ ವಸ್ತುಗಳನ್ನು ಇಟ್ಟಿದ್ದಾರೆ. ನಿತ್ಯ ಬಳಕೆಯಿಲ್ಲದ ಕಾರಣ ಕೋಣೆಯ ತುಂಬೆಲ್ಲ ರಜ ತುಂಬಿಕೊಂಡಿದೆ. 'ಹಳೆಯ ಮನೆಯಾದ್ದರಿಂದ ಕೊಳೆ, ಧೂಳು ಜಾಸ್ತಿ' ಎಂದು ಗೊಣಗಿಕೊಳ್ಳುತ್ತಾರೆ.

ಇನ್ನೊಂದು ಅವರ ವಾಸದ ಕೋಣೆ. ಹತ್ತು ಅಡಿ ಅಗಲ ಮತ್ತು ಉದ್ದ ಇರುವ ಕೋಣೆಯಲ್ಲಿ ದಿವಾನ ಅಥವಾ ಮಂಚ ಎಂದು ಕರೆಯಬಹುದಾದ ಎರಡು ಪುಟ್ಟ ಕಾಟ್ ಹಾಕಿಕೊಂಡ್ಡಿದಾರೆ. ಒಂದು ಕಾಟ್ ಅವರ ನಿದ್ದೆ ಮತ್ತು ವಿಶ್ರಾಂತಿಗೆ ಬಳಕೆಯಾದರೆ ಮತ್ತೊಂದರ ಮೇಲೆ ಬಿಚ್ಚಿಟ್ಟ ಕ್ಯಾಮರಾಗಳು, ಕ್ಯಾಮರಾದ ಸ್ಕ್ರೂಗಳು, ಅವುಗಳನ್ನು ಬಿಚ್ಚುವುದಕ್ಕೆ ಬಳಸುವ ವಿವಿಧ ಗಾತ್ರದ ಸ್ಕ್ರೂ ಡ್ರೈವರ್‌ಗಳು ಬಿದ್ದಿರುತ್ತವೆ. ಅಲ್ಲಿಯೇ ಕಾಟ್‌ನ ಅಡಿಯಲ್ಲಿ ಬ್ರೆಡ್‌ನ ತುಂಡುಗಳು ಕೂಡ ಇರುತ್ತವೆ.

ಒಬ್ಬಂಟಿಯಾಗಿರುವ ಕಾರಣಕ್ಕಾಗಿ ಮನೆ ಕೊಳೆಯಾಗಿರುತ್ತದೆ ಎಂದು ಯಾರೂ ಮನ ಕಡೆಗೆ ಬರದೇ ಇರುವಂತೆ ನೋಡಿಕೊಳ್ಳುತ್ತಾರೆ. ಮನೆಗೆ ಯಾರೇ ಬಂದರೂ ಅರೆ ತೆರೆದ ಬಾಗಿಲಿನಲ್ಲಿ ಇಣುಕಿ ಏನು, ಎತ್ತ ವಿಚಾರಿಸಿ ಸಾಗಹಾಕುತ್ತಾರೆ. ಮನೆಯೊಳಕ್ಕೆ ಯಾರನ್ನೂ ಬಿಟ್ಟುಕೊಳ್ಳುವುದಿಲ್ಲ. ಅಪರೂಪಕ್ಕೆ ಒಮ್ಮೆ ಒಂದಿಬ್ಬರನ್ನು ಮನೆಯೊಳಕ್ಕೆ ಕರೆದದ್ದೂ ಉಂಟು.

■

## 10 ಜೇನು-ಶಿಕಾರಿ ಪ್ರಿಯ

ಜೋಳದ ಹೂವಿನ ಸಿಹಿ ಜೇನು, ಬೇವಿನ ಹೂವಿನ ಕಹಿ ಜೇನು, ಹುಣಸಿ ಹೂವಿನ ಒಗರು ಜೇನು, ಮಾವಿನ ಹೂವಿನ ಕಂಪು ಇರುವ ಜೇನು, ಸೂರ್ಯಪಾನ, ಮಲ್ಲಿಗೆ, ಕಾಡು ಪುಷ್ಪಗಳ ಜೇನುಗಳ ರುಚಿಯನ್ನು ಗುರುತಿಸುವ ಮುಂತಕಾಗಿರುವ ಜೇನುಜ್ಞಾನ ಅಪರಿಮಿತ. ಅವರೊಬ್ಬ ಜೇನು ಸಂಗ್ರಹಕಾರ. ನೂರಾರು ಬಾಟಲ್‌ಗಳಲ್ಲಿ ಅಡಗಿರುವ 'ಜೇನುತುಪ್ಪ'ದ ಬಗೆ ಬಗೆಯ ಸವಿ ಅವರ ಸಂಗ್ರಹದಲ್ಲಿದೆ. 25 ವರ್ಷಕ್ಕೂ ಹಳೆಯದಾದ ಜೇನಿನಿಂದ ಹಿಡಿದು ಇತ್ತೀಚಿನ ದಿನಗಳ ವರೆಗಿನ ಜೇನು ಕೂಡ ಅವರ ಮನೆಯಲ್ಲಿದೆ. ಮುಂತಕಾ ಅವರ ಮನೆಯ ಅರ್ಥಾತ್ ಕೋಣೆಯಲ್ಲಿ ಸಾಲು ಸಾಲು ಜೇನುತುಪ್ಪದ ಬಾಟಲಿಗಳು ನೋಡಲು ಸಿಗುತ್ತವೆ. ಸುಮಾರು 200ಕ್ಕೂ ಹೆಚ್ಚು ಬಾಟಲಿಗಳಲ್ಲಿ ಇರುವ ಜೇನು ವೈವಿಧ್ಯಮಯ ರುಚಿಯದಾಗಿದೆ. ಅವರ ಜೇನು ಸಂಗ್ರಹ ಪ್ರತಿ ವರ್ಷದ ಸೀಸನ್‌ನಲ್ಲಿ ಅಪ್‌ಡೇಟ್ ಆಗುತ್ತಿರುತ್ತದೆ.

'ಜೇನು ಹಳೆಯದಾದಷ್ಟೂ ಅದರ ರುಚಿ ಮಧುರವಾಗುತ್ತದೆ' ಎನ್ನುವ ಮುಂತಾಕ್ ಅವರು 'ಮೊದಲೆರಡು ವರ್ಷ ಜೇನು ಬರಿ ಸಿಹಿಯಾಗಿರುತ್ತದೆ. ಹಳೆಯದಾಗುತ್ತ ಹೋದಂತೆ ಜೇನುಹುಳು ಸಂಗ್ರಹಿಸಿದ ಹೂವಿನ ಮಾಧುರ್ಯದ ಸೊಗಡು ಜೇನಿನಲ್ಲಿ ಕಾಣಿಸುತ್ತದೆ' ಎಂದು ವಿವರಿಸುತ್ತಾರೆ.

ಮಾತನಾಡುತ್ತ ಕುಳಿತರೆ ಗಂಟೆಗಟ್ಟಲೆ ಜೇನಿನ ಅದ್ಭುತ ಲೋಕವನ್ನೇ ತೆರೆದಿಡುತ್ತ ಹೋಗುವ ಮುಂತಕಾ ಅವರಿಗಿರುವ ಜೇನು ಕುರಿತಾದ ತಿಳುವಳಿಕೆ ನಿತ್ಯದ ಬಳಕೆ ಮತ್ತು ಅನುಭವದಿಂದ ಬಂದದ್ದು. ವಿವಿಧ ಜಾತಿಯ ಜೇನುತುಪ್ಪದ ಪೈಕಿ ಕೇಸರಿ ಹೂವಿನಿಂದ ಸಂಗ್ರಹಿಸಿದ ಜೇನು ಅತ್ಯಂತ ರುಚಿಕರ ಎಂದು ಬಾಯಿ ಚಪ್ಪರಿಸುವ ಹಾಗೆ ಮುಂತಕಾ ಹೇಳುತ್ತಾರೆ.

'ನವೆಂಬರ್- ಡಿಸೆಂಬರ್‌ನಲ್ಲಿ ಜೋಳದ ಹೂವಿನ ಜೇನು ಬರುತ್ತದೆ. ಜನವರಿಯಲ್ಲಿ ಮಾವಿನ ಹೂವಿನ ಜೇನು' ಮಾರುಕಟ್ಟೆಗೆ ಬರುತ್ತದೆ ಎಂದು ಖಚಿತವಾಗಿ ಹೇಳುವ ಮುಂತಕಾ ಅವರಿಗೆ ಯಾವ ಹೂವಿನ ಜೇನು ಎಂದು ರುಚಿಯ ಮೂಲಕವೇ ಗೊತ್ತಾಗುತ್ತದೆ. 'ನನ್ನ ಹತ್ತಿರ 25ವರ್ಷಕ್ಕೂ ಹಳೆಯ ಜೇನು ಸಂಗ್ರಹ ಇದೆ. ಖರಾಬ್ ಆಗದಂತೆ ರಕ್ಷಿಸಿಕೊಂಡು ಬಂದಿದ್ದೇನೆ' ಎನ್ನುವ ಅವರು '2-3ವರ್ಷದ ವರೆಗೆ ಒಂದೇ ರುಚಿ

ಇರುತ್ತದೆ. ನಂತರ ಹೂವಿನ ಪರಿಮಳ ಮತ್ತು ಅದರ ಜಾತಿ ಆಧರಿಸಿ ಜೇನಿನ ಕಂಪು ಮತ್ತು ರುಚಿ ಬದಲಾಗುತ್ತದೆ. 10 ವರ್ಷದ ನಂತರ ಟೇಸ್ಟ್ ಚೇಂಜ್ ಆಗುತ್ತದೆ' ಎನ್ನುತ್ತಾರೆ.

ಜೇನನ್ನು ಔಷಧಿಯಾಗಿ ಹೇಗೆ ಬಳಸಬೇಕು ಎನ್ನುವ ಬಗ್ಗೆಯೂ ಮುಂತಕಾ ಅವರಿಗೆ ಅರಿವಿದೆ. ಅವರಿಗೊಮ್ಮೆ ಭೇದಿ ಆರಂಭವಾಯಿತು. ಡಾಕ್ಟರ್ ಹತ್ತಿರ ತೋರಿಸಿದರು ಕೂಡ ಏನೂ ಪರಿಣಾಮ ಆಗಲಿಲ್ಲ. ಆಗ ನೆರವಿಗೆ ಬಂದದ್ದು ಜೇನು. ಜೇನು ಬಳಸುವ ಮೂಲಕ ಭೇದಿ ಕಡಿಮೆಯಾಯಿತು. ಅದಲ್ಲದೇ ಚರ್ಮಕ್ಕೆ ಸಂಬಂಧಿಸಿದಂತೆಯೂ ಸಮಸ್ಯೆ ಉಂಟಾದಾಗಲೆಲ್ಲ ಜೇನು ಬಳಸಬಹುದು ಎಂಬುದು ಅವರ ಸಿದ್ಧಾಂತ.

ಅವಿವಾಹಿತರಾಗಿ ಒಂಟಿ ಜೀವನ ನಡೆಸುತ್ತಿರುವ ಮುಂತಕಾ ಅವರ ನಿತ್ಯ ಜೀವನದ ಮುಖ್ಯ ಆಹಾರ ಬ್ರೆಡ್ ಮತ್ತು ಜೇನು. ಕ್ಯಾಮರಾಗಳನ್ನು ಬಿಚ್ಚಿ ಅವುಗಳ ಜೊತೆ 'ಮೌನ ಅನುಸಂಧಾನ' ನಡೆಸುವ ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿಗಳಲ್ಲಿ ಜೇನು ಮತ್ತು ಒಂದೆರಡು ಬ್ರೆಡ್‌ನ ತುಣುಕುಗಳೇ ಆಹಾರ. ಬಹುತೇಕ ದಿನಗಳಲ್ಲಿ ಜೇನು ಮತ್ತು ಬ್ರೆಡ್ ಅವರ ನಿತ್ಯದ ಆಹಾರ. ಅಪರೂಪಕ್ಕೆ ಎಂಬಂತೆ ಊಟದ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಬ್ರೆಡ್ ಮತ್ತು ಜೇನು ತಿನ್ನುವುದನ್ನೇ ರೂಢಿಯಾಗಿಸಿಕೊಂಡಿರುವ ಮುಂತಕಾ ಅವರಿಗೆ ಊಟದ ರುಚಿಯೇ ಮರೆತು ಹೋಗಿದೆ. ಅದೇ ಕಾರಣಕ್ಕಾಗಿ ಅವರಿಗೆ ಸಾಧಾರಣ ಊಟವೂ ಭೂರಿ ಭೋಜನದಂತೆ ಕಾಣುತ್ತದೆ.

ಅವರ ಜೇನಿನ 'ಶಿಕಾರಿ' ಆರಂಭವಾದದ್ದು ಕೂಡ ಹೈದರಾಬಾದ್‌ನಲ್ಲಿ. ನಿಜಾಮರ ಮಂತ್ರಿಯೊಬ್ಬರ ಹತ್ತಿರ ಕೆಲಸ ಮಾಡುತ್ತಿದ್ದ ಮುಂತಕಾ ಅವರ ಚಿಕ್ಕಪ್ಪನಿಗೂ ಜೇನು ಕಂಡರೆ ತುಂಬ ಇಷ್ಟ. ಅರಸರಿಗೆ ಇಷ್ಟವಾಗುವಂತಹ ಜೇನನ್ನು ಕಾಡಿನಿಂದ ತರಿಸುವ ವ್ಯವಸ್ಥೆ ಮಾಡುತ್ತಿದ್ದ ಅವರ ಚಿಕ್ಕಪ್ಪ ಸ್ವತಃ ಕಾಡಿಗೆ ಹೋಗಿ ಜೇನು ತರುತ್ತಿದ್ದರು ಕೂಡ. ಬಾಲ್ಯದ ದಿನಗಳನ್ನು ಹೈದರಾಬಾದ್‌ನಲ್ಲಿಯೇ ಕಳೆದ ಮುಂತಕಾ ಅವರು ಚಿಕ್ಕಪ್ಪನಿಗಿದ್ದ ಜೇನು ಕುರಿತ ತಿಳುವಳಿಕೆ ಇವರಲ್ಲಿಯೂ ಸೇರಿತು. 'ನವಾಬರಿಗೆ ಶಿಕಾರ್‌ನ ಶೋಕಿ ಇರುತ್ತಿತ್ತು. ಜಂಗಲ್‌ನಲ್ಲಿ ಇರುವುದನ್ನು ಅವರು ಪಸಂದ ಮಾಡುತ್ತಿದ್ದರು. ಶಿಕಾರ್‌ಗೆ ಹೋದಾಗ ಅಲ್ಲಿಯೇ ಜೇನು ಬಿಡಿಸಿ ತಿನ್ನುತ್ತಿದ್ದರು. ಉತ್ತಮ ಜೇನು ತಿನ್ನುವ ಶೋಕಿ ಆಗನಿಂದಲೇ ಆರಂಭವಾಯಿತು' ಎಂದು ಅವರು ನೆನಪಿಸಿಕೊಳ್ಳುತ್ತಾರೆ. ಮೊದ ಮೊದಲು ಜೇನು ಉಚಿತವಾಗಿ ತಂದು ಕೊಡುತ್ತಿದ್ದರು. ನಂತರ ಹಣ ಕೊಟ್ಟು ಖರೀದಿಸುವುದು ಆರಂಭವಾಯಿತು.

'ಜೇನು ಮಾರುವವರು ಮೋಸ ಮಾಡುವುದರಲ್ಲಿ ನಿಸ್ಸೀಮರು. ಬೆಲ್ಲದ ನೀರನ್ನು ಗೊತ್ತಾಗದ ಹಾಗೆ ಜೇನು ಎಂದು ಮಾರುತ್ತಾರೆ. ಅವರ ಹತ್ತಿರ ಜೇನಿನ ರುಚಿ ಗೊತ್ತಿರುವವರು ಕೂಡ ಮೋಸ ಹೋಗುತ್ತಾರೆ' ಎನ್ನುವ ಮುಂತಕಾ ಅವರು 'ಸತತ ಪ್ರಯತ್ನದಿಂದ ಜೇನಿನ ರುಚಿ ಗೊತ್ತು ಮಾಡಿಕೊಳ್ಳಬಹುದು' ಎನ್ನುತ್ತಾರೆ.

ಹಾಗೆಯೇ ಒಳ್ಳೆಯ ಜೇನು ಪತ್ತೆ ಹಚ್ಚುವುದಕ್ಕೆ ಹಲವು ರೀತಿಗಳಿವೆ. ಚಮಚೆಯಲ್ಲಿ ಒಂದು ತೊಟ್ಟು ಜೇನು ತೆಗೆದುಕೊಂಡು ಬೆಂಕಿಗೆ ಹಿಡಿಯಬೇಕು. ಸ್ವಲ್ಪ ಹೊತ್ತು ಕಾಯಿಸಬೇಕು. ಸಕ್ಕರೆಯಂತಹ ಹರಳುಗಳು ಬಂದರೆ ಅದು ಜೇನು ಅಲ್ಲ ಎಂದೇ ಅರ್ಥ. ಇದಲ್ಲದೇ ಹಲವು ವಿಧಾನಗಳಿವೆ ಅದನ್ನು ವಿವರಿಸುತ್ತ ಕುಳಿತರೆ ಕಾಲವೇ ಸ್ಥಗಿತವಾಗಬಹುದು. ಹಾಗೆಯೇ ಅವರು ತಾವು ಸಂಗ್ರಹಿಸಿದ ಜೇನುತುಪ್ಪವನ್ನು ಕೇವಲ ತಾವು ಮಾತ್ರ ಬಳಸುವುದಿಲ್ಲ. ಬೀದರ್‌ನಲ್ಲಿ ಸಂಗ್ರಹಿಸಿದ ಜೇನನ್ನು ಅವರು ಹೈದರಾಬಾದ್, ಮುಂಬೈನಲ್ಲಿ ಇರುವ ಸ್ನೇಹಿತರು ಮತ್ತು ಬಂಧುಗಳಿಗೆ ಒಯ್ದು ಕೊಡುತ್ತಾರೆ. ಜೇನಿನಂತಹ ಸಿಹಿ ಹಂಚುವ ಮುಂತಕಾ ಅಷ್ಟೇ ಸವಿಯಾದ ಮುಗುಳ್ನಗೆಯ ಮೂಲಕ ಪ್ರೀತಿಯನ್ನೂ ಹಂಚುತ್ತಾರೆ.

**ಶಿಕಾರಿ ಆಸಕ್ತಿಯೂ ಇದೆ:**

ಮುಂತಕಾ ಆಸಕ್ತಿ ಕೇವಲ ಕ್ಯಾಮರಾದಿಂದ ಶೂಟ್ ಮಾಡುವುದು ಮಾತ್ರವಲ್ಲ. ಅವರಿಗೆ ಗನ್‌ನಿಂದ ಶೂಟ್ ಮಾಡುವುದರಲ್ಲಿಯೂ ಆಸಕ್ತಿ ಎಂದರೆ ಅಚ್ಚರಿಪಡಬೇಕಿಲ್ಲ. ಅವರಿಗೆ ಬೇಟೆಯಲ್ಲೂ ಆಸಕ್ತಿ. ಈಗ ಬೇಟೆಯಾಡಲು ಕಾಡೂ ಉಳಿದಿಲ್ಲ, ಪ್ರಾಣಿಗಳಂತು ಇಲ್ಲವೇ ಇಲ್ಲ. ಇದೆಲ್ಲ 4–5 ದಶಕಗಳ ಹಿಂದಿನ ಮಾತು. ಬೀದರ್ ಸಮೀಪದ ಖಾನಾಪುರ, ಶಹಾಪುರಗಳಲ್ಲಿ ಕಾಡು ಇತ್ತು. ಅಲ್ಲಿ ಜಿಂಕೆ ಮತ್ತು ಕೃಷ್ಣಮೃಗಗಳು ವಿಪರೀತ ಇದ್ದವು. ಕೈಯಲ್ಲಿ ಗನ್ ಹಿಡಿದುಕೊಂಡು ಅರಣ್ಯಕ್ಕೆ ಬೇಟೆ ಆಡಲು ಹೋಗುವ ಹವ್ಯಾಸ ಆಗ ವ್ಯಾಪಕವಾಗಿತ್ತು. ಜಿಂಕೆಗಳ ಸಂಖ್ಯೆ ಬಹಳಷ್ಟು ಇತ್ತು. ರಸ್ತೆಯಲ್ಲಿ ಓಡಾಡುವಾಗಲೆಲ್ಲ, ನೂರಾರು ಜಿಂಕೆಗಳು ಕಾಣಿಸುತ್ತಿದ್ದವು. ಆಗ ಬೇಟೆ ಆಡುವುದು ರಂಜನೆ, ವಿಹಾರ ಆಗಿತ್ತು.

ನಿಜಾಂರ ಆಡಳಿತದ ಅವಧಿಯಲ್ಲಿ ಮುಖ್ಯ ಸಚಿವರ ಹತ್ತಿರ ಕೆಲಸ ಮಾಡುತ್ತಿದ್ದ ಮುಂತಕಾ ಅವರ ಚಿಕ್ಕಪ್ಪ ಶೈನುಲ್ಲಾದ್ದೀನ್ ಅವರಿಗೆ ಆಗಿನ ಸರ್ಕಾರದಿಂದ ಸಂಬಳವೇನೋ ಬರುತ್ತಿತ್ತು. ಕೆಲಸ ಮಾತ್ರ ಬೇಟೆಗೆ ಗಣ್ಯರನ್ನು ಕರೆದುಕೊಂಡು ಹೋಗುವುದು ಶಿಕಾರಿ ಮಾಡುವುದು. ಜೇನು ತರುವುದೇ ಮುಖ್ಯ ಕೆಲಸ. ಅವರು ತಾವು ಕೆಲಸ ಮಾಡುತ್ತಿದ್ದ ಸಚಿವರ ಮನೆಗೆ ಹೋದದ್ದೇ ಕಡಿಮೆ. ಅದಕ್ಕಿಂತ ಹೆಚ್ಚಾಗಿ ಕಾಡಿಗೆ ಹೋಗುತ್ತಿದ್ದರು. ನಿಜಾಂ ಅವಧಿಯಲ್ಲಿ ಅವರು ದೊಡ್ಡ ಶಿಕಾರಿ ಆಗಿದ್ದರು. ಆ ದಿನಗಳಲ್ಲಿಯೇ ನರಭಕ್ಷಕ ಹುಲಿಯೊಂದನ್ನು 30 ಅಡಿ ದೂರದಿಂದ ಶೂಟ್ ಮಾಡಿದ್ದರು. ಮುಂತಕಾ 15 ವರ್ಷದವರಿದ್ದಾಗ ಅವರು ತಮ್ಮ ಚಿಕ್ಕಪ್ಪನ ಜೊತೆ ಸಮನಾಗಿ ನಡೆಯುವುದು ಸಾಧ್ಯವಿರಲಿಲ್ಲ. ಓಡಬೇಕಾಗುತ್ತಿತ್ತು.

ಆಗಿನ ದಿನಗಳಲ್ಲಿ ಜಹಿರಾಬಾದ್‌ನಿಂದ ಕಟ್ಟಿಗೆ ತರುವ ಬಂಡಿಗಳು ಬರುತ್ತಿದ್ದವು. ಹುಲಿ ಮತ್ತು ಚಿರತೆಯ ಕಾಟದ ಭಯದಿಂದಾಗಿ ರಾತ್ರಿಯ ವೇಳೆ ಗಾಡಿಗಳನ್ನು ಬಿಡುತ್ತಿರಲಿಲ್ಲ. ಆಗ 'ಚಿರತೆಯೊಂದು ಮಕ್ಕಳನ್ನು ಎತ್ತಿಕೊಂಡು ಹೋಗುತ್ತಿದೆ' ಎಂಬ ಬಾತ್ಮಿ ಬಂತು.

ಮುಂತಕಾ ಮತ್ತು ಅವರ ಚಿಕ್ಕಪ್ಪ ಎತ್ತಿನ ಗಾಡಿಯಲ್ಲಿ ಜಹಿರಾಬಾದ್‌ಗೆ ಹೋದರು. ಕೈಯಲ್ಲಿ ಲೋಡೆಡ್ ಬಂದೂಕು ಇದ್ದದ್ದರಿಂದ ಭಯವೇನೂ ಇರಲಿಲ್ಲ. ರಾತ್ರಿಯೆಲ್ಲ ನಿದ್ದೆ ಮಾಡದೇ ಪಯಣಿಸಿದ್ದರಿಂದ ಜಹಿರಾಬಾದ್‌ನಲ್ಲಿ ವಿಶ್ರಾಂತಿ ಪಡೆದರು. ಅದಾದ ಮೇಲೆ ಸಂಜೆಯ ವೇಳೆ ರಾತ್ರಿ ಘಟನೆ ನಡೆದ ಸ್ಥಳದ ಪರಿಶೀಲನೆ ನಡೆಸಿ ಬರುತ್ತಿದ್ದರು. ರಾತ್ರಿ ವೇಳೆ ಕೆಳಗೆ ಕುರಿ ಕಟ್ಟಿ ಗಿಡ ಹತ್ತಿ ಕುಳಿತು ಕೊಳ್ಳುತ್ತಿದ್ದರು. 3–4 ಬಾರಿ ಹೀಗೆ ಕುಳಿತರೆ ಶಿಕಾರಿ ಸಿಕ್ಕಿತು ಎಂದೇ ಅರ್ಥ ಎಂದು ಅವರು ಹರೆಯದ ದಿನಗಳಲ್ಲಿ ಬೇಟೆಗೆ ಹೋದ ಅನುಭವಗಳನ್ನು ಮೆಲುಕು ಹಾಕುತ್ತಾರೆ.

ಚಿಕ್ಕಪ್ಪನಿಂದ ಬಳುವಳಿಯಾಗಿ ಬಂದ ಬೇಟೆಯ ಹುಚ್ಚು ನಂತರ ಕೂಡ ಮುಂದುವರೆಯಿತು. ಮುಂತಕಾ ಮನೆಯಿಂದ ನೂರು ಹೆಜ್ಜೆಗಳಷ್ಟು ದೂರ ಇರುವ ಬೀದರ್ ಕೋಟೆ ಆ ದಿನಗಳಲ್ಲಿ ಬಳಕೆ ಇಲ್ಲದೇ ಜಂಗಲ್ ಆಗಿತ್ತು. ಬಹಳಷ್ಟು ಗಿಡಮರಗಳು ಬೆಳೆದು ನಿಂತಿದ್ದವು. ಒಳಗಡೆ ಹೋಗುವುದಕ್ಕೆ ರಸ್ತೆಯೇ ಇರಲಿಲ್ಲ. ಕೋಟೆಯೊಳಗಿಂದ ಚಿರತೆಗಳು ಊರೊಳಗೆ ಬಂದು ನಾಯಿಗಳನ್ನು ಹಿಡಿದ ಉದಾಹರಣೆಗಳು ಸಾಕಷ್ಟಿದ್ದವು. ಈಗ ಜನ ನಾಯಿ ನೋಡಿದ ಹಾಗೆ ಆಗ ಚಿರತೆಗಳು ಕಾಣಿಸುತ್ತಿದ್ದವು. ಕೋಟೆಯ ಆವರಣದಲ್ಲಿ ಮುಂತಕಾ ಚಿರತೆಗೆ ಮುಖಾಮುಖಿ ಆದದ್ದಿದೆ. ಕೋಟೆಯ ಒಳಗೆ ಹೋಗದೇ ಕಂದಕದಿಂದ ಹೊರಗೆ ನಿಂತು ಚಿರತೆಯ ಫೋಟೊ ಕ್ಲಿಕ್ಕಿಸಿದ್ದಾರೆ.

ಭಾರತ ಕ್ರಿಕೆಟ್ ತಂಡದ ನಾಯಕನಾಗಿದ್ದ ಎಂ.ಎ.ಕೆ. ಪಟೌಡಿ ಮತ್ತು ಗೆಳೆಯರಿಗೆ ಬೇಟೆಯ ಹುಚ್ಚು. ಅದಕ್ಕಾಗಿ ಅವರು ಸ್ನೇಹಿತರೊಂದಿಗೆ ಹೈದರಾಬಾದ್‌ಗೆ ಬರುತ್ತಿದ್ದರು. ಅಲ್ಲಿಂದ ಜೀಪ್‌ನಲ್ಲಿ ಗೆಳೆಯರ ತಂಡ ಶಿಕಾರಿಗಾಗಿ ಹೊರಡುತ್ತಿತ್ತು. ಹೀಗೆ ಗಣ್ಯ ಯುವಕರ ತಂಡ ಬಂದಾಗಲೆಲ್ಲ ಮುಂತಕಾ ಅವರ ಜೊತೆಗೆ ಹೋಗುತ್ತಿದ್ದರು. ಜೊತೆಯಲ್ಲಿ ಬಂದೂಕು ಮತ್ತು ಕ್ಯಾಮರಾ ಎರಡೂ ಇರುತ್ತಿದ್ದವು. ಯುವಕರು ಗನ್ ಹಿಡಿದು ಬೇಟೆಯಲ್ಲಿ ನಿರತರಾದರೆ ಮುಂತಕಾ ಕ್ಯಾಮರಾ ಮತ್ತು ಬಂದೂಕು ಬಳಸಿ ಶೂಟ್ ಮಾಡುತ್ತಿದ್ದರು. ಏನೂ ಸಿಗದಿದ್ದರೆ ಮೊಲಗಳಂತು ಊಟಕ್ಕೆ ಸಾಕಾಗುತ್ತಿದ್ದವು. ಪಟೌಡಿ ಜೊತೆ ಶಿಕಾರಿಗೆ ಹೋಗಿ ಅವರ ಫೋಟೊಗಳನ್ನು ದಾಖಲಿಸಿದ ಅನುಭವ ಮುಂತಕಾ ಅವರಿಗಿದೆ.

ಅದಾದ ಎರಡ್ಮೂರು ದಶಕಗಳ ನಂತರ ಕೃಷ್ಣಮೃಗಗಳ ಬೇಟೆಗೆ ಸಂಬಂಧಿಸಿದಂತೆ ಪಟೌಡಿ ಕ್ರಿಮಿನಲ್ ಮೊಕದ್ದಮೆ ಎದುರಿಸಿ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡರು. ಆಗ ಮುಂತಕಾ ಅವರಿಗೆ ನೆನಪಾದದ್ದು, ಅವರೊಂದಿಗೆ ಬೇಟೆ ಹೋದ ದಿನಗಳಲ್ಲಿ ಕ್ಲಿಕ್ಕಿಸಿದ ಚಿತ್ರ. ಅದರ ನೆಗೆಟಿವ್ ತೆಗೆದು ಪ್ರಿಂಟ್ ಹಾಕಿ ಪತ್ರಿಕೆಗಳಿಗೆ ನೀಡಿದರು. ಹೀಗೆ ಹಲವು ಆಸಕ್ತಿಗಳನ್ನು ಬೆಳೆಸಿಕೊಂಡಿರುವ ಮುಂತಕಾ ಕುತೂಹಲಕಾರಿ ವ್ಯಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ.

## 11 ನೆಲದ ಮೇಲಿನ ಪ್ರೀತಿ- ಮೋಹ

ಜಮೀನು ಮತ್ತು ಪ್ಲಾಟ್‌ಗಳಿಗೆ ಸಂಬಂಧಿಸಿದಂತೆ ಮುಂತಕಾ ಅವರಿಗೆ ವಿಶೇಷ ಆಸಕ್ತಿ. ಅವರು ಈ ಆಸಕ್ತಿಯ ಫಲವಾಗಿ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡದ್ದೂ ಉಂಟು. ಮೊದಲಿನಿಂದಲೂ ಬೀದರ್‌ನಲ್ಲಿ ಭೂಮಿ ವಶಕ್ಕೆ ತೆಗೆದುಕೊಂಡು ಮಾರುವ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಸಿದ್ಧಪಡಿಸುವ ಬೃಹತ್ ಜಾಲವೇ ಇದೆ. ಮುಂತಕಾ ಅವರಿಗೆ ಭೂಮಿಯ ರಿಜಿಸ್ಟ್ರೇಷನ್ ಸೇರಿದಂತೆ ನೆಲದ ವ್ಯವಹಾರದ ಬಗ್ಗೆ ವಿವರವಾದ ತಿಳುವಳಿಕೆ, ಅನುಭವ ಇದೆ. ಆಪ್ತರಿಗೆ, ಮಿತ್ರರು ಸೇರಿದಂತೆ ಬೇರೆಯವರಿಗೆ ಜಮೀನು ಕೊಡಿಸುವ ಮತ್ತು ಅದಕ್ಕೆ ಬೆಲೆ ಬಂದಾಗ ಮಾರಿಸುವ ಆಸಕ್ತಿಯೂ ಮುಂತಕಾರಿಗೆ ಇದೆ. ಹೀಗೆ ಹಲವರಿಗೆ ನಿವೇಶನ ಕೊಡಿಸಿದ ಉದಾಹರಣೆಗಳಿವೆ.

ಅವರದೇ ಮಾತುಗಳಲ್ಲಿ ಭೂ ಆಸಕ್ತಿಯ ಬಗ್ಗೆ ಕೇಳೋಣ:

'ಮುಂಬೈಯಲ್ಲಿ ಇರುವ ಕೆಲವು ಸ್ನೇಹಿತರಿಗೆ ಒತ್ತಾಯಪೂರ್ವಕವಾಗಿ ಪ್ಲಾಟ್ ರಿಜಿಸ್ಟ್ರಿ ಮಾಡಿಸಿದ್ದೆ, ಬೀದರ್‌ನಲ್ಲಿ ಇರುವ ಪ್ಲಾಟ್‌ನ ಸಂಪೂರ್ಣ ಜವಾಬ್ದಾರಿ ನನ್ನದೇ ಆಗಿರುತ್ತಿತ್ತು. ಹಣ ನೀಡಿರುತ್ತಿದ್ದ ಶ್ರೀಮಂತರ ಹೆಸರಿನಲ್ಲಿ ಪ್ಲಾಟ್ ಇರುತ್ತಿತ್ತು. ಇದೇ ರೀತಿ ಆಜಾದಿ ಇಂಡಿಯಾ ಸಂಸ್ಥೆಯ ಮಾಲೀಕರಿಗೆ ಮೂರು ಪ್ಲಾಟ್ ಕೊಡಿಸಿದೆ. ಮೂರು ಪ್ಲಾಟ್ ಸೇರಿ ಕೇವಲ 6 ಸಾವಿರ ರೂಪಾಯಿ ನೀಡಿ ಖರೀದಿಸಲಾಗಿತ್ತು. ಕೆಲವು ವರ್ಷಗಳ ನಂತರ ಒತ್ತಾಯ ಪೂರ್ವಕವಾಗಿ ಅವುಗಳನ್ನು ಮಾರಾಟ ಮಾಡಿಸುವ ಬಗ್ಗೆ ಯೋಚಿಸಿದೆ. ಆ ಪ್ಲಾಟ್‌ಗಳು ಕಾಸ್ಮೋಸ್‌ನವರಿಗೆ ಬೇಕಾಗಿದ್ದವು. 30 ಲಕ್ಷ ರೂಪಾಯಿ ಬೆಲೆ ಹೇಳಿದೆ. ಆಗ ಅವರು ನೇರವಾಗಿ ಮಾಲೀಕರೊಂದಿಗೆ ಮಾತನಾಡುವುದಾಗಿ ತಿಳಿಸಿದರು. ನಗರದ ಹಿರಿಯ ಪತ್ರಕರ್ತರೊಂದಿಗೆ ಮುಂಬೈಗೆ ಹೋಗಿ ಮಾತುಕತೆ ನಡೆಸಿದರು. ಮೊದಲು 'ಮಾರಾಟ ಮಾಡಲು ಮನಸ್ಸಿಲ್ಲ' ಎಂದು ಹೇಳಿದರು. ಹೆಚ್ಚಿಗೆ ಹಣ ಬರುತ್ತಿದೆ ಎಂದಾದಾಗ 29 ಲಕ್ಷ ರೂಪಾಯಿಗೆ ಒಪ್ಪಿದರು' ಎಂದು ಅವರು ವಿವರಿಸುತ್ತಾರೆ.

ಸರ್ಕಾರಿ ಕಚೇರಿಯಲ್ಲಿ ಇರಬೇಕಾಗಿದ್ದ ಎಲ್ಲ ದಾಖಲೆಗಳು ಖಾಸಗಿ ವ್ಯಕ್ತಿಯ ಮನೆಯಲ್ಲಿ ಇರುತ್ತಿದ್ದವು. ಇಡೀ ಲ್ಯಾಂಡ್ ರೆಕಾರ್ಡ್‌ಗಳೆಲ್ಲ ಖಾಸಗಿ ವ್ಯಕ್ತಿಯೊಬ್ಬರ ಮನೆಯಲ್ಲಿಯೇ ಇರುತ್ತಿದ್ದವು. ಅವರು ಸದಾ ಕೋರ್ಟ್, ಡಿ.ಸಿ ಆಫೀಸ್ ಮತ್ತು ಸಬ್‌ರಿಜಿಸ್ಟ್ರಿ ಆಫೀಸ್‌ಗಳಲ್ಲಿಯೇ ಇರುತ್ತಿದ್ದರು. ಅವರೇನು ಮಾಡುತ್ತಿದ್ದಾರೆ ಎಂದು ವಾಚ್ ಮಾಡುತ್ತಿದ್ದೆವು. ಯಾರ ಜೊತೆ ಭೇಟಿ ಮಾಡುತ್ತಿದ್ದಾರೆ ಎಂದು ಬೆನ್ನು ಬಿದ್ದಿದ್ದೆವು.

ವಿವಾದಕ್ಕೆ ಆಸ್ಪದ ಇರುವ ಜಮೀನನ್ನು ಖರೀದಿಸಿ ಅದನ್ನು ಪ್ರತಿಷ್ಠಿತರಿಗೆ ಮಾರಾಟ ಮಾಡುತ್ತಿದ್ದರು. ಡಾಕ್ಟರ್, ಎಂಜಿನಿಯರ್‌ಗಳೆಲ್ಲ ಪ್ಲಾಟ್ ಖರೀದಿಸುತ್ತಿದ್ದರು. ತಮ್ಮ ಹತ್ತಿರ ಇರುವ ಸರ್ವೆ ನಂಬರ್ ಹೆಸರಿನಲ್ಲಿಯೇ ಮಾರಾಟ ಮಾಡಿ ರಿಜಿಸ್ಟ್ರಿ ಮಾಡಿಕೊಡುತ್ತಿದ್ದರು. ಸಮಸ್ಯೆ ಉಂಟಾದಾಗ ಪ್ರತಿಷ್ಠಿತರೆಲ್ಲ ಸೇರಿ ಡಿ.ಸಿ. ಸೇರಿದಂತೆ ಹಿರಿಯ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದ್ದರು. ಅದರಿಂದ ಯಾವುದೇ ಕಿರಿಕಿರಿ ಇಲ್ಲದೆ ಸಮಸ್ಯೆ ಬಗೆ ಹರಿಯುತ್ತಿತ್ತು.

ನಾನು ಪ್ಲಾಟ್ ಖರೀದಿಸಿ ಬೇರೆಯವರಿಗೆ ಮಾರಾಟ ಮಾಡುತ್ತಿರಲಿಲ್ಲ. ಹಾಗೆ ಮಾಡಿಲ್ಲ. ನನ್ನದೇ ಪ್ಲಾಟ್‌ಗಳ ಮೇಲೆ ಅವರು ಕಬ್ಜಾ ಮಾಡಲು ಬಂದರು. ಕಾಗದ ಪತ್ರದಲ್ಲಿ 9ಎಕರೆ 8 ಗುಂಟೆ ಇದ್ದರೆ ಅಷ್ಟೇ ರಿಜಿಸ್ಟ್ರಿ ಮಾಡಿಸಿಕೊಂಡು 11-12 ಎಕರೆ ಪ್ರದೇಶವನ್ನು ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಮ್ಯಾಪ್ ತಮಗೆ ಬೇಕಾದ ಹಾಗೆ ಸಿದ್ಧಪಡಿಸಿಕೊಳ್ಳುತ್ತಿದ್ದರು.

ನನ್ನದೊಂದು ಪ್ಲಾಟ್‌ನಲ್ಲಿ ಒಬ್ಬರಿಗೆ ಬಾಡಿಗೆ ನೀಡಿದ್ದೆ. ಪ್ಲಾಟ್‌ನ ಒಂದು ಭಾಗ ನನಗೆ ಬರುತ್ತದೆ ಎಂದು ಅವರು ಬಾಡಿಗೆದಾರನೊಂದಿಗೆ ಜಗಳ ಆಡಿದರು. ಮಾತಿಗೆ ಮಾತು ಬೆಳೆದು ಪರಸ್ಪರ ಕೈ ಮಿಲಾಯಿಸಿದರು. ಸುದ್ದಿ ತಿಳಿದು ಅಲ್ಲಿಗೆ ಹೋದೆ. ನಾನು ಜಗಳದಲ್ಲಿ ಭಾಗಿ ಆಗದಿದ್ದರೂ 'ಸತ್ತಾರ ಅಜೀಬ್, ಮುಂತಕಾ ಇಬ್ಬರೂ ಸೇರಿ ಹಲ್ಲೆ ನಡೆಸಲು ಬಂದಿದ್ದಾರೆ' ಎಂದು ಎಸ್‌ಪಿಯವರಲ್ಲಿ ದೂರು ನೀಡಿ ನನ್ನ ಮೇಲೆ ಕೊಲೆ ಪ್ರಕರಣ ದಾಖಲಾಗುವಂತೆ ಮಾಡಿದರು. ಪ್ರೆಸ್‌ನ ಎಲ್ಲ ಜನರೂ ಹೋಗಿ ಎಸ್‌ಪಿ ಅವರನ್ನು ಭೇಟಿ ಮಾಡಿದರು. ಮುಂತಕಾ ಯಾರೊಂದಿಗೂ ಜಗಳ ಮಾಡದ ವ್ಯಕ್ತಿ. ಅವರ ಮೇಲೆ ಹೇಗೆ ಕೇಸ್ ಮಾಡುತ್ತೀರಿ? ಎಂದು ಕೇಳಿದರು. ದೂರು ನೀಡಿದರೆ ಕೇಸ್ ಮಾಡಲೇಬೇಕಾಗುತ್ತದೆ ಎಂದು ಎಸ್‌ಪಿ ಹೇಳಿದರು. ಜಮಾನತ್ ತೆಗೆದುಕೊಂಡು ಹೈದರಾಬಾದ್‌ಗೆ ಹೋದೆ. ಸೆಕ್ಯುರಿಟಿ ಗಾರ್ಡ್ ಆಗಿದ್ದ ಸಹೋದರ ಸಂಬಂಧಿಯೊಬ್ಬರ ಮನೆಯಲ್ಲಿ ಅಡಗಿ ಕುಳಿತಿದ್ದೆ. ಕೆಲದಿನ ಕಳೆದು ವಾತಾವರಣ ತಿಳಿಗೊಂಡ ಮೇಲೆ ಬೀದರ್‌ಗೆ ಮರಳಿದೆ.

ನನ್ನ ನಿವೇಶನಗಳಿಗೆ ಸಂಬಂಧಿಸಿದಂತೆ ಕೇಸುಗಳು 30 ವರ್ಷಗಳಿಂದ ನಡೆಯುತ್ತಲೇ ಇವೆ. ಇತ್ಯರ್ಥ ಆಗಿಲ್ಲ. ಒಂದು ಬಾರಿ ಅಲಿ ಬಾಬಾ ಮತ್ತು ನಾನು ಡಿಸಿಸಿ ಬ್ಯಾಂಕ್‌ಗೆ ಹೋಗಿದ್ದೆವು. ವಿವಾದದಲ್ಲಿ ಇದ್ದ ಕಷ್ಟಕ್ಕೆ ಸಿಕ್ಕಿದ್ದ ಎರಡು ಪ್ಲಾಟ್‌ಗಳನ್ನು ಮುಂತಕಾ ಮಾರುತ್ತಿದ್ದಾರೆ ಎಂಬ ವಿಷಯ ಪ್ರಸ್ತಾಪ ಆಯಿತು. ನಾಲ್ಕು ಲಕ್ಷ ರೂಪಾಯಿಗೆ ಮಾರಾಟ ಮಾಡಲು ಯೋಚಿಸುತ್ತಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಅಲ್ಲಿಯೇ ಇದ್ದ ಅಪ್ಪರು ಎರಡು ನೂರು ನನ್ನ ಜೇಬಿನಲ್ಲಿ ಇಟ್ಟು ನನ್ನ ಹೆಸರಿಗೇ ರಿಜಿಸ್ಟ್ರಿ ಮಾಡಿಸಿ

ಎಂದು ಕೇಳಿದರು. ನಾನು ಒಪ್ಪಿಕೊಂಡೆ. ಹೀಗೆ ತಲೆಯ ಮೇಲೆ ಬಂದಿದ್ದ ಸಮಸ್ಯೆಯೊಂದು ಬಗೆ ಹರಿಯಿತು.

ರವೀಂದ್ರ ಕಂಪೆನಿಯ ಎಂ.ಡಿ. ಆಗಿದ್ದ ಜಹಾಗೀರದಾರ್ ಅವರಿಗೆ ಕೂಡ ಜಮೀನು ಖರೀದಿಸುವ ಹವ್ಯಾಸ ಇತ್ತು. ಬಹಳಷ್ಟು ದಿನ ಅವರ ಜೊತೆಯಲ್ಲಿಯೇ ಇರುತ್ತಿದ್ದೆ. ಹಾಗೆಯೇ ಜಹಾಗೀರದಾರ್ ಅವರ ಸಹಾಯದಿಂದ ಯಾವುದೇ ಲಾಭಾಪೇಕ್ಷೆ ಇಲ್ಲದೆ 30ಕ್ಕೂ ಹೆಚ್ಚು ಜನರನ್ನು ಸೌದಿ ಅರೇಬಿಯಾಕ್ಕೆ ಕೆಲಸ ಮಾಡುವುದಕ್ಕಾಗಿ ಕಳುಹಿಸಿದ್ದೇನೆ. ಹೀಗೆ ಹೋದವರಲ್ಲಿ ನನ್ನ ಸಹೋದರ ಕೂಡ ಸೇರಿದ್ದಾನೆ. ಜಹಾಗೀರದಾರ್ ಅವರು ತನ್ನ ಅಳಿಯನ ಹತ್ತಿರ ಟ್ರೇನಿಂಗ್ ಕೊಡಿಸಿ ನನ್ನ ಸಹೋದರನ್ನು ಸ್ವಂತ ಖರ್ಚಿನಲ್ಲಿ ಸೌದಿಗೆ ಕಳುಹಿಸಿದರು. ಸಹೋದರನನ್ನು ಕಳುಹಿಸುವಾಗ ಸೌದಿಗೆ ಹೋದರೆ ಇಲ್ಲಿ ಮನೆ ನಡೆಯುವುದು ಸಾಧ್ಯವಿಲ್ಲ ಎಂದು ತಿಳಿಸಿದೆ. ಆಗ ಜಹಾಗೀರದಾರ್ ಅವರು ಸೌದಿಯಲ್ಲಿನ ರೇಟ್‌ನಲ್ಲಿ ಒಂದು ತಿಂಗಳ ಅಡ್ವಾನ್ಸ್ ಸಂಬಳ ಕೊಟ್ಟಿದ್ದರು ಎಂದು ಅವರು ಮೆಲುಕು ಹಾಕುತ್ತಾರೆ.

# 12 ಕನ್ನಡ ಬಾರದ 'ಕನ್ನಡಿಗ'

ರಾಜ್ಯದ ಗಡಿಯಲ್ಲಿರುವ ಬೀದರ್ ಬಹುಭಾಷಿಕರು ಇರುವ ನಗರ. ಆಂಧ್ರಪ್ರದೇಶದ ಗಡಿಯಿಂದ ಕೇವಲ 9 ಕಿ.ಮೀ ಮತ್ತು ಮಹಾರಾಷ್ಟ್ರದ ಗಡಿಯಿಂದ 18 ಕಿ.ಮೀ. ದೂರದಲ್ಲಿ ಇರುವ ಬೀದರ್‌ನಲ್ಲಿ ಸಹಜವಾಗಿಯೇ ಹಲವು ಭಾಷೆಗಳನ್ನು ಆಡುವ ಜನರು ವಾಸಿಸುತ್ತಾರೆ. ಮರಾಠಿ ಮತ್ತು ತೆಲುಗು ಭಾಷೆಗಳನ್ನು ಆಡುವ ಜನರಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಕನ್ನಡ ಮಾತನಾಡುವ ಜನರ ಸಂಖ್ಯೆಯೇ ಹೆಚ್ಚು. ಕನ್ನಡ ಬಿಟ್ಟರೆ ಮಾತೃಭಾಷೆ ಆಗಿರುವ ಕಾರಣಕ್ಕೆ ಉರ್ದು ಮಾತನಾಡುವ ಜನರು ಕೂಡ ಬಹುಸಂಖ್ಯಾತರಾಗಿದ್ದಾರೆ.

ಬೀದರ್ ಜಿಲ್ಲೆ ಮತ್ತು ಅಲ್ಲಿನ ಭಾಷೆಯ ಬಳಕೆ, ಹಲವು ಭಾಷೆಗಳ ಸಂಗಮ ಆಗಿದ್ದರೂ ಕನ್ನಡ ಉಳಿದು, ಬೆಳೆದು ಬಂದ ರೀತಿ, ವಿವಿಧ ಭಾಷೆಗಳ ಮತ್ತು ಪದಗಳ ಸಮ್ಮಿಲನದಿಂದಾಗಿ ಉಂಟಾದ 'ಹೊಸ ಭಾಷೆ' ಮತ್ತು ಹತ್ತಾರು ಭಾಷೆಗಳನ್ನು ಬಳಸುವವರ ಮಧ್ಯೆಯೂ ಆಡುಮಾತಿನಲ್ಲಿ ಹಳೆಗನ್ನಡ ಪದಗಳು ಉಳಿದುಕೊಂಡಿರುವ ರೀತಿ ಕುತೂಹಲಕಾರಿ. ಅದೆಲ್ಲ ಇರಲಿ.

ಐತಿಹಾಸಿಕವಾಗಿ ಅತ್ಯಂತ ಮಹತ್ವ ಇರುವ ಜಿಲ್ಲೆ 'ಬೀದರ್' ಎಂಬುದರಲ್ಲಿ ಎರಡು ಮಾತಿಲ್ಲ. ಬೀದರ್ ಕುರಿತು ಪುರಾಣದ ಕಥೆಗಳಲ್ಲಿ ಉಲ್ಲೇಖ ಇದೆ ಎಂದು ಹೇಳುವ ಪ್ರತೀತಿ ಇದೆಯಾದರೂ ಸದ್ಯ ಆ ಬಗ್ಗೆ ಹೆಚ್ಚು ಯೋಚನೆ ಮಾಡಬೇಕಿಲ್ಲ. ಬೀದರ್ ಭಾಷೆಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವುದಕ್ಕೆ ಅಗತ್ಯವಿರುವಷ್ಟು ವಿವರಗಳನ್ನು ಮಾತ್ರ ಇಲ್ಲಿ ನೀಡಲು ಬಯಸುತ್ತೇನೆ.

'ಕವಿರಾಜಮಾರ್ಗ' ಖ್ಯಾತಿಯ ನೃಪತುಂಗನ ಕಾಲಕ್ಕೆ ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟ (ಈಗಿನ ಮಳಖೇಡ) ರಾಷ್ಟ್ರಕೂಟರ ರಾಜಧಾನಿಆಗಿತ್ತು. ಮಾನ್ಯಖೇಟಕ್ಕೆ ರಾಜಧಾನಿ ವರ್ಗಾಯಿಸುವ ಮುನ್ನ ಬಸವಕಲ್ಯಾಣ ತಾಲ್ಲೂಕಿನ ಮಯೂರಖಿಂಡಿ (ಈಗಿನ ಮೋರಖಿಂಡಿ) ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಅದು ಕನ್ನಡ ಭಾಷೆ ತನ್ನದೇ ಸ್ಥಾನ ಮತ್ತು ಸಾಹಿತ್ಯಿಕ ಅಸ್ತಿತ್ವ ಪಡೆದುಕೊಳ್ಳಲು ಆರಂಭಿಸಿದ ಕಾಲ. ನಂತರ 'ಕಲ್ಯಾಣಿ' ಎಂದು ಕರೆಯಲಾಗುತ್ತಿದ್ದ ಪ್ರದೇಶ ಚಾಲುಕ್ಯರ ರಾಜಧಾನಿ ಆಗಿತ್ತು. ನಂತರ ಅದನ್ನು ಈಗ ಬಸವಕಲ್ಯಾಣ ಎಂದು ಕರೆಯಲಾಗುತ್ತಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅಂದರೆ ಆರನೇ ವಿಕ್ರಮಾದಿತ್ಯ ಮತ್ತು ಮೂರನೇ ಸೋಮೇಶ್ವರರ ಆಡಳಿತದ ಅವಧಿಯಲ್ಲಿ ಸಾಂಸ್ಕೃತಿಕ

ಮತ್ತು ಸಾಹಿತ್ಯಕ ಚಟುವಟಿಕೆಗಳಿಗೆ ಮಹತ್ವ ಬಂತು. ಆಗ ಸಂಸ್ಕೃತ ಪ್ರಮುಖ ಭಾಷೆ ಆಗಿತ್ತು. ಸಂಸ್ಕೃತದಲ್ಲಿ ಮೂರನೇ ಸೋಮೇಶ್ವರ 'ಮಾನಸೋಲ್ಲಾಸ' ವಿಶ್ವಕೋಶ ರಚಿಸಿದ್ದ.

ಅದಾದ ನಂತರ ಅಧಿಕಾರಕ್ಕೆ ಬಂದವರು ಕಳಚುರಿ ಅರಸರು. 12ನೇ ಶತಮಾನದಲ್ಲಿ ಬಿಜ್ಜಳನ ಕಾಲದಲ್ಲಿ ನಡೆದ 'ವಚನ ಚಳವಳಿ' ಕನ್ನಡದ ಎತ್ತರವನ್ನು ಹೆಚ್ಚಿಸಿತು. ಬಸವಣ್ಣ, ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಸೇರಿದಂತೆ ಶರಣರು ಕನ್ನಡದಲ್ಲಿ ವಚನ ಬರೆಯುವ ಮೂಲಕ ಭಾಷೆಗೆ ಹೊಸ ಆಯಾಮ ಕಲ್ಪಿಸಿದರು.

ನಂತರ ಬೀದರ್ ಜಿಲ್ಲೆಯಲ್ಲಿ ಅಧಿಕಾರ ನಡೆಸಿದ್ದು ಬಹಮನಿ ಅರಸರು. ಈ ಅವಧಿಯಲ್ಲಿ ಪರ್ಷಿಯಾ ಮತ್ತು ಮಧ್ಯ ಏಷ್ಯಾದಿಂದ ಜನ ಬೀದರ್‌ನತ್ತ ವಲಸೆ ಬಂದರು. ಪಾರ್ಸಿ, ಅರಬ್ಬಿ, ಇರಾನಿ ಮಾತನಾಡುವ ಜನ ಬೀದರ್‌ಗೆ ಬಂದರು. ಬಹಮನಿ ಅರಸರ ಕಾಲದಲ್ಲಿ ಪಾರ್ಸಿ ಆಡಳಿತ ಭಾಷೆಯಾಗಿತ್ತು. ಮಹಮದ್ ಗವಾನ್ ಹತ್ಯೆಯಿಂದಾಗಿ ಆರಂಭವಾದ ಬಹಮನಿ ಕುಸಿತದ ನಂತರ ಬರೀದ್‌ಷಾಹಿ ಅರಸರ ಕಾಲದಲ್ಲಿಯೂ ಪಾರ್ಸಿ ತನ್ನ ಪ್ರಾಧಾನ್ಯತೆ ಉಳಿಸಿಕೊಂಡು ಬಂತು. ಔರಂಗಜೇಬನ ದಾಳಿಯ ನಂತರದ ದಿನಗಳಲ್ಲಿ ದಕ್ಷಿಣದಲ್ಲಿ ಹೆಚ್ಚಿದ ಮರಾಠರ ಪ್ರಭಾವ ಮರಾಠಿ ಚಾಲ್ತಿಗೆ ಬರುವುದಕ್ಕೆ ಕಾರಣವಾಯಿತು. ಅದಾದ ಮೇಲೆ ಹೈದರಾಬಾದ್ ನಿಜಾಂರ ಅವಧಿಯಲ್ಲಿ ಉರ್ದು ಆಡಳಿತ ಭಾಷೆಯಾಗಿತ್ತು. ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಹೈದರಾಬಾದ್ ಸಂಸ್ಥಾನದ ಪ್ರದೇಶಗಳನ್ನು ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸೇರಿಸಲಾಯಿತು. ಹೀಗೆ ಮೂರು ತುಕಡಿ ಆದಾಗ ಬೀದರ್ ಜಿಲ್ಲೆಯೂ ಮೂರು ಕಡೆಗಳಲ್ಲಿ ಹಂಚಿಹೋಯಿತು.

'ಗುರುನಾನಕ್‌ರು ಭೇಟಿ ನೀಡಿದ್ದರು' ಎಂಬ ಪ್ರತೀತಿಯ ಹಿನ್ನೆಲೆಯಲ್ಲಿ ಸಿಖ್ ಸಮುದಾಯದ ಜನ ಬೀದರ್‌ಗೆ ಬರಲು ಆರಂಭಿಸಿದರು. ಪಂಜಾಬಿ ಮಾತನಾಡುವ ಜನರ ಸೇರ್ಪಡೆಯಾಯಿತು. ವಾಯುಪಡೆಯ ತರಬೇತಿ ಕೇಂದ್ರ ಇರುವ ಹಿನ್ನೆಲೆಯಲ್ಲಿ ಉತ್ತರ ಮತ್ತು ಪೂರ್ವ ಭಾರತದ ಜನ ಬೀದರ್‌ನತ್ತ ಮುಖಮಾಡಿದರು. ಹೀಗೆ ಬೀದರ್ ಹಲವು ಭಾಷೆಗಳನ್ನು ಮಾತನಾಡುವ ಜನರು ಇರುವ ಆಡುಂಬೊಲ.

ಸರಿ ಸುಮಾರು ಪ್ರತಿ ಇನ್ನೂರು ವರ್ಷಗಳಿಗೆ ಒಮ್ಮೆ ಬೀದರ್‌ನ ಆಡಳಿತ ಭಾಷೆ ಬದಲಾಗುತ್ತ ಬಂದಿದೆ. ಆದರೆ, ಕನ್ನಡ ಮಾತ್ರ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿದೆ. ಅದರ ಶ್ರೇಯ ಸಲ್ಲಬೇಕಾದದ್ದು ಮನೆಯಲ್ಲಿ ಕನ್ನಡ ಮಾತನಾಡಿದ ಮತ್ತು ಮಕ್ಕಳಿಗೆ ಕನ್ನಡ ಕಲಿಸಿದ ಮಹಿಳೆಯರಿಗೆ. ಹಲವಾರು ತಲೆಮಾರುಗಳ ಪರ್ಯಂತ 'ಬಹುಸಂಖ್ಯಾತ' ಹೆಂಗಳೆಯರು 'ಕನ್ನಡದ ಕೆಲಸ' ಮಾಡದೇ ಇದ್ದಿದ್ದರೆ ಕನ್ನಡ ಉಳಿಯುತ್ತಿರಲಿಲ್ಲ ಎಂದರೆ ಅಚ್ಚರಿಯೇನಿಲ್ಲ.

ಮನೆಯಲ್ಲಿ ಕನ್ನಡ, ಉರ್ದು, ಮರಾಠಿ, ತೆಲುಗು, ಪಾರ್ಸಿ, ಪಂಜಾಬಿ, ಇರಾನಿ ಮಾತನಾಡುವ ಜನ ಮಾರುಕಟ್ಟೆಗೆ ಬಂದಾಗ ಮಾತ್ರ ಸಂಪರ್ಕ ಭಾಷೆಯಾಗಿ ಹಿಂದಿ ಬಳಸುತ್ತಾರೆ. ಅದನ್ನು ಖಚಿತವಾಗಿ ಹಿಂದಿ ಎಂದು ಹೇಳಲು ಸಾಧ್ಯವಿಲ್ಲ. ಹಿಂದಿ ಮತ್ತು ಉರ್ದು ಮಿಶ್ರಿತ 'ದಖನಿ' ಎಂಬ ಬ್ರಿಡ್ಜ್ ಭಾಷೆ. ಹೀಗಾಗಿ ಬೀದರ್‌ನಲ್ಲಿ ರಾಜ್ಯದ ಬೇರೆ ಭಾಗದ ಹಾಗಿರದೆ 'ಮನೆಮಾತು' ಮತ್ತು 'ಸಂಪರ್ಕ ಭಾಷೆ' ಎಂಬ ಎರಡು ರೀತಿಯ ಬಳಕೆ ಇದೆ. ಇಂತಹ ಪ್ರದೇಶದಲ್ಲಿ ವಾಸಿಸುವ, ಇರುವ ಬದುಕು ನಡೆಸುವ ವ್ಯಕ್ತಿಗಳು ಸಹಜವಾಗಿಯೇ ಬಹುಭಾಷೆ ಬಲ್ಲವರಾಗಿರುತ್ತಾರೆ.

ಛಾಯಾಗ್ರಾಹಕ ಗುಲಾಮ್ ಮುಂತಕಾ ಮನೆಮಾತಾದ ಉರ್ದು ಮಾತ್ರ ಮಾತನಾಡುತ್ತಾರೆ. ಅವರಿಗೆ ಕನ್ನಡ ಅರ್ಥವಾಗುತ್ತದೆ. ಆದರೆ, ಮಾತನಾಡಲು ಹಿಂಜರಿಯುತ್ತಾರೆ. ಬೀದರ್‌ಅನ್ನು ಅತೀಯಾಗಿ ಪ್ರೀತಿಸುವ, ಇಷ್ಟಪಡುವ ಮುಂತಕಾ ಇಷ್ಟ ಪಟ್ಟಿದ್ದರೆ ಮುಂಬಯಿ, ಹೈದರಾಬಾದ್‌ಗಳಲ್ಲಿ ತಮ್ಮ ನೆಲೆ ಕಂಡುಕೊಳ್ಳಬಹುದಿತ್ತು. ಹಾಗೆ ನೋಡಿದರೆ ಹೈದರಾಬಾದ್‌ನಲ್ಲಿ ಅವರ ಮನೆಯೂ ಇದೆ. ಆದರೆ, ಬೀದರ್ ಬಗೆಗಿನ ಅವರ ವ್ಯಾಮೋಹ ಎಲ್ಲೆಲ್ಲಿ ಸುತ್ತಾಡಿದರೂ ಮತ್ತೆ ಅಲ್ಲಿಗೇ ಕರೆತಂದಿತು. 'ಬಹಳಷ್ಟು ಕಡೆ ಹೋಗಿ ಬಂದ್ದಿದೇನೆ. ಬಹುತೇಕ ಇಡೀ ದೇಶ ಸುತ್ತಿದ್ದೇನೆ. ಬೀದರ್‌ನಷ್ಟು ಇಷ್ಟವಾದ ನಗರ ಮತ್ತೊಂದಿಲ್ಲ' ಎಂಬ ಖಚಿತ ಅಭಿಪ್ರಾಯ ಅವರದು.

ಕನ್ನಡ ಮಾತನಾಡುವ ಜನ ಹೆಚ್ಚಾಗಿರುವ ಬೀದರ್‌ನಲ್ಲಿ ಆರೇಳು ದಶಕಗಳ ಕಾಲ ಇದ್ದರೂ ಅವರು ಕನ್ನಡ ಕಲಿತಿಲ್ಲ. ಯಾಕೆ ಕಲಿಯಲಿಲ್ಲ? ಎಂಬ ಪ್ರಶ್ನೆಗೆ ಮುಗಳ್ನಗುತ್ತ ಮಾತಿಗೆ ಆರಂಭಿಸುವ ಮುಂತಕಾ 'ಮನೆಯಲ್ಲಿ ಉರ್ದು ಮಾತನಾಡುತ್ತಿದ್ದೆವು. ಹೊರಗಡೆ ಬಂದಾಗ ಹಿಂದಿ ಬಳಸಲಾಗುತ್ತಿತ್ತು. ಕನ್ನಡ ಕಲಿಯಲೇ ಬೇಕಾದ ಅನಿವಾರ್ಯ ಸ್ಥಿತಿ ಏನು ಇರಲಿಲ್ಲ. ಎಲ್ಲರೂ ಹಿಂದಿ- ಉರ್ದುವಿನಲ್ಲಿಯೇ ಮಾತನಾಡುತ್ತಿದ್ದರಿಂದ ಕಲಿಯಲಿಲ್ಲ. ಆದರೆ, ನನಗೆ ಕನ್ನಡ ಬರುವುದಿಲ್ಲ, ಕಲಿಯಲು ಪ್ರಯತ್ನಿಸಿಲ್ಲ ಎಂದೇನು ಅಲ್ಲ. ಕನ್ನಡದಲ್ಲಿ ಮಾತನಾಡಿದರೆ ಅರ್ಥವಾಗುತ್ತದೆ. ಮಾತನಾಡಲು ಕಲಿಯಲು ಪ್ರಯತ್ನ ಕೂಡ ಮಾಡಿದ್ದೆ. ಕಲಿಯುವ ಸಂದರ್ಭದಲ್ಲಿ ಒರಟಾಗಿ, ತಪ್ಪು ತಪ್ಪಾಗಿ ಮಾತನಾಡಿದ್ದರಿಂದ ಜನ ಗೇಲಿ ಮಾಡಿ ನಗಲು ಆರಂಭಿಸಿದರು. ಅಪಮಾನ ಸಹಿಸಲಾಗದೇ ಕನ್ನಡ ಕಲಿಯುವ ಬಯಕೆ ಹಿಂದಕ್ಕೆ ಸರಿಯಿತು. ಓದಲು ಮತ್ತು ಬರೆಯಲು ಕಷ್ಟ. ಆದರೆ, ಮಾತನಾಡಿದ್ದನ್ನು ಅರ್ಥ ಮಾಡಿಕೊಳ್ಳಬಹುದು ತೊಂದರೆಯೇನಿಲ್ಲ' ಎಂದು ತಮ್ಮ ಕನ್ನಡ ಕಲಿಕೆಯ ಪ್ರಯತ್ನಗಳನ್ನು ವಿವರಿಸುತ್ತಾರೆ.

ಕನ್ನಡಿಗ ಎಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಸಾಧ್ಯವಾಗದ ಕನ್ನಡ ಹೋರಾಟಗಾರರಿಗೆ ಕನ್ನಡದ ಕೆಲಸ ಎಂದರೆ ಏನು? ಎಂದು ಅರ್ಥ ಮಾಡಿಸುವುದು ಕಷ್ಟದ ಕೆಲಸ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಭೆ, ಸಮಾರಂಭ

ನಡೆಸುವುದು, ಬೀದಿಗಿಳಿದು ಹೋರಾಟ ಮಾಡುವುದು. ರಾಜ್ಯೋತ್ಸವದ ಸಂದರ್ಭದಲ್ಲಿ ಹಳದಿ, ಕೆಂಪು ಬಣ್ಣದ ಧ್ವಜ ಹಿಡಿದು ಪ್ರಮುಖ ಬೀದಿಗಳಲ್ಲಿ ಓಡಾಡುವುದು ಮಾತ್ರ ಕನ್ನಡದ ಕೆಲಸ ಎಂಬ ಸಂಕುಚಿತ ಅರ್ಥದಲ್ಲಿ ಬಳಸಲಾಗುತ್ತಿದೆ. ಕನ್ನಡ ಎನ್ನುವುದು ಬರಿ ಭಾಷೆ ಮಾತ್ರ ಅಲ್ಲ. ಅದೊಂದು ಪ್ರದೇಶದ ಜೀವನ ವಿಧಾನ ಕೂಡ. ಕನ್ನಡದ ಮೇರೆಗಳನ್ನು ವಿಸ್ತರಿಸದೇ ಹೋದರೆ ಕನ್ನಡದ ಸಂಸ್ಕೃತಿ ಉಳಿಯುವುದು ಕಷ್ಟವಾಗುತ್ತದೆ. ಕನ್ನಡ ಮಾತನಾಡುವವರು ಮಾತ್ರ ಕನ್ನಡಿಗರಲ್ಲ. ಕರ್ನಾಟಕದಲ್ಲಿ ವಾಸಿಸುವವರೆಲ್ಲ 'ಕನ್ನಡಿಗರು' ಎಂಬ ವ್ಯಾಪಕ ಅರ್ಥ ಕಂಡುಕೊಳ್ಳದಿದ್ದರೆ ಭಾಷೆ ಬೆಸೆಯುವುದಕ್ಕೆ ಬಳಕೆಯಾಗದೇ ವಿಭಜಿಸುವದಕ್ಕೆ ಕಾರಣವಾಗುತ್ತದೆ.

ಕನ್ನಡದ ಕೆಲಸ ಎಂದರೆ ಕೇವಲ ಹೋರಾಟ ಮಾಡುವುದು ಮತ್ತು ಸಾಹಿತ್ಯ ರಚಿಸುವುದು ಮಾತ್ರ ಅಲ್ಲ. ಕನ್ನಡ ಕೇವಲ ಸಾಹಿತಿಗಳ ಗುತ್ತಿಗೆ ಅಲ್ಲ. ಸದ್ಯ ಮಹಾರಾಷ್ಟ್ರದ ನಿವಾಸಿ ಆಗಿದ್ದರೂ ಹಿಂದೂಸ್ತಾನಿ ಸಂಗೀತದ ಜೊತೆಗೆ ದಾಸರ ಪದಗಳನ್ನು ಹಾಡುವ ಪಂಡಿತ್ ಭೀಮಸೇನ ಜೋಷಿ ಕನ್ನಡಿಗರು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಹಾಗೆಯೇ ಕರ್ನಾಟಕದಲ್ಲಿಯೇ ವಾಸಿಸಿದರೂ ಕನ್ನಡ ಚೀಸು, ವಚನ, ದಾಸರಪದಗಳನ್ನು ಒಮ್ಮೆಯೂ ಹಾಡಿರದ, ಹಾಡದ ಗಂಗೂಬಾಯಿ ಹಾನಗಲ್ ಕೂಡ ಕನ್ನಡಿಗರೇ ಎನ್ನುವುದಕ್ಕೆ ತಕರಾರಿಲ್ಲ. ತಕರಾರು ಮಾಡಬಾರದು ಕೂಡ. ಹಾಗೆಯೇ ಭಾರತ ಕ್ರಿಕೆಟ್ ತಂಡದ ನಾಯಕನಾಗಿದ್ದ ರಾಹುಲ್ ದ್ರಾವಿಡ್ ಕನ್ನಡ ಮಾತನಾಡದಿದ್ದರೂ 'ಕನ್ನಡಿಗ'. ಈಗ ನಾಯಕನಾಗಿರುವ ಅನಿಲ್ ಕುಂಬ್ಳೆ ಕನ್ನಡ ಮಾತನಾಡುವ ಕನ್ನಡಿಗ. ಈ ಅರ್ಥದಲ್ಲಿ ಗುಲಾಮ್ ಮುಂತಕಾ ಕೂಡ ಕನ್ನಡ ಮಾತನಾಡದ 'ಕನ್ನಡಿಗ'.

ಹಲವು ಆಯಾಮಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಕೆಲಸ ಮಾಡುವುದೇ ಕನ್ನಡವನ್ನು ಬೆಳೆಸುವ, ಕಟ್ಟುವ ಕೆಲಸ. ರಾಹುಲ್ ದ್ರಾವಿಡ್ ದೂರದ ದಕ್ಷಿಣ ಆಫ್ರಿಕಾದ ಮೈದಾನಗಳಲ್ಲಿ ಬ್ಯಾಟ್‌ನಿಂದ ಚೆಂಡನ್ನು ಹೊಡೆಯುವುದು ಕನ್ನಡದ ಕೆಲಸ. ಹಾಗೆಯೇ ಆಸ್ಟ್ರೇಲಿಯಾದ ಪಿಚ್‌ಗಳಲ್ಲಿ ಬಾಲ್ ಎಸೆದು ವಿಕೆಟ್ ಬೀಳಿಸುವ ಅನಿಲ್ ಕುಂಬ್ಳೆ ಕೂಡ ಕನ್ನಡದ ಕೆಲಸ ಮಾಡುತ್ತಿರುತ್ತಾರೆ. ಅವರಂತೆ ಮುಂತಕಾ ಕ್ಲಿಕ್ಕಿಸಿದ ಚಿತ್ರಗಳು, ಅವರ ಕ್ಯಾಮರಾ ಸಂಗ್ರಹ ಮತ್ತು ಅವರ ಬಳಿ ಇರುವ ವಿಶ್ವದ ಅತಿದೊಡ್ಡ ನೆಗೆಟಿವ್, ಫೋಟೊಗಳು ಕೂಡ ಕನ್ನಡದ, ಕರ್ನಾಟಕದ ಹೆಮ್ಮೆ.

ಸಾಹಿತ್ಯದ ಚೌಕಟ್ಟುಗಳಾಚೆ ಕನ್ನಡವನ್ನು ಬೆಳೆಸಿದ ಮತ್ತು ವಿಸ್ತರಿಸಿದ ಕೃಷಿಕರು, ತಂತಜ್ಞರು, ಕಲಾವಿದರು, ವಿಜ್ಞಾನಿಗಳು, ಸಂಗೀತಗಾರರು, ಛಾಯಾಗ್ರಾಹಕರು, ಶಿಲ್ಪಿಗಳು, ಪತ್ರಕರ್ತರು, ಇತಿಹಾಸ ತಜ್ಞರು ಕನ್ನಡದ ಮನಸ್ಸುಗಳಲ್ಲಿ ಸೇರಬೇಕು. ಕನ್ನಡದ ವೈಭವಗಳಲ್ಲಿ ಅವರ ಸಾಧನೆ ಕೂಡ ಸೇರಬೇಕು. ಅಂದಾಗ ಮಾತ್ರ ಕನ್ನಡ ಬೆಳೆಯುತ್ತದೆ ಮತ್ತು ಬದುಕುತ್ತದೆ.

## ಅನುಬಂಧಗಳು :

# The Man and his Magic Machine

An innovative lensman in the small town of Bidar in Karnataka is using his century old camera to produce dramatic effects on the bromide

Look at the above photograph . It evokes wondrous gasps. This could be the nation's ritziest address. After all, who does not recognize the Gateway of India on Mumbai's seafront and the buildings around. But could a camera capture this view in one shot. Or this is a patchwork of photographs. No, the view was captured on a single revolving film by a nearly century-old Circuit Camera owned by cameraman and, let us call him 'photo-engineer' Ghulam Muntaqa from Bidar, a remote town in North Karnataka.

For its looks, Muntaqa's Circuit Camera can be dismissed as a junk box, a contraption worth nothing. But take a hard look at the machine. It still revolves flawlessly on a copper gear mounted over a tripod, pans over a wide area and captures a panoramic view of the surroundings. Even more surprisingly, the nearly century old camera transfers the view on a film capable of being enlarged into wall-sized photographs, a size mostly reserved for murals. And the details are perfect, capturing even the veins of leaves, or glistening beads of sweat rolling down faces or the wrinkles of skin. And if it happens to be a group of, say 400 people, each face is distinctly recognizable.

Yet the question whether one should marvel at the man or the machine remains unanswered? Looking at the deadly combine the answer is perhaps both, for the credit must be equally shared by Ghulam Muntaqua. But for this shutterbug, this old camera would, in all likelihood, been consigned to junkyard. Muntaqua virtually salvaged it from a scrape lot up for sale in Mumbai's Chor Bazar at the cost of metal some 15 years ago. Today after putting it back into use, Muntaqua refuses to part with it even at a price of rupees two lakhs. Believe it, the offer came from a photography museum in Mumbai.

What sets this camera and the cameraman apart? The very fact that this antique of a camera still functions, capable of absorbing a 180 degree view of the horizon and transferring scenery onto bromides that are well worth decorating drawing rooms is in itself something very rare. Says Muntaqua, the proud owner: "I had picked up the box camera from the Chor Bazar merely for its unique lens which can be simultaneously used as normal, tele and wide lens for rupees 1500. Records showed that it had been earlier used in Oxford University for group photographs. "I had never imagined that it could be a circuit camera capable of revolving and capturing a 180 degree view. I first used it for a group photograph of the 100-member staff of the Bidar District Central Cooperative Bank. The clearly distinguishable faces on the nine feet by one feet photograph boosted my confidence. It has never failed me since then. Next photograph covered a group of 300 students of an outgoing batch of a college in Bidar." The only time he demonstrated his skills publicly in Bangalore was in 1994 when chief minister Veerappa Moily was snapped along with nearly 300 legislators in the backdrop of the estately Vidhana Soudha. But more than his photography, he and his relic camera aroused the curiosity

of the lensmen in the state capital. He was himself the object of many a photographs the next day.

A turning point came when Muntaqua's antique camera produced a panoramic view of the famous Gateway of India and its surroundings and his principals, Architect Baghban and Baghban Associates asked him to come out with the panorama on the colour film. Since then Muntaqua has been working on transferring his skill onto the colour film and says "the breakthrough is imminent".

Son of a police photographer of the erstwhile Nizam state, Muntaqua took to photography very early in life. Says he reminiscing the olden days: "Those were the days when the negatives were taken on glass coated with silver nitrate. Today Muntaqua can boast of nearly 50 cameras in his collection. Most of these came through tough haggling at the Bombay's Chor Bazar known for rich pickings by ace photographers.

Shy of publicity, Muntaqa keeps a low profile. Though quick to capture on lens several events such as Latur's quake and the bizarre gas tanker accident at Tarola near Bidar (killing 100 persons), he has been totally averse to encashing his skills. Bidar journalist Quazi Arshad Ali, editor *Bidar ki Awaz*, a Hindi daily, says copyright for Muntaqua's Gateway of India photograph could have been bought against lakhs of rupees, but Muntaqua was pursuing altogether different dreams, i.e., of inducting colour into his skills on the old camera. Already 60, Muntaqua however is determined to carry on with his mission.

- Maqbool Ahmed Siraj

(Islamic Voice, Rabi-ul-Awwal 1422H, June 2001, Volume 15-06 No:174)

## Govt. honours senior photographer

BIDAR, OCT. 29. The State Government has chosen senior press photographer Gulam Muntaka for the Rajyotsava award for his service to the profession.

Mr. Muntaka's career as a photographer spans over four decades.

Born in 1939, Mr. Muntaka has been working since 1962.

His achievements include photographing several important events such

as the Latur earthquake and the petrol tanker explosion in Tadola, which claimed hundreds of lives.

Mr. Muntaka has also taken photographs on an eight-foot long negative, with the magic circuit camera that he invented.

He has worked for a number of daily and weekly publications such as the Hindi daily Bidar Ki Awaaz.

(The Hindu, 30th October, 2004)

## Craze for cameras

Gulam Muntak knows no world beyond the camera. His rare collection of cameras and negatives are any photographer's envy, writes Devu Pattar

The historically magnificent yet contemporarily 'backward' Bidar has several wonders hidden in its folds. Gulam Muntak, the camera wizard, is one such wonder. With a wide range of cameras in his collection, Muntak is any photographer's envy. A rare, one of a kind negative of 8 ft width is in his possession. Once, A R Datta, a well-known photographer from the times

of Jawaharlal Nehru, had boasted in an interview that the 6 ft negative he possessed was the biggest in the world. But Muntak's collection has a 8 ft negative.

Muntak can capture on film a crystal clear photo of a group of 400 in which every individual can be seen with minute details, including the sweat on their eyebrows or even the folds on their foreheads, and each one's photo can be enlarged separately.

He has also captured Mumbai's India Gate and the Taj Mahal Hotel that face each other, in one single negative. All this is possible because of the 'magic box' that he owns.

His magic box is a century old circuit camera. Set on a tripod, it can be rotated 180 degrees and can capture both angles of an object or individual. Muntak bought it at a chor bazaar in Mumbai at a throw away price. He experimented with various lenses and it worked.

"It was a camera used to take group photos at the Oxford University. It was discarded, thought as useless. After bringing it from Mumbai to Bellary, I started experimenting with it using different lenses and was surprised to see that it worked."

It is for this reason that Muntak is often called a photo-engineer.

When Muntak first declared that he could click the photo of a big group, no one believed him. He persuaded the Bidar District Central Co-operative Bank to pose for a group photo. It was only after photographing a big group of 100 people did Muntak gain confidence. His next adventure was to capture on film a group of 300 students at a college.

He was even invited to photograph a group of 300 MLAs along with the then chief minister Veerappa Moily in front of the Vidhana Soudha in 1994. It's a rare photo with even the High Court appearing in the same frame.

Having heard about the rare camera, the Mumbai Photography Museum offered to buy it for a whopping Rs 2 lakhs, but Muntak was not willing to part with it. He is very proud of his collection of rare cameras that range from very old models to the latest digital ones.

He also experiments with different lenses. One can hardly find a camera in its original form in his collection.

Muntak's father was a police photographer during the Nizam's era. Muntak's love for the media came from his father. He has preserved all the negatives carefully. He even has negatives with silver nitrate painted on the glass.

Muntak has clicked almost all the prime ministers, chief ministers and presidents. His favourite is a photo he had clicked of Jawaharlal Nehru at the Bidar airport. The way he has captured the Latur earthquake and the fire accident at Tadol is heart rending, bringing back the intensity of the tragedy. His photos of the Bidar monuments tell a different story altogether.

"Bidar is my favourite place. Wherever I go, I feel like coming back to Bidar within a couple of days. Hence I did not accept invitations to stay in Mumbai or Hyderabad," he says. Most of his family members are living abroad, but for Muntak it's his camera and his favourite Bidar that keep him company.

Even at 70 Muntak has not lost even a bit of his enthusiasm for photography. With a camera in hand he forgets the world.

He neither speaks about himself nor is he happy with publicity. He prefers to remain anonymous. When such is the case, it's a surprise that he was chosen for the Karnataka Rajyotsava award.

(Translated by Prathibha Nandakumar)
Spectrum, Deccen Herald, 5th September, 2006

## WORLD PHOTOGRAPHY DAY

GULBARGA: The Agriculture Marketing Minister Sharanabasappa Darshanapur inaugurated World Photography Day organised by the Gulbarga District Press Photographers' Association and the Information Department, in Gulbarga on Sunday. He urged press photographers to develop a passion for photography and not just to perceive it as a job.

An exhibition of photographs and negatives of Rajyotsava Award winner Gulam Muntaqa, press photographer of the Bidar Ki Awaaz, was organised on the occasion. The Minister had a look at the nine-ft long negative exposed by Mr. Muntaqa believed to be the longest in the country. Mr Muntaqa spoke of his six-decade career and explained the events leading to his capturing the famous picture of Jawaharlal Nehru waiving to the crowd with his Sherwani fluttering in the wind from the Bidar Air Force base. He spoke about his rotating camera and a picture of the Vidhana Soudha and the High Court taken in one shot.

Mr. Muntaqa and other senior press photographers, Bhavarlal Jhawar of Yadgir, Nizamuddin Junaid and Sripadrao Kulkarni of Gulbarga were felicitated.

Association president Bhavani Singh Thakur, Hyderabad Karnataka Chamber of Commerce and Industries president Umakant Niggudagi, Deputy Director of Information Basavaraj Para and others were present.

(The Hindu, 11th September, 2006)

## ‘ಕ್ಯಾಮರಾ’ ಬೆಳಕಿನಲ್ಲಿ ಮುಂತಾಕ್

ತನ್ನಲ್ಲಿರುವ ಅಪರೂಪದ ಕ್ಯಾಮರಾಗಳು ಮತ್ತು ಅವುಗಳಿಂದ ಕ್ಲಿಕ್ಕಿಸಿದ ಫೋಟೊಗಳಿಂದ ಬೆರಗುಗೊಳಿಸುವ ವ್ಯಕ್ತಿ ಗುಲಾಂ ಮುಂತಾಕ್. ಐತಿಹಾಸಿಕವಾಗಿ ಮಹತ್ವದ ನಗರವಾದರೂ ಸಮಕಾಲೀನವಾಗಿ ‘ಹಿಂದುಳಿದ’ ಹಣೆಪಟ್ಟಿ ಕಟ್ಟಿಕೊಂಡ ಬೀದರ್‌ನಂತಹ ಪುಟ್ಟ ಪಟ್ಟಣದಲ್ಲಿ ಇರುವ ಅದ್ಭುತ ವ್ಯಕ್ತಿ.

ಕ್ಯಾಮರಾ ಹುಚ್ಚಿನ ಈ ಛಾಯಾಗ್ರಾಹಕ ಜಗತ್ತಿನಲ್ಲಿಯೇ ಅತಿ ದೊಡ್ಡ ನೆಗೆಟಿವ್ ಒಡೆಯ. ಅವರ ಬಳಿ ಇರುವ ಎಂಟು ಅಡಿ ಅಗಲದ ನೆಗೆಟಿವ್‌ನಷ್ಟು ದೊಡ್ಡ ನೆಗೆಟಿವ್ ಜಗತ್ತಿನಾದ್ಯಂತ ಬೇರೆಲ್ಲಿಯೂ ಇಲ್ಲ. ನೆಹರೂ ಕಾಲದ ದೆಹಲಿಯ ಛಾಯಾಗ್ರಾಹಕ ಎ.ಆರ್.ದತ್ತಾ ಸಂದರ್ಶನವೊಂದರಲ್ಲಿ ‘ನನ್ನ ಹತ್ತಿರ ಇರುವ ಆರು ಅಡಿ ಅಗಲದ ನೆಗೆಟಿವ್ ಅತ್ಯಂತ ದೊಡ್ಡದು’ ಎಂದು ತಿಳಿಸಿದ್ದರು. ಆದರೆ, ಮುಂತಾಕ್ ಬಳಿ ಅದಕ್ಕಿಂತ ಎರಡು ಅಡಿ ಹೆಚ್ಚು ಅಗಲವಾಗಿರುವ ನೆಗೆಟಿವ್ ಇದೆ.

ಸಾಲಾಗಿ 400ಕ್ಕೂ ಹೆಚ್ಚು ಜನ ಕುಳಿತಾಗ ಕ್ಲಿಕ್ಕಿಸಿದ ಗ್ರೂಪ್ ಫೋಟೊ (ಸಮೂಹ ಚಿತ್ರ)ದಲ್ಲಿನ ಪ್ರತಿಯೊಬ್ಬರನ್ನೂ ನಿಚ್ಚಳವಾಗಿ ಕಾಣಿಸುವಂತೆ ಒಂದೇ ಕಾಲಕ್ಕೆ ಸೆರೆ ಹಿಡಿಯಬಲ್ಲರು ಮುಂತಾಕ್. ಆ ಚಿತ್ರದ ನೆಗೆಟಿವ್‌ನಿಂದ ಪ್ರತಿಯೊಬ್ಬ ವ್ಯಕ್ತಿಯ ಪ್ರತ್ಯೇಕ ಛಾಯಾಚಿತ್ರ ಪ್ರಕಟಿಸಬಹುದು. ಸಮೂಹದಲ್ಲಿರುವ ಎಲ್ಲರ ಮುಖದ ಮೇಲಿನ ನೆರಿಗೆಗಳು, ಹಣೆಯ ಮೇಲಿನ ಬೆವರ ಹನಿಯನ್ನೂ ಈ ಕ್ಯಾಮರಾ ದಾಖಲಿಸುತ್ತದೆ.

ಕೇವಲ ಇವಷ್ಟೇ ಅಲ್ಲ, ಅಂತಹ ಹತ್ತು ಹಲವು ವೈಶಿಷ್ಟ್ಯಗಳ ಆಗರ ಈ ಮುಂತಾಕ್. ಪರಸ್ಪರ ಮುಖಾಮುಖಿಯಾಗಿರುವ ಮುಂಬೈನ ಇಂಡಿಯಾಗೇಟ್ ಮತ್ತು ತಾಜಮಹಲ್ ಹೊಟೆಲ್‌ಗಳನ್ನು ಏಕಕಾಲಕ್ಕೆ ಒಂದೇ ನೆಗೆಟಿವ್ ಮೇಲೆ ಸೆರೆ ಹಿಡಿದಿರುವ ಕೌಶಲಿ. ಅದು ಮತ್ತು ಅಂತಹ ಹಲವು ಕೌತುಕಮಯ ಛಾಯಾಗ್ರಹಣ ಮಾಡುವುದು ಸಾಧ್ಯವಾದದ್ದು ಮುಂತಾಕ್ ಬಳಿ ಇರುವ ‘ಮ್ಯಾಜಿಕ್ ಬಾಕ್ಸ್’ನಿಂದ.

ಶತಮಾನದಷ್ಟು ಹಳೆಯದಾದ ಸರ್ಕ್ಯೂಟ್ ಕ್ಯಾಮರಾ ಅದು. ಅದನ್ನು ಟ್ರೈಪಾಡ್ ಸ್ಟ್ಯಾಂಡ್ ಮೇಲಿಟ್ಟು 180 ಡಿಗ್ರಿ ವರೆಗೆ ತಿರುಗಿಸಿ ಎದುರಿಗಿರುವ ವಸ್ತು-ವ್ಯಕ್ತಿಗಳನ್ನು ಸೆರೆ ಹಿಡಿಯುವ ಸಾಮರ್ಥ್ಯ ಅದಕ್ಕಿದೆ. ಗುಜರಿವಸ್ತುಗಳನ್ನು ಮಾರಾಟ ಮಾಡುವ ಮುಂಬೈನ ಚೋರ್ ಬಜಾರ್‌ನಿಂದ ತಂದ ಕ್ಯಾಮರಾ ಅದು. ಅತ್ಯಂತ ಕಡಿಮೆ ಬೆಲೆಯಲ್ಲಿ ಅಂದರೆ,

ತೂಕಕ್ಕೆ ಹಾಕುವ ಬೆಲೆಯಲ್ಲಿ ತಂದ ಕ್ಯಾಮರಾಕ್ಕೆ ವಿವಿಧ ಲೆನ್ಸ್‌ಗಳನ್ನು ಹಾಕಿ 'ಪ್ರಯೋಗ' ನಡೆಸಿದರು. ಆಶ್ಚರ್ಯಕರ ರೀತಿಯಲ್ಲಿ ಕ್ಯಾಮರಾ ಕಾರ್ಯ ನಿರ್ವಹಿಸಲು ಆರಂಭಿಸಿತು.

ಆಕ್ಸಫರ್ಡ್ ವಿಶ್ವವಿದ್ಯಾಲಯದಲ್ಲಿ ಗ್ರೂಪ್ ಫೋಟೊ ತೆಗೆಯುವುದಕ್ಕಾಗಿ ಬಳಸಲಾಗುತ್ತಿದ್ದ ಮಾದರಿಯ ಕ್ಯಾಮರಾ ಅದು. ನಿಷ್ಕ್ರಿಯ ಎಂದೇ ಭಾವಿಸಿ ಗುಜರಿಗೆ ಹಾಕಲಾಗಿತ್ತು. 'ಏಕಕಾಲಕ್ಕೆ ನಾರ್ಮಲ್, ಟೆಲಿ ಮತ್ತು ವೈಡ್ ಲೆನ್ಸ್ ಆಗಿ ಬಳಸುವ ಅಪರೂಪದ ಲೆನ್ಸ್ ಉಪಯೋಗಕ್ಕೆ ಬರಬಹುದು ಎಂದು ಅಂದಾಜು ಮಾಡಿ 'ಕ್ಯಾಮರಾ'ವನ್ನೇ ಕೇವಲ 15000 ರೂಪಾಯಿಗೆ ಖರೀದಿಸಿದೆ' ಎನ್ನುತ್ತಾರೆ ಮುಂತಾಕ್. ಆಗ ಅವರಿಗೆ ಸುತ್ತಮುತ್ತ ತಿರುಗುವ ಸಾಮರ್ಥ್ಯ ಈ ಕ್ಯಾಮರಾಕ್ಕೆ ಇರಬಹುದು ಎಂದು ಗೊತ್ತಿರಲಿಲ್ಲ.

ಮುಂಬೈನಿಂದ ಬೀದರ್‌ಗೆ ತಂದ ಮೇಲೆ ಮುಂತಾಕ್ ಕ್ಯಾಮರಾ ಜೊತೆ ಒಡನಾಟದಲ್ಲಿ ಹಲ ಹೊಸ ಅಂಶಗಳನ್ನು ಗುರುತಿಸಲು ಆರಂಭಿಸಿದರು. ಮತ್ತು ಅದರ ಜೊತೆ ಹಲವು ಪ್ರಯೋಗಗಳನ್ನೂ ನಡೆಸಿದರು. ಬೇರೆ ಬೇರೆ ಲೆನ್ಸ್ ಹಾಕಿ ಸಾಧ್ಯತೆಗಳನ್ನು ಪರೀಕ್ಷಿಸಿದರು. ಅವರೇ ಆಶ್ಚರ್ಯ ಪಡುವ ರೀತಿಯಲ್ಲಿ ಫಲಿತಾಂಶ ಬರಲಾರಂಭಿಸಿತು. ಈ ಕಾರಣಗಳಿಗಾಗಿಯೇ ಮುಂತಾಕ್ ಅವರನ್ನು ಕೇವಲ ಛಾಯಾಗ್ರಾಹಕ ಎಂದು ಗುರುತಿಸುವ ಬದಲು 'ಫೋಟೋ- ಎಂಜಿನಿಯರ್' ಎಂದು ಕರೆಯುವುದು ಸೂಕ್ತ.

ಛಾಯಾಗ್ರಾಹಕನಾಗಿ ಬೀದರ್‌ನಲ್ಲಿ ಜನಪ್ರಿಯನಾಗಿದ್ದರೂ. ತನ್ನ ಕ್ಯಾಮರಾ ಮೂಲಕ 'ದೊಡ್ಡ ಗ್ರೂಪ್ ಫೋಟೊ' ತೆಗೆಯಬಹುದು ಎಂದಾಗ ಬಹಳಷ್ಟು ನಂಬಲಿಲ್ಲ. ಕೊನೆಗೂ ಅವರು ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನವರನ್ನು ಒಪ್ಪಿಸುವಲ್ಲಿ ಯಶಸ್ವಿಯಾದರು. 100 ಜನರ ಸಮೂಹವನ್ನು ಕ್ಲಿಕ್ಕಿಸಿದ ನಂತರ ಮುಂತಾಕ್ ಅವರಿಗೆ ತಮ್ಮ ಮೇಲೆಯೇ ಭರವಸೆ ಮೂಡಲು ಆರಂಭವಾಯಿತು.

ನಂತರ ಕಾಲೇಜೊಂದರ 300 ವಿದ್ಯಾರ್ಥಿಗಳ ಗ್ರೂಪ್ ಫೋಟೊ ತೆಗೆದರು. ಮುಂತಾಕ ಅವರ ಸಾರ್ವಜನಿಕವಾಗಿ ತಮ್ಮ ಗ್ರೂಪ್ ಫೋಟೊ ಕೌಶಲ್ಯ ತೋರಿಸುವ ಅವಕಾಶ ಸಿಕ್ಕದ್ದು 1994ರಲ್ಲಿ. ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಮುಖ್ಯಮಂತ್ರಿ ವೀರಪ್ಪಮೊಯ್ಲಿ ಮತ್ತು 300ಜನ ಶಾಸನಸಭೆಯ ಸದಸ್ಯರ ಚಿತ್ರ ಸೆರೆಹಿಡಿದರು. ಆ ಚಿತ್ರದಲ್ಲಿ ವಿಧಾನಸೌಧದ ಜೊತೆಗೆ ಹೈಕೋರ್ಟ್ ಕೂಡ ದಾಖಲಾಗಿದೆ.

ಇಂತಹ ಅದ್ಭುತ ಕ್ಯಾಮರಾ ತನ್ನ ಸಂಗ್ರಹದಲ್ಲಿರಲಿ ಎಂದು ಮುಂಬೈನ ಛಾಯಾಗ್ರಹಣ ಮ್ಯೂಸಿಯಂ ಈ ಕ್ಯಾಮರಾಕ್ಕೆ ಎರಡು ಲಕ್ಷ ರೂಪಾಯಿ ಕೊಡಲು ಮುಂದೆ ಬಂದಿತ್ತು. ಆದರೆ, ಮುಂತಾಕ ಹಣಕ್ಕಾಗಿ ಅದನ್ನು ತನ್ನಿಂದ ಬೇರ್ಪಡಿಸಿಕೊಳ್ಳಲು ಸಿದ್ಧರಿಲ್ಲ. ಮುಂತಾಕ್ ಅವರ ಬಳಿ ಕೇವಲ ಅದೊಂದೇ ಕ್ಯಾಮರಾ ಇಲ್ಲ. ಅತ್ಯಂತ ಹಳೆಯ ಕ್ಯಾಮರಾಗಳಿಂದ ಹಿಡಿದು ಅತ್ಯಾಧುನಿಕ ಡಿಜಿಟಲ್ ಕ್ಯಾಮರಾಗಳು ಅವರ ಸಂಗ್ರಹದಲ್ಲಿವೆ.

ವಿವಿಧ ಕಂಪೆನಿಗಳಿಂದ ಬೇರೆ ಬೇರೆ ಕಾಲದಲ್ಲಿ ತಯಾರಾದ 100ಕ್ಕೂ ಹೆಚ್ಚು ಕ್ಯಾಮರಾಗಳನ್ನು ಮುಂತಾಕ್ ಖರೀದಿಸಿದ್ದಾರೆ. ಒಂದು ಕ್ಯಾಮರಾದ ಬಿಡಿಭಾಗ ಮತ್ತೊಂದಕ್ಕೆ ಹಾಕುವುದು ಹಾಗೂ ಒಂದರ ಲೆನ್ಸ್ ಮತ್ತೊಂದಕ್ಕೆ ಹಾಕಿ 'ಪ್ರಯೋಗ' ಮಾಡುವ ಹವ್ಯಾಸ ಅವರದು. ಆ ಎಲ್ಲ ಕ್ಯಾಮರಾಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ನೋಡುವುದೇ ಕಷ್ಟ.

ಮುಂತಾಕ ಅವರ ತಂದೆ ನಿಜಾಂರ ಕಾಲದಲ್ಲಿ ಪೊಲೀಸ್ ಫೋಟೊಗ್ರಾಫರ್ ಆಗಿದ್ದರು. ತಂದೆಯಿಂದ ಬಳುವಳಿಯಾಗಿ ಬಂದ ಕಲೆಯನ್ನು ಮುಂದುವರೆಸಿದ ಮುಂತಾಕ್ ಅವರು ಅದನ್ನು ಬೆಳೆಸಿದರು. ಅವರ ಸಂಗ್ರಹದಲ್ಲಿರುವ ಅಪರೂಪದ ನೆಗೆಟಿವ್ ಮತ್ತು ಫೋಟೊಗಳನ್ನು ನೋಡುವುದೇ ಮೈ ನವಿರೇಳಿಸುವ ಅನುಭವ. ಗಾಜಿನ ಮೇಲೆ ಸಿಲ್ವರ್ ನೈಟ್ರೇಟ್ ಲೇಪಿಸಿ ಮಾಡಲಾದ ನೆಗೆಟಿವ್‌ಗಳೂ ಅವರ ಸಂಗ್ರಹದಲ್ಲಿವೆ.

ಬಹುತೇಕ ಎಲ್ಲ ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ರಾಷ್ಟ್ರಪತಿಗಳ ಛಾಯಾಚಿತ್ರಗಳನ್ನು ಮುಂತಾಕ್ ಸೆರೆ ಹಿಡಿದಿದ್ದಾರೆ. ಬೀದರ್ ವಿಮಾನ ನಿಲ್ದಾಣದಲ್ಲಿ ಕ್ಲಿಕ್ಕಿಸಿದ ನೆಹರೂ ಚಿತ್ರ ಮುಂತಾಕ್ ಅವರ ಅತ್ಯಂತ ಮೆಚ್ಚಿನ ಫೋಟೊ. ಹಾಗೆಯೇ ಲಾತೂರನಲ್ಲಿ ಸಂಭವಿಸಿದ ಭೂಕಂಪದ ಛಾಯಾಚಿತ್ರಗಳು ಮತ್ತು ತಡೋಳದ ಹತ್ತಿರ ನಡೆದ ಬೆಂಕಿ ದುರಂತದ ಚಿತ್ರಗಳು ಕರುಳು ಕಿವುಚುವಂತಿವೆ. ಹಾಗೆಯೇ ಬೀದರ್‌ನ ಐತಿಹಾಸಿಕ ಸ್ಮಾರಕಗಳನ್ನು ಮುಂತಾಕ್ ಸೆರೆ ಹಿಡಿದಿರುವ ರೀತಿಯೇ ಅನನ್ಯ.

'ಒಂದು ಕಾಲಕ್ಕೆ ಮನಸ್ಸು ಮಾಡಿದ್ದರೂ ಮುಂಬೈ ಅಥವಾ ಹೈದಾರಾಬಾದ್‌ಗೆ ಹೋಗಿ ನೆಲೆಸಬಹುದಿತ್ತು. ಆದರೆ, ಬೀದರ್ ಮೇಲಿನ ಪ್ರೀತಿ ಮತ್ತು ಈ ನೆಲದ ಮೇಲಿನ ಅಭಿಮಾನ ನನ್ನನ್ನು ಹೊರಗೆ ಹೋಗಲು ಬಿಡಲಿಲ್ಲ. ಎಲ್ಲಿಗೆ ಹೋದರು ಎರಡ್ಮೂರು ದಿನದಲ್ಲಿ ಬೀದರ್‌ಗೆ ಮರಳುತ್ತೇನೆ' ಎನ್ನುತ್ತಾರೆ ಮುಂತಾಕ. ಅವರ ಸಹೋದರ ಮತ್ತು ಕುಟುಂಬದ ಸದಸ್ಯರೆಲ್ಲ ವಿದೇಶದಲ್ಲಿದ್ದಾರೆ. ಒಬ್ಬಂಟಿಯಾಗಿ ವಾಸಿಸುವ ಅವರ ಜೊತೆಗಾರ ಎಂದರೆ ಕ್ಯಾಮರಾ ಮತ್ತು ಅವುಗಳ ಲೆನ್ಸ್‌ಗಳು.

70 ವಸಂತಗಳನ್ನು ಪೂರೈಸಿದ್ದರೂ ಕ್ಯಾಮರಾಬ್ಯಾಗ್ ಹೆಗಲಮೇಲೆ ಹಾಕಿಕೊಂಡು ಸೈಕಲ್ ಮೇಲೆ ಸಂಚರಿಸುತ್ತ ಚಿತ್ರ ಕ್ಲಿಕ್ಕಿಸುವ ಹವ್ಯಾಸ ಕೈ ಬಿಟ್ಟಿಲ್ಲ. ಸಂಕೋಚ ಸ್ವಭಾವದ ಮುಂತಾಕ ಅವರು ಸದಾ ಎಲೆ ಮರೆಯ ಕಾಯಿಯಂತೆಯೇ ಉಳಿಯಬಯಸುತ್ತಾರೆ. ಅವರು ತಮ್ಮ ಬಗ್ಗೆ ಮತ್ತು ತಮ್ಮ ಬಳಿ ಇರುವ ಕ್ಯಾಮರಾಗಳ ಕುರಿತು ಮಾತನಾಡುವುದೇ ಅಪರೂಪ.

ದೇವು ಪತ್ತಾರ

(ಪ್ರಜಾವಾಣಿ, ಕರ್ನಾಟಕ ದರ್ಶನ, 31ನೇ ಆಗಸ್ಟ್ 2006)

## ಗುಲಾಮ್ ಮುಂತಾಕ್

ಅತ್ಯುತ್ತಮ ಪತ್ರಿಕಾ ಛಾಯಾಗ್ರಾಹಕ ಗುಲಾಮ್ ಮುಂತಾಕ್ ಅವರು 1939ರಲ್ಲಿ ಬೀದರ್‌ನಲ್ಲಿ ಜನಿಸಿದರು. ಛಾಯಾಗ್ರಹಣವನ್ನ ತಂದೆ ಗುಲಾಮ್ ಮುಸ್ತಫಾ ಅವರಲ್ಲಿ ಕಲಿತರು. ಶ್ರೀ ಗುಲಾಮ್ ಮುಂತಾಕ್ ಅವರು ವೃತ್ತಿಯನ್ನು ಆರಂಭಿಸಿದಾಗ ಛಾಯಾಚಿತ್ರವನ್ನು ಡೆವಲೆಪ್ ಮಾಡಲು ಬೀದರ್‌ನಲ್ಲಿ ವಿದ್ಯುಚ್ಛಕ್ತಿಯೂ ಇರಲಿಲ್ಲ. ಡೆವಲೆಪ್ ಮಾಡುವ ಕೆಲಸವನ್ನು ಲಾಟೀನು ಬೆಳಕಿನಲ್ಲಿಯೂ ಮತ್ತು ಫೋಟೊ ಎನ್‌ಲಾರ್ಜ್ ಮಾಡುವುದನ್ನು ಸೂರ್ಯನ ಬೆಳಕಿನಲ್ಲಿಯೂ ಮಾಡುವ ಪರಿಸ್ಥಿತಿ. 0 ಡಿಗ್ರಿಯಿಂದ 180 ಡಿಗ್ರಿ ವರೆಗೆ ಛಾಯಾಚಿತ್ರ ತೆಗೆಯುವ ವಿವಿಧ ರೀತಿಯ ಹೊಸ ಮತ್ತು ಹಳೆಯ ಕ್ಯಾಮರಾಗಳನ್ನು ಸಂಗ್ರಹಿಸಿ ಸರ್ಕ್ಯೂಟ್ ಕ್ಯಾಮರಾಗಳಂತೆ ಕೆಲಸ ಮಾಡುವ ಹಾಗೆ ರೂಪಿಸುತ್ತಿದ್ದರು. ಹಾಗೂ 0 ಡಿಗ್ರಿಯಿಂದ 360 ಡಿಗ್ರಿಯವರೆಗೆ ಛಾಯಾಚಿತ್ರ ತೆಗೆಯಲು ಈ ಸರ್ಕ್ಯೂಟ್ ಕ್ಯಾಮರಾಗಳನ್ನು ಮಾರ್ಪಡಿಸಲು ಪ್ರಯತ್ನಿಸುತ್ತಿದ್ದರು. ಈ ತಂತ್ರ ಕೌಶಲದಿಂದ ಗುಲಾಮ್ ಮುಂತಾಕ್ ಅವರು ಕೆಲವು ವಿಶಿಷ್ಟ ಛಾಯಾಚಿತ್ರಗಳನ್ನು ತೆಗೆದ ಹಿರಿಮೆಗೆ ಪಾತ್ರರು.

ಛಾಯಾಚಿತ್ರ ಇತಿಹಾಸದಲ್ಲಿ ಮುಂಬಯಿಯ ರಸ್ತೆ, ಸಮುದ್ರದ ಭಾಗ, ಗೇಟ್ ವೇ ಆಫ್ ಇಂಡಿಯಾ, ತಾಜಮಹಲ್ ಹೋಟೆಲು ಒಳಗೊಂಡಂತೆ ಸ್ವಾಮಿ ವಿವೇಕಾನಂದರ ಪತಿಮೆಯಿಂದ ಹಿಡಿದು ಶಿವಾಜಿ ಪತಿಮೆಯವರೆಗೆ ಒಂದೇ ಸಲಕ್ಕೆ ತೆಗೆದ ಛಾಯಾಚಿತ್ರ ಅತ್ಯಂತ ದೀರ್ಘ ಛಾಯಾಚಿತ್ರವಾಗಿದೆ. ಕ್ಯಾಮರಾಗಳ ದುರಸ್ತಿ ಕಾರ್ಯವನ್ನು ಆರಂಭಿಸಲು ವಾರ್ತಾ ಇಲಾಖೆಯ ಪತ್ರಿಕಾ ಛಾಯಾಗ್ರಾಹಕರಾಗಿ ನಾಮ ನಿರ್ದೇಶನಗೊಂಡಾಗ ಕ್ಯಾಮರಾ ತಂತ್ರಜ್ಞಾನದ ಬಗ್ಗೆ ಹೆಚ್ಚೆಚ್ಚು ಅರಿಯಲು ಸಾಧ್ಯವಾಯಿತು. ಛಾಯಾಗ್ರಹಣ ತಂತ್ರಜ್ಞಾನದಲ್ಲಿ ಅಪಾರ ಕೌಶಲ ಇರುವ ಅನನ್ಯ ಛಾಯಾಗ್ರಾಹಕ ಗುಲಾಮ್ ಮುಂತಾಕ್ ಅವರಿಗೆ ಪತ್ರಿಕೋದ್ಯಮ ವಿಭಾಗದಲ್ಲಿ 2004ರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

(ಕರ್ನಾಟಕ ರಾಜ್ಯ ಪ್ರಶಸ್ತಿ- 2004, ಪ್ರಕಟಣೆ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ)

# Fusing magic and Reality

IMAGINE a century-old camera Producing this panoram-ic view of the nation's swankiest address. Or think of capturing 300 faces of out-going legislators sitting in front of Bangalore's stately Vidhana Soudha, etching to relief even the wrinkles and veins over their faces intact. The pictures must evoke wondrous gasps. Capturing this view in one shot must involve fusing magic and reality. Or it is quite likely to be taken for a patch-work of photographs. No, the view was captured on a single revolving film by a nearly century-old Circuit Camera. And the man who makes the junk box work, and work so flawlessly, is Ghulam Muntaqua from Bidar, a remote town in North Karnataka that was once the capital of Bahamani Sultanate of Deccan.

Ghulam Muntaqa's pas-sive demeanour hides more than what it reveals. Locked in a prison of silence, this 'photo engi-neer' has put many an old camera to work, all with stunning results. 'Something has always been working behind his somnolent exterior. The queasy smell *of* the embalmed air of his stu-dio-cum-residence in the narrow bylanes of the sleepy town of Bidar sure-ly carries an air *of* disbe-lief about Muntaqua's unquenchable thirst for sophistry in photography.

For its looks, Muntaqa's Circuit Camera can be dismissed as a junk box, a contraption worth nothing. But take a hard look at the machine. It still revolves flawlessly on a copper gear mounted over a tripod, pans over a wide area and captures a

panoramic view of the surroundings. Even more surprisingly, the nearly century old camera transfers the view on a film capable of being enlarged into wall-sized photographs, a size mostly reserved for murals. And the details are perfect, capturing even the veins of leaves, or glistening beads of sweat rolling down faces or the wrinkles of skin. And if it happens to be a group of, say 400 people, each face is distinctly recognizable.

Yet the question whether one should marvel at the man or the machine remains unanswered? Looking at the deadly combine the answer is perhaps both, for the credit must be equally shared by Ghulam Muntaqua. But for this shutterbug, this old camera would, in all likelihood, been consigned to junkyard. Muntaqua virtually salvaged it from a scrape lot up for sale in Mumbai's Chor Bazar at the cost of metal some 15 years ago. Today after putting it back into use, Muntaqua refuses to part with it even at a price of rupees two lakhs. Believe it, the offer came from a photography museum in Mumbai.

What sets this camera and the cameraman apart? The very fact that this antique of a camera still functions, capable of absorbing a 180 degree view of the horizon and transferring scenery onto bromides that are well worth decorating drawing rooms is in itself something very rare. Says Muntaqua, the proud owner: "I had picked up the box camera from the Chor Bazar merely for its unique lens which can be simultaneously used as normal, tele and wide lens for rupees 1500. Records showed that it had been earlier used in Oxford University for group photographs. "I had never imagined that it could be a circuit camera capable of revolving and capturing a 180 degree view. I first used it for a group photograph of the 100-member staff of

the Bidar District Central Cooperative Bank. The clearly distinguishable faces on the nine feet by one feet photograph boosted my confidence. It has never failed me since then. Next photograph covered a group of 300 students of an outgoing batch of a college in Bidar." The only time he demonstrated his skills publicly in Bangalore was in 1994 when chief minister Veerappa Moily was snapped along with nearly 300 legislators in the backdrop of the estately Vidhana Soudha. But more than his photography, he and his relic camera aroused the curiosity of the lensmen in the state capital. He was himself the object of many a photographs the next day.

A turning point came when Muntaqua's antique camera produced a panoramic view of the famous Gateway of India and its surroundings and his principals, Architect Baghban and Baghban Associates asked him to come out with the panorama on the colour film. Since then Muntaqua has been working on transferring his skill onto the colour film and says "the breakthrough is imminent".

Son of a police photographer of the erstwhile Nizam state, Muntaqua took to photography very early in life. Says he reminiscing the olden days: "Those were the days when the negatives were taken on glass coated with silver nitrate. Today Muntaqua can boast of nearly 50 cameras in his collection. Most of these came through tough haggling at the Bombay's Chor Bazar known for rich pickings by ace photographers.

Shy of publicity, Muntaqa keeps a low profile. Though quick to capture on lens several events such as Latur's quake and the bizarre gas tanker accident at Tarola near Bidar (killing 100 persons), he has been totally averse to encashing his skills. Bidar

journalist Quazi Arshad Ali, editor *Bidar ki Awaz*, a Hindi daily, says copyright for Muntaqua's Gateway of India photograph could have been bought against lakhs of rupees, but Muntaqua was pursuing altogether different dreams, i.e., of inducting colour into his skills on the old camera. Already 60, Muntaqua however is determined to carry on with his mission.

M.A. Siraj

Deccan Herald, Sunday Herald 19th August, 2001

## Negative generates positive interest

GULBARGA, DHNS: The 'World Photography Day' function held in Gulbarga on Sunday was unlike other programmes. The 'world's biggest' negative was exhib-ited on the occasion.

And the photographer to use this negative, which is nearly nine feet in length, is Ghulam Munthak of Bidar. Munthak, who is 70 years now, clicked the photo of the Mumbai Gateway of India and the Taj Hotel opposite, on a single nine-feet nega-tive covering 180 degrees, in 1962. This negative is likely to be included in the Guin-ness Book of World Records as the world's largest negative. A claim regarding this has been made by Munthak to the Guinness World Records Insurance.

Munthak has also shot pictures of the Vidhana Soudha and the High Court building opposite on a single negative, and has taken the photograph of all the MLAs sitting together in front

of the Vidhana Soudha when Mr Veerappa Moily was the chief minister, by using nine-feet negatives.

He has also clicked the photo of late prime minister Jawaharlal Nehru, along with his Cabinet In 1962. And except for Lal Bhadur Sashtri, Munthak has clicked the photos of all Indi-an prime ministers till date.

On Sunday, Munthak was felicitated by Agriculture Marketing Minister Sharan-abasappagouda Darshnapur at a 'World Photography Day' function organised by the Gulbarga District Press Photographers' Association, and the Information'Depart-ment here. An exhibition of Munthak's collection was also organised.

Deccan Herald, 11th September, 2006

## Muntaqua, man behind the veil

Gulbarga: True that a photograph speaks a thousand words, but what about photographers, who capture mesmerising events which spellbind viewers.

A 67-year-old Gulam Muntaqua from Bidar captured remarkable pho-tographs that could leave anyone stunned.

The introvert photographer is popular not just for capturing nostalgic photos, but also for owning a big camera with 8 ft wide photo film, which he claims to be the biggest negative of the world. Once he read in a news paper tha a Delhi based Photographer AR Dutta owned a camera with a 6ft wide

photo film, which, he claimed to be the biggest. Muntaqua plans to register claim in Guinness Book of World Records.


'I purchased this camera from Chor Bazaar in Mumbai about 15 years ago for Rs 1500. The camera can capture a picture of over 400 people in one group' he said. It took over a whole year to learn techniques of the camera. Whene he met with a expert in Mumbai to understanding of camera, he was told that the camera was among five cameras of its kind in the world. He resisted an offer of Rs 2 lakh to sell the camera. Passion for phtotography originated from childhood as his father was official photographer during Nizam rule.

One of his most remarkable moments of life was capturing photograph of the first Prime Minister of India Jawaharlal Nehru in 1962. He captured photos of all Prime Ministers except Lal Bahaddur Shashtry.


A group photo of over 300 staff of Bidar Co-operative Bank and that Gateway of India facing Hotel Taj are among the rarest of this ocuvre.

While he can capture photo of 180 degree angle, that is not possible in other cameras. He even plans to develop a technique to capture a photo at 360 degree angle.

-Firoz Rozindar,
The Vijay Times, 11th September, 2006




001 ಹೈದರಾಬಾದ್‌ನ ನಿಜಾಂರ ಪ್ರಧಾನಿಯಾಗ್ಗಿದ ಮಹಾರಾಜ ಕಿಷನ್ ಪ್ರಸಾದ್ ಅವರು ಬೀದರ್ ಭೇಟಿ ನೀಡಿದ್ದ ಸಂದರ್ಭದಲ್ಲಿ ಮುಂತಶಾ ಅವರ ತಂದೆ ಮುಸ್ತಫಾ ಸೆರೆ ಹಿಡಿದ ಅಪರೂಪದ ಚಿತ್ರ. (1935)




002 ಗುಲಾಂ ಮುಂತಕಾ ಅವರ ಬೀದರ್ ಮನೆಯ ಹಳೆಯ ಚಿತ್ರ.
ಗಾಜಿನ ನೆಗೆಟಿವ್‌ನಲ್ಲಿ ದಾಖಲಾಗಿದ್ದ ಈ ಚಿತ್ರವನ್ನು ಮುಂತಕಾ
ವಿಶೇಷ ಪರಿಶ್ರಮ ವಹಿಸಿ ಮುದ್ರಿಸಿ ನೀಡಿದ್ದಾರೆ. (1920)



೧೧೩. ನಿಜಾಂರ ಆಡಳಿತದಲ್ಲಿ ಪೊಲೀಸ್ ಫೋಟೋಗ್ರಾಫರ್ ಆಗಿದ್ದ ಗುಲಾಂ ಮುಸ್ತಫಾ (ಮುಂತಕಾ ಅವರ ತಂದೆ) (೧೯೫೫).



೦೦೪ ತಮ್ಮ ಮ್ಯಾಜಿಕ್ ಬಾಕ್ಸ್‌ನಂತಹ ಕ್ಯಾಮರಾ ಬಳಸಿ ಫೋಟೊ ಚಿತ್ರೀಕರಿಸುತ್ತಿರುವ ಮುಂತಕಾ ಅವರ ಹಳೆಯ ಚಿತ್ರ. (೧೯೯೯)



೧೦೫ 'ಜಗತ್ತಿನ ಅತಿ ದೊಡ್ಡ ನೆಗೆಟಿವ್'
ಪರಿಶೀಲಿಸುತ್ತಿರುವ ಗುಲಾಂ ಮುಂತಕಾ. (೨೦೦೭)




೧೦೭ ಎರಡ್ಮೂರು ಚಿತ್ರ ಜೋಡಿಸಿ ಹೊಲಿದ್ದದಲ್ಲ;
ಒಂದೇ ನೆಗೆಟಿವ್‌ನಿಂದ ಮುದ್ರಿಸಲಾದ ಉದ್ದದ ಫೋಟೋ ಜೊತೆ ಮುಂತಕಾ. (೨೦೦೭)




೦೦೮ ಮುಂತಕಾ ಫೋಟೊ ಕ್ಲಿಕ್ಕಿಸುವ ಮತ್ತೊಂದು ಭಂಗಿ. (೨೦೦೬)




೦೦೭ ಬೀದರ್‌ನ ಕೋಟೆ ಆವರಣದಲ್ಲಿ ಡಿಜಿಟಲ್ ಕ್ಯಾಮರಾ ಬಳಸಿ
ಸ್ಮಾರಕದ ಫೋಟೊ ಕ್ಲಿಕ್ಕಿಸುತ್ತಿರುವಾಗ 'ಸೆರೆ ಸಿಕ್ಕ' ಮುಂತಕಾ. (೨೦೦೭)




೦೦೯ ಹೆಗಲಿಗೆ ಕ್ಯಾಮರಾ ಬ್ಯಾಗ್ ಹಾಕಿ ಹೊರಟ ಮುಂತಕಾರ
ಸೈಕಲ್ ಸವಾರಿ ಬೀದರ್‌ನ ನಿತ್ಯದ ದೃಶ್ಯ. (೨೦೦೬)




೧೧೦ ಮುಂಶಕಾರ ಸಂಗ್ರಹದಲ್ಲಿರುವ ನೂರಾರು
ಕ್ಯಾಮರಾ ಮತ್ತು ವೈವಿಧ್ಯಮಯ ಲೆನ್ಸ್‌ಗಳು (೨೦೦೬)



೧೧೩. ನೆಹರೂ ಅವರ ಭಾವಚಿತ್ರ




೦೧೪ ರಾಷ್ಟ್ರಪತಿಗಳಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಅವರು ಬೀದರಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕ್ಲಿಕ್ಕಿಸಲಾದ ಚಿತ್ರ. ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಬಿ.ಕಿಷನ್‌ರಾವ್. (೧೯೫೪)



೧೧೧ ಮುಂಬೈನಲ್ಲಿ ಎದುರು ಬದುರಾಗಿರುವ ಇಂಡಿಯಾಗೇಟ್ ಮತ್ತು ತಾಜಮಹಲ್
ಹೋಟೆಲ್‌ಗಳೆರಡನ್ನು ಒಂದೇ ಫ್ರೇಮ್‌ನಲ್ಲಿ ಸೆರೆ ಹಿಡಿದಿರುವ ಕೌಶಲ್ಯ. (೧೯೮೪)




ಅತಿ ಮುಂತಕಾಗೆ ಪ್ರಿಯವಾದ ನೆಹರೂ ಅವರು ಬೀದರ್‌ಗೆ ಭೇಟಿ ನೀಡಿದಾಗಿನ ಚಿತ್ರ.
ಬಿ.ಡಿ.ಜತ್ತಿ ಮತ್ತು ಗೋಪಾಲರಾವ ಮುಡಬಿ ಚಿತ್ರದಲ್ಲಿದ್ದಾರೆ. (೧೯೬೨)



೦೧೫ ಬೀದರ್ ಜಿಲ್ಲೆಯ ಹುಲಸೂರು ಗ್ರಾಮಕ್ಕೆ ರಾಷ್ಟ್ರಪತಿ ವಿ.ವಿ. ಗಿರಿ ಅವರು ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಆತ್ಮೀಯ ಅಪ್ಪುಗೆ ಮುಂತಕಾ ಕಣ್ಣಿಗೆ 'ಸೆರೆ' ಸಿಕ್ಕಿದ್ದು ಹೀಗೆ. (೧೯೬೭)



೧೯೭ ರಾಷ್ಟ್ರಪತಿ ವಿ.ವಿ. ಗಿರಿ ಅವರೊಂದಿಗೆ ಹೆಜ್ಜೆ ಹಾಕುತ್ತಿರುವ
ಬೀದರ್ ಎಸ್. . ಆಗಿದ್ದ ಜೋಗಿಂದರ್ ಸಿಂಗ್. (೧೯೭೨)



೦೧೭ ಪ್ರಧಾನಿಯಾಗಿದ್ದ ಇಂದಿರಾಗಾಂಧಿ, ಮುಖ್ಯಮಂತ್ರಿ ದೇವರಾಜು ಅರಸು, ಕೇಂದ್ರ ಸಚಿವರಾಗಿದ್ದ ಬಿ.ಶಂಕರಾನಂದ ಮತ್ತು ಸಚಿವ ದೇವೇಂದ್ರಪ್ಪ ಘಾಳಿಪ್ಪ ಸಮಾರಂಭದಲ್ಲಿ ಭಾಗವಹಿಸಿದ ಚಿತ್ರ (೧೯೬೮).



೧೯೮ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ 'ಲವ-ಕುಶ' ಖ್ಯಾತಿಯ ವೀರೇಂದ್ರ ಪಾಟೀಲ್ ಮತ್ತು ರಾಮಕೃಷ್ಣ ಹೆಗಡೆ ಅವರು ಶೇಂಗಾ ರುಚಿ ನೋಡುತ್ತಿರುವ ದೃಶ್ಯ. (ಗ್ರೇಟಿ)



೧೯೯ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಮತ್ತು ಕೇಂದ್ರ ಸಚಿವ ಸಂತೋಷ್ ಮೋಹನ್‌ದೇವ್,
ಭೀಮಣ್ಣ ಖಂಡ್ರೆ ಮತ್ತು ಜನಾರ್ಧನ ಪೂಜಾರಿ ಅವರು
ಬೀದರ್‌ಗೆ ಬಂದ ಸಂದರ್ಭದ ಚಿತ್ರ. (೧೯೮೮)




೦೨೦ ಬಾಬು ಜಗಜೀವನರಾಂ ಅವರೊಂದಿಗೆ ಬೀದರ್‌ನ ನಾಯಕ ಸಚಿವರಾಗಿದ್ದ ಮಾಣಿಕರಾವ ಪಾಟೀಲ್ (೧೯೬೮).




021 ಮಯೂರದ ನೃತ್ಯಕ್ಕೆ ಸಾಥ್ ನೀಡುತ್ತಿರುವ ಬಾಲೆ (1982)




022 ಭೀಕರ ಬರಗಾಲದಿಂದಾಗಿ ಗುಳೆ ಹೋಗುತ್ತಿರುವ ಜನ ಸಮೂಹ (1972)



೧೨೩ ಅಷ್ಟೂರಿನ ಐತಿಹಾಸಿಕ ಗುಂಬಜ್‌ಗಳ ಹಿನ್ನೆಲೆಯಲ್ಲಿ
ನೀರಿನ ಸಮಸ್ಯೆಯನ್ನು ಬಿಂಬಿಸುವ ಹಳೆಯ ಚಿತ್ರ (೧೯೭೩)




೨೨ ಬೀದರ್‌ನ ಮಹತ್ವಾಕಾಂಕ್ಷೆಯ ನೀರಾವರಿ ಯೋಜನೆ
'ಕಾರಂಜಾ ಜಲಾಶಯ'ದ ಕಾಮಗಾರಿ ಆರಂಭವಾದ ದಿನಗಳಲ್ಲಿನ ಚಿತ್ರ. (೧೯೭೦)



೦೨೫ ಮಾಂಜ್ರಾ ಪ್ರವಾಹದಿಂದ ಸಂತಸ್ತ್ರರಾದ ಬಂಪಳ್ಳಿ ಗ್ರಾಮದ ಜನರಿಗೆ ಆಹಾರದ ಪೊಟ್ಟಣ ನೀಡುತ್ತಿರುವಾಗ ವಿಮಾನದಿಂದ ಕ್ಲಿಕ್ಕಿಸಲಾದ ಚಿತ್ರ (೧೯೯೦)

ರಾಜ್ಯ/ರಾಷ್ಟ್ರೀಯ ಪ್ರಜಾವಾಣಿ



[illegible] ಎಲ್ಲ 224 ಶಾಸಕರ ಚಿತ್ರ

# ಈ ಫಿಲ್ಮ್ ನೆಗೆಟಿವ್‌ನ ಅಗಲವೇ 9 ಅಡಿ!

ಪ್ರಜಾವಾಣಿ ವಾರ್ತೆ

ಗುಲ್ಬರ್ಗ: ಈ ಫಿಲ್ಮ್ ನೆಗೆಟಿವ್‌ನ ಅಗಲವೇ 9 ಅಡಿ.

[illegible]

೦೨೬. ಗುಲ್ಬರ್ಗದಲ್ಲಿ ನಡೆದ ಸಮಾರಂಭದ ಬಗ್ಗೆ 'ಪ್ರಜಾವಾಣಿ' ವರದಿ. (೨೦೦೬)